ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೦
ವಿಚಾರ ಸಾಹಿತ್ಯಮಾಲೆ – ೩೧
ಭಾರತೀಯ ವಿದ್ಯಾ ಭವನದ, ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ.ವಿ. ನರಸಿಂಹಮೂರ್ತಿ

ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ

ಭವನದ ಗ್ರಂಥ ವಿಶ್ವವಿದ್ಯಾನಿಲಯ

ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತ:
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ಜಯಚಾಮರಾಜ ಒಡೆಯರ್

ಅನುವಾದ
ಎಚ್.ವಿ. ನಾಗರಾಜರಾವ್

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Vaidika Dharmadalli Atma mattu Brahma : Kannada translation of *Atman and Brahman in Vedic Religion* by **Jaya Chamaraja Odeyar;** Kannada translation by **H.V. Nagaraja Rao;** Editor-in-Chief: **Dr. Pradhan Gurudatta;** Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxiv + 46 ; Price: Rs. 10/-

ಮುದ್ರಣ : ೨೦೧೦
ಪುಟಗಳು : xxiv + ೪೬
ಬೆಲೆ : ರೂ. ೧೦/-

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ॥ ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್‌ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭರತೀಯ ವಿದ್ಯಾಭವನದಂದ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೮

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯುವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ.ದೇ.ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು
ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ ಶಿಲಾನ್ಯಾಸ

ಕಾರ್ಯಕ್ರಮ ದಿನಾಂಕ:೧೧.೦೯.೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್.ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ:೧೯.೦೮.೨೦೦೯ರ ಬೆಳಗ್ಗೆ ೧೧.೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ.ಎಸ್.ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ.ಟಿ.ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ

ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ.ಡಿ.ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವದ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ.ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ.ವಿ. ನರಸಿಂಹಮೂರ್ತಿಯವರ ದಕ್ಷಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನು ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿಕೊಟ್ಟಿರುವ ಶ್ರೀ ಎಚ್.ವಿ. ನಾಗರಾಜರಾವ್ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎನ್.ಎಸ್. ಶಾರದಾಪ್ರಸಾದ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ.ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್.ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಎಚ್.ವಿ. ನಾಗರಾಜರಾವ್ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

ಎ.ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ
ವಿಜಯ ದಶಮಿ, ಸೆಪ್ಟೆಂಬರ್ ೨೮,೧೯೬೩

ಕೆ.ಎಂ. ಮುನ್ಷಿ

ಮುನ್ನುಡಿ

ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್ ಅವರು ನಮ್ಮ ದೊರೆಗಳಲ್ಲಿ ತತ್ವಶಾಸ್ತ್ರಜ್ಞರು. ಪ್ರಖ್ಯಾತರಾದ ಅವರ ಚಿಕ್ಕಪ್ಪ ಹಿಸ್ ಹೈನೆಸ್ ಶ್ರೀ ಕೃಷ್ಣ ರಾಜ ವಡೆಯರ್ ಅವರಿಂದ ಬೆಳೆಸಲ್ಪಟ್ಟ, ಇವರು ತಮ್ಮ ಜೀವನದ ಆರಂಭದಲ್ಲೇ ಧಾರ್ಮಿಕ ಹಾಗೂ ತತ್ವಶಾಸ್ತ್ರ ಅಧ್ಯಯನದತ್ತ ಒಲವು ತೋರಿದರು. ಇದರ ಜೊತೆಗೆ ಶೃಂಗೇರಿಯ ಪರಮಪೂಜ್ಯ ಶಂಕರಾಚಾರ್ಯರಾಗಿದ್ದು ಸಮಾಧಿಸ್ಥರಾಗಿರುವ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರಿಂದ ವಿಶೇಷರಾಗಿ ಪ್ರಭಾವಿತರಾದರು. ಇಷ್ಟೇ ಅಲ್ಲದೆ ಖ್ಯಾತ ಜ್ಞಾನಿಗಳೂ ಚಿಂತಕರೂ ಆಗಿದ್ದ ಶ್ರೀ ವಿ. ಸುಬ್ರಹ್ಮಣ್ಯ ಅಯ್ಯರ್ ಅವರಿಂದಲೂ ಪ್ರಭಾವಿತರಾದರು. ಇಂತಹ ಶ್ರೇಷ್ಠ ಚಿಂತಕರ, ವಿದ್ವಾಂಸರ ಹಾಗೂ ಧಾರ್ಮಿಕ ಪುರುಷರ ಒಡನಾಟ ಮಹಾರಾಜರ ಮೇಲೆ ತೀವ್ರ ಪರಿಣಾಮ ಉಂಟುಮಾಡಿತು.

ಅದ್ವೈತ ತತ್ವಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನೂ ಪಡೆದ ಇವರು, ಅವಧೂತಗೀತವನ್ನು ಅಧ್ಯಯನ ಮಾಡಿ, ತಮ್ಮ ಸಂಶೋಧನಾಫಲವನ್ನು ದತ್ತಾತ್ರೇಯ ಎಂಬ ಗ್ರಂಥದಲ್ಲಿ ಅಳವಡಿಸಿದರು. ಅಂದಿನಿಂದ ಅವರಿಗೆ ಆಡಳಿತ ಮತ್ತು ವಿಶೇಷ ಕಾರ್ಯಗೌರವಗಳಿಂದ ದೊರಕಿದ ಅಮೂಲ್ಯ ಸಮಯವನ್ನು ಭಾರತೀಯ ಸೌಂದರ್ಯ ಮೀಮಾಂಸೆ ಹಾಗೂ ಇದಕ್ಕೆ ಸಂಬಂಧಿಸಿದ್ದ ಸಾಂಸ್ಕೃತಿಕ ವಿಷಯಗಳನ್ನು ಸಂಶೋಧನೆಗಾಗಿ ಬಳಸಿಕೊಂಡರು. ಇದರ ಜೊತೆಗೆ ಇವರು ಭಗವದ್ಗೀತೆ ಮತ್ತು ಇತರ ಆಧ್ಯಾತ್ಮಿಕ ಅಭಿಜಾತ ಗ್ರಂಥಗಳ ಆಳವಾದ ಅಧ್ಯಯನವನ್ನೂ ಮುಂದುವರಿಸುತ್ತಿದ್ದಾರೆ.

ಮುಂಬಯಿಯ ಭಾರತೀಯ ವಿದ್ಯಾಭವನವು ನಮ್ಮ ರಾಷ್ಟ್ರೀಯ ಸಂಸ್ಕೃತಿಯ ಪೋಷಣೆಗಾಗಿ ಏರ್ಪಡಿಸಿರುವ ದತ್ತಿ ಉಪನ್ಯಾಸದ ಆಶ್ರಯದ ಫಲವಾಗಿ ಈ ಪ್ರಸಕ್ತ ಪುಸ್ತಕವನ್ನು ಸಿದ್ಧಪಡಿಸಲಾಗಿದೆ. ನಮ್ಮ ವೈಶಿಷ್ಟ್ಯಪೂರ್ಣ ಪ್ರಾಚೀನ ತತ್ವಶಾಸ್ತ್ರದ ಉತ್ತುಂಗದಂತಿರುವ ಆತ್ಮ ಮತ್ತು ಬ್ರಹ್ಮರ ಅನನ್ಯತೆಯನ್ನು ಮಹಾರಾಜರು ಇಲ್ಲಿ ಪ್ರತಿಪಾದಿಸಿದ್ದಾರೆ. ಉಪನಿಷತ್ತುಗಳಿಂದ ಉತ್ತಮ ಉದಾಹರಣೆಗಳನ್ನು ನೀಡಿ, ಈ ಅನನ್ಯತೆಯ ಅರ್ಥ ಮತ್ತು ಇತರ ವಿವರಗಳನ್ನು ವಿಸ್ತಾರವಾಗಿ ತಿಳಿಸಿದ್ದಾರೆ. 'ಜ್ಞಾನದಿಂದ ಮಾತ್ರ ಮೋಕ್ಷವು ದೊರಕುತ್ತದೆ' ಎಂಬುದನ್ನು ಒತ್ತಿಹೇಳಿ ಕರ್ಮದಿಂದ ಮೋಕ್ಷಸಾಧ್ಯವಾಗುತ್ತದೆ ಎಂಬ ಮೀಮಾಂಸಕರ ಅಭಿಪ್ರಾಯವನ್ನು ಖಂಡಿಸುತ್ತಾರೆ. ಒಟ್ಟಿನಲ್ಲಿ ಮಹಾರಾಜರು ಅದ್ವೈತದ ಕಡೆಗೆ ಇರುವ ತಮ್ಮ ಪಾಂಡಿತ್ಯವನ್ನು ಇಲ್ಲಿ ತೋರಿಸಿಕೊಟ್ಟಿದ್ದಾರೆ.

ಎಲ್ಲ ಅದ್ವೈತಿಗಳೂ ಭಾವಿಸಿರುವಂತೆ. ಇವರಿಗೆ ಇದು ಕೇವಲ ತಾತ್ವಿಕ ಸಿದ್ಧಾಂತವಲ್ಲ. ಇದು ಅತ್ಯುನ್ನತ ಧರ್ಮವೂ ಕೂಡ. "ಪೂಜೆ ಮಾಡುವವನೂ ಮತ್ತು ಪೂಜಿಸಲ್ಪಡುವವನೂ, ಇಬ್ಬರೂ ಒಂದೇ ಎಂಬುದನ್ನು ತೋರಿಸಿಕೊಡುವುದೇ

ನಿಜವಾದ ಪೂಜೆ" ಎಂದು ಅವರು ಪ್ರತಿಪಾದಿಸಿದ್ದಾರೆ. "ತಾತ್ವಿಕ ಗ್ರಂಥಗಳ ಅರ್ಥ ತಿಳಿಯುವುದೂ ಮತ್ತು ಆ ಶ್ರೇಷ್ಠ ಗುರಿಯನ್ನು ಅರಿಯುವುದು, ಈ ಎರಡನ್ನೂ ಮಾಡಲು, ಸಾಧಕನಿಗೆ ಬ್ರಹ್ಮನ ಕೃಪೆಯೇ ಅತ್ಯಗತ್ಯ" ಎಂದು ಶ್ರೀ ಜಯಚಾಮರಾಜ ಒಡೆಯರ್ ವಿಶದೀಕರಿಸಿದ್ದಾರೆ. "ಅಂತಿಮ ಶ್ರೇಷ್ಠ ಸತ್ಯದೊಡನೆ ಚಿಗುರುವುದೇ, ಶಿಷ್ಯನು ಬ್ರಹ್ಮನಿಗೆ ಪ್ರಾರ್ಥನೆ ಮಾಡಲು ಮುಖ್ಯ ಕಾರಣ. ಎಷ್ಟೊಂದು ಅಮೋಘವಾದ ಚಿಂತನೆ ಮತ್ತು ಪ್ರಾರ್ಥನೆ ಇದು."

"ಧರ್ಮಗ್ರಂಥಗಳ ದಿವ್ಯದರ್ಶನವನ್ನು ಆಳವಾಗಿ ನಂಬುವುದರಿಂದ ಧರ್ಮವು ಉದಯಿಸುತ್ತದೆ" ಎಂಬ ಮಹತ್ವದ ವಿಷಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ, ಉಪನಿಷತ್ತುಗಳ ಮಹಾವಾಕ್ಯಗಳು, ಆತ್ಮ ಮತ್ತು ಬ್ರಹ್ಮನ ಐಕ್ಯತೆಯನ್ನು ಅರಿಯಲು ಸಾಧನಗಳಾಗುತ್ತವೆ. 'ಮೋಕ್ಷ' ಎನ್ನುವುದು 'ಜೀವದಲ್ಲಿ ಅಂತರ್ಗತವಾಗಿದೆ' ಎಂಬ ಅಂಶವನ್ನು ಶ್ರೀ ಜಯಚಾಮರಾಜ ಒಡೆಯರ್ ಅವರು ಪ್ರತಿಪಾದಿಸಿದ್ದಾರೆ. ಈ ಐಕ್ಯತೆಯ ಅಂತರ್ದೃಷ್ಟಿ ಉಂಟಾದೊಡನೆಯೇ ಮೋಕ್ಷವು ತೆರೆದುಕೊಳ್ಳುತ್ತದೆ. ಇದೇ ಎಲ್ಲ ಆಧ್ಯಾತ್ಮಿಕ ಅನ್ವೇಷಣೆಯ ಮುಖ್ಯ ಗುರಿ."

ಒಂದು ಸಣ್ಣ ಪರಿಧಿಯಲ್ಲಿ ಮಹಾರಾಜ ಶ್ರೀ ಜಯಚಾಮರಾಜ ವಡೆಯರ್ ಅವರು ಅದ್ವೈತದ ದೃಷ್ಟಿಯಲ್ಲಿ ವೇದಾಂತದಲ್ಲಿ ಆತ್ಮ ಮತ್ತು ಬ್ರಹ್ಮನನ್ನು ಕುರಿತು ಸರಳವಾಗಿ ಮತ್ತು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಇದು ಅವರ ಪಾಂಡಿತ್ಯ ಹಾಗೂ ನಂಬಿಕೆಯನ್ನು ದೃಢಪಡಿಸುತ್ತದೆ.

ಮದ್ರಾಸು **ಸಿ. ರಾಜಗೋಪಾಲಾಚಾರಿ**
ಮಾರ್ಚಿ ೨೫, ೧೯೬೫

ಮೂಲ ಲೇಖಕರ ನುಡಿ

೧೯೬೧ರ ಡಿಸೆಂಬರ್ ೧೧, ೧೨ ಮತ್ತು ೧೩ ರಂದು ಮುಂಬಯಿಯ ಭಾರತೀಯ ವಿದ್ಯಾಭವನದಲ್ಲಿ, ಮುನ್ಷಿ ದತ್ತಿ ಉಪನ್ಯಾಸದ ಆಶ್ರಯದಲ್ಲಿ ಲೇಖಕನು ನೀಡಿದ ಮೂರು ಉಪನ್ಯಾಸಗಳನ್ನು ಈ ಪುಸ್ತಕ ಒಳಗೊಂಡಿದೆ. ಕೆಲವು ಸಣ್ಣ–ಪುಟ್ಟ ಬದಲಾವಣೆಗಳೊಂದಿಗೆ, ಈಗ ಇದು ಮುದ್ರಿತವಾಗಿದೆ.

ಶಿಕ್ಷಣ ಮತ್ತು ಸಂಸ್ಕೃತಿಗಳ ಕ್ಷೇತ್ರಗಳಲ್ಲಿ ಶ್ರೇಷ್ಠ ಸೇವೆ ಸಲ್ಲಿಸುತ್ತಿರುವ ಭಾರತೀಯ ವಿದ್ಯಾಭವನದೊಂದಿಗೆ ಸಂಪರ್ಕ ಹೊಂದಿರುವುದು ನನಗೆ ತುಂಬ ಸಂತಸ ತಂದಿದೆ. ಭಾರತೀಯ ಸಂಸ್ಕೃತಿಯ ಪುನರುತ್ಥಾನಕ್ಕಾಗಿ ವಿದ್ಯಾಭವನದ ಸ್ಥಾಪಕರಾದ ಡಾ. ಕೆ.ಎಂ. ಮುನ್ಷಿಯವರು ಶ್ರದ್ಧೆ ಮತ್ತು ಉತ್ಸಾಹದಿಂದ ಸಲ್ಲಿಸುತ್ತಿರುವ ಸೇವೆಗಾಗಿ ಅವರಿಗೆ ನನ್ನ ನಮನವನ್ನು ಅರ್ಪಿಸುತ್ತೇನೆ. ಇಂತಹ ಘನತೆವೆತ್ತ ವಿದ್ವಾಂಸರ ಸಮೂಹದಲ್ಲಿ ಮೂರು ದಿನ ಕಾಲವಿದ್ದುದು ಹಾಗೂ ಇವರುಗಳೊಡನೆ ನಡೆಸಿದ ಚರ್ಚೆಗಳ ಹೆಚ್ಚಳ, ನನ್ನ ವಿದ್ವತ್ತಿನ ಪ್ರಯತ್ನಕ್ಕೆ ಸ್ಫೂರ್ತಿ ನೀಡಿದೆ.

ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಅಧ್ಯಯನದ ವರ್ಧನೆ, ರಕ್ಷಣೆಗಳಿಗಾಗಿ ಇಷ್ಟೊಂದು ಶ್ರದ್ಧೆಯಿಂದ ಶ್ರಮಿಸುತ್ತಿರುವ ಡಾ. ಮುನ್ಷಿಯವರಿಗೆ ನನ್ನ ಗೌರವ ಮತ್ತು ವಿಶ್ವಾಸದ ಪ್ರತೀಕವಾಗಿ, ಈ ಪ್ರಸ್ತಕವನ್ನು ಅರ್ಪಿಸಿದ್ದೇನೆ.

ಗೌರವಾನ್ವಿತರಾದ ರಾಜಾಜಿಯವರು, ಈ ಪುಸ್ತಕಕ್ಕೆ ಒಂದು ಅಮೂಲ್ಯ ಮುನ್ನುಡಿಯನ್ನು ಬರೆದಿರುವುದು ನನ್ನ ಸೌಭಾಗ್ಯ. ಇದಕ್ಕಾಗಿ ನಾನು ಅವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಜಯಚಾಮರಾಜ ಒಡೆಯರ್

ಅರಮನೆ
ಮೈಸೂರು
ಏಪ್ರಿಲ್ ೧೬, ೧೯೬೪

ಪರಿವಿಡಿ

ಮೊದಲ ಮಾತು	v
ಶುಭಾಕಾಂಕ್ಷೆ	vi
ಪ್ರಾಸ್ತಾವಿಕ ನುಡಿ	viii
ಪೀಠಿಕೆ	x
ಅರಿಕೆ	xvi
ಮೂಲ ಸಂಪಾದಕರ ಪ್ರಸ್ತಾವನೆ	xvii
ಮುನ್ನುಡಿ	xviii
ಮೂಲ ಲೇಖಕರ ನುಡಿ	xx
೧. ಆತ್ಮ ಮತ್ತು ಬ್ರಹ್ಮ	೧
೨. ಬ್ರಹ್ಮವಿದ್ಯೆಗೆ ಬೇಕಾದ ಜೀವನದ ಶಿಸ್ತು	೨೦
೩. ಆತ್ಮ ಮತ್ತು ಬ್ರಹ್ಮ ಸಂಯೋಗ	೩೬

Blank Page

ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ

೧. ಆತ್ಮ ಮತ್ತು ಬ್ರಹ್ಮ

ಭಾರತೀಯ ಸಂಸ್ಕೃತಿಯ ವಿಷಯದಲ್ಲಿ ಮುನ್ಷಿ ಪ್ರತಿಷ್ಠಾನದ ಉಪನ್ಯಾಸಗಳನ್ನು ನೀಡಲು ನನ್ನನ್ನು ಆಹ್ವಾನಿಸಿರುವುದಕ್ಕಾಗಿ ನಾನು ಡಾ. ಕೆ.ಎಂ. ಮುನ್ಷಿ ಅವರಿಗೂ ಮುಂಬಯಿಯ ಭಾರತೀಯ ವಿದ್ಯಾಭವನದ ಇತರ ಸದಸ್ಯರಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಭಾರತೀಯ ಸಂಸ್ಕೃತಿಯನ್ನು ನಾವು ಅರಿತುಕೊಳ್ಳುವಂತಾಗುವುದರಲ್ಲಿ ಡಾ. ಮುನ್ಷಿ ಅವರ ಮಹತ್ತ್ವಪೂರ್ಣ ಕೊಡುಗೆಯ ಬಗೆಗೆ ನನಗೆ ಆಳವಾದ ಅರಿವು ಇದೆ. ಧರ್ಮ, ದರ್ಶನ ಮತ್ತು ಪುರಾಣಸಾಹಿತ್ಯದಲ್ಲಿ ಅಭಿವ್ಯಕ್ತವಾಗುವ ನಮ್ಮ ಸಂಸ್ಕೃತಿಯ ಸೂಕ್ಷ್ಮಸಂವೇದನೆಗಳನ್ನು ಡಾ. ಮುನ್ಷಿಯವರು ಹೆಚ್ಚಿಸಿರುವರೆಂಬುದು ನನಗೆ ತಿಳಿದಿದೆ. 'ವೈದಿಕ ಧರ್ಮ' ಎಂದು ನಾವು ರೂಢಿಯಿಂದ ಕರೆಯುತ್ತಿರುವ ಮತ್ತು ಒಪ್ಪಿಕೊಂಡಿರುವ ಪರಿಕಲ್ಪನೆಗೆ ಸಂಬಂಧಿಸಿದ ಕೆಲವು ಸಮಸ್ಯೆಗಳ ಮಂಡನೆಯಲ್ಲಿ ವಿದ್ವತ್ತಾಗಲಿ ಮೌಲಿಕ ಚಿಂತನೆಯಾಗಲಿ ನನ್ನಲ್ಲಿದೆಯೆಂದು ಹೇಳಲಾರೆ. ಸುಳ್ಳಾಗಿದ್ದು ಕಣ್ಣು ಕೋರೈಸುವ, ಕೆಟ್ಟದ್ದೂ ಅನೈತಿಕವಾದದ್ದೂ ಆದುದು ಅಶಾಶ್ವತವೂ ತಾತ್ಕಾಲಿಕವೂ ಆದ ಎಷ್ಟೇ ದೊಡ್ಡ ಲಾಭಗಳನ್ನು ತಂದರೂ ನೈತಿಕವೂ ಒಳ್ಳೆಯದೂ ಆದುದೇ ಅಂತಿಮವಾಗಿ ಗೆಲ್ಲುವುದು ಎಂಬ ಸತ್ಯದಲ್ಲಿ ನನಗೆ ದೃಢ ವಿಶ್ವಾಸವಿದೆ ಎಂದು ಮಾತ್ರ ಪ್ರಾಯಶಃ ನಾನು ಹೇಳಬಲ್ಲೆ. ದೈವೀ ಶ್ರದ್ಧೆಗಳು ಮತ್ತು ಕ್ರಿಯೆಗಳು ಮಾತ್ರ ಯಾವಾಗಲೂ ಗೆಲುವನ್ನು ಗಳಿಸುವುವು. ಅವುಗಳಿಗೆ ವಿರುದ್ಧವಾದುವು ಎಂದೂ ಗೆಲುವನ್ನು ಗಳಿಸಲಾರವು ಎಂಬ ಸೂಕ್ತಿ ಗಯಥೆಯದು ಎಂದು ನಾನು ನಂಬಿದ್ದೇನೆ. "ಸತ್ಯಮೇವ ಜಯತೇ, ನಾನೃತಮ್" ಎಂದು ನಮ್ಮದೇ ಆದ ಉಪನಿಷತ್ತು ಘೋಷಿಸುತ್ತದೆ

ಈ ಉಪನ್ಯಾಸಗಳಲ್ಲಿ ನಾನು ವೈದಿಕ ಧರ್ಮದಲ್ಲಿ ಆತ್ಮ ಮತ್ತು ಬ್ರಹ್ಮ ಎಂಬ ಪರಿಕಲ್ಪನೆಗಳನ್ನು ನಿರೂಪಿಸಲು ಉದ್ದೇಶಿಸಿದ್ದೇನೆ. ಮೊದಲನೆಯ ಉಪನ್ಯಾಸದಲ್ಲಿ ಧರ್ಮದ ಸಾಮಾನ್ಯ ಸರ್ವೇಕ್ಷಣೆಯನ್ನು ಭಾರತದ ವಿಶೇಷ ಹಿನ್ನೆಲೆಯಲ್ಲಿ ಮಾಡಿ ಅದರ ಕೊಡುಗೆ ಏನೆಂದು ನಿರ್ಧರಿಸಲು ಪ್ರಯತ್ನಿಸಲಾಗುವುದು; ಎರಡನೆಯ ಉಪನ್ಯಾಸದಲ್ಲಿ, ಅಸ್ತಿತ್ವದ ಗುರಿಯಾದ

ಮೋಕ್ಷವನ್ನು ಗಳಿಸಲು ಪೂರ್ವಾವಶ್ಯಕವಾದ ಆಂತರಿಕ ಶಿಸ್ತಿನ ವಿಚಾರದಲ್ಲಿ ವೈದಿಕ ಧರ್ಮದ ಕೊಡುಗೆ ಏನು ಎಂಬುದರ ಬಗೆಗೆ ಒತ್ತು ನೀಡಲಾಗುವುದು. ಕೊನೆಯ ಉಪನ್ಯಾಸದಲ್ಲಿ ಭಾರತೀಯ ಆಧ್ಯಾತ್ಮಿಕ ಅನ್ವೇಷಣೆಯ ಪರಮೋದ್ದೇಶವೆನಿಸಿದ ಆತ್ಮ ಮತ್ತು ಬ್ರಹ್ಮರ ಅತ್ಯಂತಾಭೇದದ ಪರಿಕಲ್ಪನೆಯನ್ನು ಪರಿಶೀಲಿಸಲು ನಾನು ಉದ್ದೇಶಿಸಿದ್ದೇನೆ.

ಈಗ ಪ್ರಚಲಿತವಾಗಿರುವ ಭಾರತದಲ್ಲಿ ಪುನರುತ್ಥಾನದ ಕಾಲದಲ್ಲಿ, ನಮ್ಮ ಅಧ್ಯಯನದಿಂದ ಶಕ್ತಿಯನ್ನು ಸ್ಫೂರ್ತಿಯನ್ನು ಪಡೆದುಕೊಳ್ಳುವುದು ಅತ್ಯಂತ ಉಚಿತ. ಈ ಧರ್ಮಗ್ರಂಥಗಳು ಕಾಲದ ಪರೀಕ್ಷೆಯಲ್ಲಿ ಗೆದ್ದು ಉಳಿದಿವೆ. ಸಂಶಯದಲ್ಲೂ ಅಪಾಯದಲ್ಲೂ, ಕೋಪದಲ್ಲೂ ಶೋಕದಲ್ಲೂ ಭಾರತೀಯನಿಗೆ ಅವು ಎಲ್ಲ ವೇಳೆಯಲ್ಲೂ ಸಾಂತ್ವನದಾಯಕಗಳಾಗಿವೆ. ಅವುಗಳ ಪರೀಕ್ಷೆ ಯಾವ ವಾಸ್ತವ ಸ್ಥಿತಿಯಲ್ಲಾಯಿತೆಂದರೆ ಅವುಗಳನ್ನು ಬೇರೆ ಬೇರೆ ಮನೋಭಾವನೆಯ ಹಾಗೂ ವಿವಿಧ ಸಂಬಂಧಗಳ ಜನರು ಆಶ್ರಯಿಸಿದ್ದರೂ ಎಂದೂ ಆಧ್ಯಾತ್ಮಿಕ ತೃಪ್ತಿಯನ್ನು ನೀಡುವುದರಲ್ಲಿ ಅವು ವಿಫಲವಾಗಿಲ್ಲ. ಈಗ ನಾವು ಉದ್ದೇಶಿಸಿರುವ ಅಧ್ಯಯನವು ನಮ್ಮ ಧರ್ಮಗ್ರಂಥಗಳ ಮುಖ್ಯ ವಿಷಯಕ್ಕೆ ಮಾತ್ರ ಸಂಬಂಧಿಸಿರುವುದರಿಂದ, ನಾನು ಆತ್ಮ ಮತ್ತು ಬ್ರಹ್ಮ ಪ್ರಧಾನ ವಿಷಯಕ್ಕೆ ನನ್ನ ಗಮನವನ್ನು ಕೇಂದ್ರೀಕರಿಸಲು ಶಕ್ತಿಮೀರಿ ಪ್ರಯತ್ನಿಸುತ್ತೇನೆ; ಅದರ "ಶಾಖೋಪಶಾಖೆಗಳ ಕಡೆಗೆ ನಾನು ಹೋಗಲು ಬಯಸುವುದಿಲ್ಲ. ಈ ಬಗೆಗೆ ವಾಚಸ್ಪತಿ ಮಿಶ್ರನ ಈ ಉಪದೇಶವನ್ನು ಅನುಸರಿಸಲು ನಾನು ಇಷ್ಟ ಪಡುತ್ತೇನೆ. ಶ್ರೋತೃಗಳು ತಿಳಿದುಕೊಳ್ಳಬೇಕೆಂದಿರುವ ವಿಷಯಗಳ ವಿವರಣೆಯನ್ನು ನೀಡುವ ವಿದ್ವಾಂಸನ ಮಾತುಗಳನ್ನು ಬುದ್ಧಿವಂತರು ಆಸಕ್ತಿಯಿಂದ ಕೇಳುತ್ತಾರೆ. ಆದರೆ ಯಾರಿಗೂ ಬೇಡದ ತತ್ತ್ವಗಳ ಬಗೆಗೆ ಮಾತನಾಡುವವನನ್ನು ಶ್ರೋತೃಗಳು ಹುಚ್ಚನನ್ನು ನೋಡುವಂತೆ ಉಪೇಕ್ಷಿಸುತ್ತಾರಷ್ಟೆ."[೧]

ಇಂದು ಮಾನವಜನಾಂಗವು ಅತಿ ಸಂಕಟದ ಪರಿಸ್ಥಿತಿಯಲ್ಲಿರುವುದು ಪ್ರಪಂಚವು ಆಧ್ಯಾತ್ಮಿಕ ದಿವಾಳಿಯಲ್ಲಿರುವುದರ ನೇರ ಪರಿಣಾಮವೇ ಆಗಿದೆ. ಪರಿಪೂರ್ಣತೆಗಾಗಿ ಮೇಲೆ ಮೇಲೆ ಏರಲು ಯತ್ನಿಸುತ್ತಿರುವ ಮಾನವಕುಲದ ದೀರ್ಘ ಇತಿಹಾಸದ ಬೇರೆ ಯಾವುದೇ ಅವಧಿಯಲ್ಲಿ ಇಂಥ ಗಂಭೀರ ಹಾಗೂ ನಿಷ್ಕರುಣ ಸ್ಥಿತಿಯನ್ನು ಜನರು ಎದುರಿಸಬೇಕಾಗಿರಲಿಲ್ಲ. ಅತಿಭಯಂಕರ ವಿನಾಶಕಾರಿ ಶಕ್ತಿಯ

೧. "ಇಹ ಖಲು ಪ್ರತಿಪಿತ್ಸಿತಮರ್ಥಂ ಪ್ರತಿಪಾದಯನ್‌ಪ್ರತಿಪಾದಯಿತಾ ಅವಧೇಯವಚನೋ ಭವತಿ-ಪ್ರೇಕ್ಷಾವತಮ್ ಅಪ್ರತಿಪಿತ್ಸಿತಮರ್ಥಂ ತು ಪ್ರತಿಪಾದಯನ್ ನಾಯಂ ಲೌಕಿಕೋ ನಾಪಿ ಪರೀಕ್ಷಕ ಇತಿ ಪ್ರೇಕ್ಷಾವದ್ಭಿರುನ್ಮತ್ತ ವದುಪೇಷ್ಯೇತ." (ತತ್ತ್ವ ಕೌಮುದೀ, ಪೀಠಿಕೆ, ಶಾಸ್ತ್ರವಿಷಯಕ ಜಿಜ್ಞಾಸಾವತರಣಮ್)

ಬಾಂಬುಗಳನ್ನು ಸಿಡಿಸುವುದರಲ್ಲಿ ನಮಗಿರುವ ಅತ್ಯುತ್ಸಾಹದಿಂದಲೂ, ಮನುಷ್ಯರ ಯಾತನೆಯ ಬಗೆಗೆ ನಮ್ಮ ತಿರಸ್ಕಾರಪೂರ್ಣ ಸ್ಥಿತಿಯನ್ನು ಮುಟ್ಟಿದ್ದೇವೆ ಎಂದರೆ ಚಿಂತನಶೀಲರಾದ ಜನರೆಲ್ಲರೂ 'ಈ ಸಂಕಟ ಪರಿಸ್ಥಿತಿಯಲ್ಲಿ ಯಾವುದೇ ರೀತಿಯ ಜೀವಿಗಳು ಈ ಭೂಗ್ರಹದ ಮೇಲೆ ಬದುಕಿ ಉಳಿಯುವುವೇ' ಎಂದು ಸಂದೇಹ ಪಡುತ್ತಿದ್ದಾರೆ. ಅಪಾಯಕಾರಿ ಸನ್ನಿವೇಶವನ್ನು ಪ್ರತಿನಿಧಿಸದಿರುವ ಯಾವ ಸ್ಥಳವೂ ಇಂದಿನ ಪ್ರಪಂಚದಲ್ಲಿಲ್ಲ. ಇಡೀ ಜಗತ್ತು ಈ ಅಪಾಯದ ಸುಳಿಯೊಳಕ್ಕೆ ಸೆಳೆಯಲ್ಪಡುತ್ತಿದೆ. ಪ್ರಕೃತಿಯ ಮೇಲೆ ವಿಜ್ಞಾನವು ಸಾಧಿಸಿರುವ ಗೆಲುವಿನಲ್ಲಿ ಎಷ್ಟೋ ವಿಸ್ಮಯಕಾರಿ ಸಿದ್ಧಿಗಳಿದ್ದರೂ, ಆ ವಿಜ್ಞಾನವು ಜೀವದ ರಹಸ್ಯವನ್ನೂ, ಅದರಲ್ಲೂ ವಿಶೇಷವಾಗಿ ಮಾನವ ಜೀವನದ ರಹಸ್ಯವನ್ನು ಹೊರಗೆಡವುದರಲ್ಲಿ ಸೋತಿದೆ. ಟೆಲಿಫೋನ್, ಟೆಲಿವಿಶನ್, ವೈರ್‌ಲೆಸ್, ವಿಮಾನ, ರೇಡಿಯೋ, ಸ್ಪುಟ್ನಿಕ್ ಇತ್ಯಾದಿಗಳ ಆವಿಷ್ಕಾರದಿಂದ ಜಗತ್ತಿನ ದೂರತ್ವಗಳು ಕುಗ್ಗಿವೆ. ಅದೇ ರೀತಿಯಲ್ಲಿ ಕ್ಯಾಥೇ ಮತ್ತೂ ಮಾಸ್ಕೋ, ಭಾರತ, ದಕ್ಷಿಣ ಆಫ್ರಿಕಾ, ಅಮೆರಿಕಾ, ಆಂಟಿಪೋಡ್ಸ್ ಇವೆಲ್ಲ ಹತ್ತಿರ ಹತ್ತಿರ ಬಂದು ಒಂದು ಇನ್ನೊಂದರೊಡನೆ ಎದುರುಬದುರು ನಿಲ್ಲುವಂತಾಗಿದೆ.

ಈ ದೃಷ್ಟಿಯಲ್ಲಿ ಯಾರನ್ನೂ ಏಕಾಕಿ ಎಂದಾಗಲಿ, ಬೇರ್ಪಟ್ಟವರು ಎಂದಾಗಲಿ ನೋಡಲಾಗುವುದಿಲ್ಲ; ಎಲ್ಲರೂ ಒಟ್ಟಿಗೆ ಅಂಟಿಕೊಂಡಿದ್ದಾರೆ. ಭೌಗೋಳಿಕ ದೃಷ್ಟಿಯಿಂದ ಮತ್ತು ಜಾಗತಿಕ ರಾಜಕೀಯದ ದೃಷ್ಟಿಯಿಂದ ಪ್ರಪಂಚವನ್ನು ಭಾಗಶಃ ವಿಂಗಡಿಸಿ ನೋಡಲು ಇಂದು ಸಾಧ್ಯವಿಲ್ಲ. ಇಂದು ಎಲ್ಲವೂ ಒಟ್ಟಿಗೆ ಪರಸ್ಪರ ನಿಕಟವಾಗಿ ಹೆಣೆಯಲ್ಪಟ್ಟಿವೆ. ಸಾಗಾಣಿಕೆಯ ಕ್ಷೇತ್ರದಲ್ಲಿ ಅಥವಾ ಭೌತಿಕ ಸಂಪರ್ಕದಲ್ಲಿ ಮಾತ್ರವಲ್ಲ ಉಳಿದ ಸಕಲ ಕ್ಷೇತ್ರಗಳಲ್ಲೂ, ಸಾಧ್ಯವೆಂದು ಅಥವಾ ಆವಶ್ಯಕವೆಂದು ಊಹಿಸಿರದಷ್ಟು ಪರಸ್ಪರ ಹತ್ತಿರಕ್ಕೆ ಒತ್ತಾಯದಿಂದ ತರಲ್ಪಟ್ಟಿದ್ದೇವೆ, ಇದಕ್ಕಾಗಿ ನಾವು ಸಿದ್ಧರೂ ಆಗಿಲ್ಲ. ಪ್ರಕೃತಿಯ ಮೇಲೆ ಮನುಷ್ಯನು ಸಾಧಿಸಿರುವ ಗೆಲುವು ವಿಜಯದ ಹಾಗೂ ಸೌಖ್ಯದ ಭಾವನೆಯನ್ನು ತಂದುಕೊಟ್ಟಿರುವುದಾದರೂ, ಅದು ಭದ್ರತೆಯನ್ನೂ ಶ್ರದ್ಧೆಯನ್ನೂ ಅದರ ಬೆಲೆಯನ್ನಾಗಿ ತೆಗೆದುಕೊಂಡು ಮನುಷ್ಯನನ್ನು ಇಂದು ಹೆಸರಿಸಲಾಗದ ಭೀತಿಗಳಿಗೆ ಬಲಿಪಶುವನ್ನು ಮಾಡಿದೆ. ಈ ಒಂದು ಅತಿ ಬೃಹತ್ತಾದ ಆಧ್ಯಾತ್ಮಿಕ ಸಂಕಟದಲ್ಲಿ ಜಗತ್ತಿನ ದಿವಾಳಿತನವು ಕಾಣಿಸಿಕೊಳ್ಳುತ್ತಿದೆ. ನಿಜವಾದ ಧರ್ಮ ಮತ್ತು ಆಧ್ಯಾತ್ಮಿಕ ಜೀವನದ ಸಾಕ್ಷಾತ್ಕರಣಗಳು ಮಾತ್ರ ಮಾನವನ ವಿಚ್ಛಿದ್ರ ವ್ಯಕ್ತಿತ್ವವನ್ನು ಮತ್ತೆ ಒಂದುಗೂಡಿಸಲು ಮತ್ತು ಮಾನವಜನಾಂಗವನ್ನು ಸರಿಪಡಿಸಲಾಗದ ಅಧಃಪತನದಿಂದ ಉಳಿಸಿ ಕಾಪಾಡಲು ಸಮರ್ಥ ಪ್ರಭಾವಶಾಲಿ ಸಾಧನಗಳು ಎಂದು ನನ್ನ ಮನಸ್ಸಿಗೆ ತೋರುತ್ತದೆ. ತಾರ್ಕಿಕ

ಚಿಂತನೆ ಮತ್ತು ಸತ್ಯದರ್ಶನದ ಆಧಾರದ ಭಕ್ತಿಯ ಮಾರ್ಗಕ್ಕೆ ಹಿಂದಿರುಗುವುದೊಂದು ಮಾತ್ರ ಮಾನವಕುಲವನ್ನು ಸನ್ನಿಹಿತವಾಗುತ್ತಿರುವ ಪ್ರಳಯದಿಂದ ರಕ್ಷಿಸಬಲ್ಲುದು.

ಇಂದು ನಮಗೆ ಅತ್ಯಂತ ತುರ್ತಾಗಿ ಬೇಕಾಗಿರುವ ವಿವೇಕವನ್ನೂ ಶಾಂತಿಯ ಭಾವನೆಯನ್ನೂ ಧರ್ಮವು ಮಾತ್ರ ಕೊಡಬಲ್ಲದು ಎಂದು ಅರಿತುಕೊಳ್ಳದಿರುವುದೇ ನಮ್ಮ ಯುಗದ ಅತ್ಯಂತ ದೊಡ್ಡ ಮೂರ್ಖತ್ವದ ತಪ್ಪು ಕೆಲಸವಾಗಿದೆ. ಧರ್ಮವನ್ನಿಂದು ಶೀತದ ಕೋಣೆಗೆ ಒಗೆಯಲಾಗಿದೆ ಎಂದೂ ಹೇಳಬಹುದೇನೋ. ಇದು ನಮ್ಮ ಯುಗದ ದೊಡ್ಡ ಆತ್ಮಘಾತಕ ತಪ್ಪು ಕೆಲಸ. ಮೊಟ್ಟ ಮೊದಲನೆಯದಾಗಿ ಧರ್ಮದ ಅನುಯಾಯಿಗಳಲ್ಲಿ ಅನೇಕರು ಅದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ಎರಡನೆಯದಾಗಿ, ನಮ್ಮ ಇಂದಿನ ಪ್ರಚಲಿತ ಭೌತಿಕವಾದದ ದೃಷ್ಟಿಯಲ್ಲಿ ಧರ್ಮದ ಆವಶ್ಯಕತೆಯನ್ನೂ ಯಾರೂ ಸೂಕ್ಷ್ಮವಾಗಿ ಅನುಭವಿಸುತ್ತಿಲ್ಲ. ಇದರಿಂದ ಆಧ್ಯಾತ್ಮಿಕ ಮರುಹುಟ್ಟಿಗಿಂತಲೂ ಹಣ ಮತ್ತು ಭೌತಿಕ ಸಂಪತ್ತಿನಲ್ಲಿ ಆಸಕ್ತನಾಗಿರುವ 'ಅರ್ಥದಾಹಿ ಮನುಷ್ಯ'ನೆಂಬ ಹೊಸ ಜೀವ ಪ್ರಕಾರವು ಜನಿಸಿದೆ. ಇದು ಇರುವ ಧರ್ಮವೆಲ್ಲ ಭೌತವಾಗಿ ಕುಂದಿಹೋಗಿದೆ. ಇದರ ಬಗೆಗೆ ಪ್ರೊ. ಎ. ಎನ್. ವೈಟ್‌ಹೆಡ್ ಸರಿಯಾಗಿಯೇ ಹೇಳುತ್ತಾರೆ "ಆಧುನಿಕ ಧಾರ್ಮಿಕ ಚಿಂತನೆಯೊಳಕ್ಕೆ ಹೊಕ್ಕಿರುವ ಧಾರ್ಮಿಕೇತರ ಉದ್ದೇಶವೇನೆಂದರೆ ಅನುಕೂಲಕರ ಆಧುನಿಕ ಸಮಾಜವನ್ನು ಸಂಘಟಿಸಲು ಇರುವ ಇಚ್ಛೆ. ಜೀವನವನ್ನು ಕ್ರಮಬದ್ಧವಾಗಿ ಮಾಡಲು ಧರ್ಮವು ಪ್ರಭಾವಶಾಲಿ ಸಾಧನ ಎಂದು ಅಲ್ಲಿ ತೋರಿಸಲಾಗಿದೆ. ಸರಿಯಾದ ನಡತೆಗೆ ಅನುಮೋದನೆಯನ್ನು ಕೊಡುವ ಅದರ ಕ್ರಿಯೆಯ ಮೇಲೆ ಧರ್ಮದ ಹಕ್ಕುಗಳನ್ನು ನೆಲೆಗೊಳಿಸಲಾಗಿದೆ. ಸರಿಯಾದ ನಡತೆಯ ಪ್ರಯೋಜನವೂ ಬೇಗನೆ ಸಂತೋಷಗೊಳಿಸುವ ಸಾಮಾಜಿಕ ಸಂಬಂಧಗಳ ಮಟ್ಟಕ್ಕೆ ಅವನತಿಯನ್ನು ಕಾಣುತ್ತದೆ. ಇಲ್ಲಿ ನಮಗೆ ಸಿಗುವುದು ಧಾರ್ಮಿಕ ವಿಚಾರಗಳ ಸೂಕ್ಷ್ಮ ಅವನತೀಕರಣ, ಏಕೆಂದರೆ ಅವು ತೀವ್ರತರವಾದ ನೈತಿಕ ಅಂತಃಸ್ಫುರಣಗಳ ಪ್ರಭಾವದ ಅಡಿಯಲ್ಲಿ ಕ್ರಮಿಕ ಶುದ್ಧೀಕರಣಕ್ಕೆ ಒಳಗಾಗಿ ಬಿಡುತ್ತವೆ." ಧರ್ಮವೆಂದರೆ ಸಾಕ್ಷಾತ್ಕಾರಣ, ಸಾಮಾಜಿಕ ಹತೋಟಿಯ ಸಾಧನ ಮಾತ್ರ ಅಲ್ಲ ಎಂಬ ವಾಸ್ತವಾಂಶದ ಬಗೆಗೆ ಇದು ಸೂಚನೆಯನ್ನು ನೀಡುತ್ತದೆ. ನಮ್ಮ ದೇಶದ ತತ್ತ್ವಶಾಸ್ತ್ರಜ್ಞರು ಹೇಳುವಂತೆ ಅದೊಂದು 'ದರ್ಶನ'. ಪ್ರೊ. ವೈಟ್‌ಹೆಡ್‌ನ ಮಾತುಗಳಲ್ಲಿ ಹೇಳಬೇಕೆಂದರೆ "ಧರ್ಮವು ಪ್ರತ್ಯಕ್ಷವಾಗಿರುವ ವಸ್ತುಗಳ ನಿರಂತರ ಪ್ರವಾಹದ ಆಚೆಗೂ, ಹಿಂದೆಯೂ ಮತ್ತು ಒಳಗೂ ಇರುವ ತತ್ತ್ವದ ನೋಟ. ಆ ತತ್ತ್ವ ಸತ್ಯವಾಗಿದ್ದರೂ ಸಾಕ್ಷಾತ್ಕರಿಸಿಕೊಳ್ಳಬೇಕಾದುದು; ಅದು ಅತಿದೂರದ ಒಂದು

ಸಾಧ್ಯತೆಯಾದರೂ ವರ್ತಮಾನದ ವಾಸ್ತವಗಳಲ್ಲೆಲ್ಲ ಅತಂತ್ಯ ಮಹತ್ತ್ವವುಳ್ಳದ್ದು; ಅಶಾಶ್ವತವಾದ ಎಲ್ಲ ವಸ್ತುಗಳಿಗೂ ಅದೇ ಅರ್ಥವನ್ನು ಕೊಡುವುದಾದರೂ ಗೋಚರತೆಯಿಂದ ದೂರ ನಿಲ್ಲುವುದು; ಅದನ್ನು ಹೊಂದುವುದು ಆತ್ಯಂತಿಕ ಒಳಿತನ್ನು ತರುವುದಾದರೂ ಅದು ಹೊಂದಲು ಮಾಡುವ ಎಲ್ಲ ಪ್ರಯತ್ನಗಳಿಗೆ ಅತೀತವಾದುದು; ಅದೇ ಅಂತಿಮ ಆದರ್ಶ, ಆದರೆ ಅದರ ಅನ್ವೇಷಣೆ ಯಾವ ಭರವಸೆಗೂ ನಿಲುಕದು."

ಪವಿತ್ರ ಗ್ರಂಥಗಳಲ್ಲಿರುವ ಸತ್ಯಾವಿಷ್ಕರಣದಲ್ಲಿ ಆಳವಾದ ಮತ್ತು ಸಹಜವಾದ ನಂಬಿಕೆಯಿಂದ ಧರ್ಮವು ಹುಟ್ಟುವುದು. ಈ ವಿಶ್ವದಲ್ಲಿ ಇಂದ್ರಿಯಾತೀತವಾದ ಮತ್ತು ಸರ್ವಾಂತರ್ಯಾಮಿಯಾದ ತತ್ತ್ವವೊಂದಿದೆ. ಅದು ಜಗತ್ತನ್ನು ನಡೆಸುವ ಮತ್ತು ಪರಿಪೂರ್ಣತೆಗೆ ಒಯ್ಯುವ ಕರ್ತೃ ಎಂದು ಅರಿತುಕೊಳ್ಳುವ ಗಂಭೀರ ನಿಶ್ಚಯದಿಂದ ಹುಟ್ಟುವ ಶ್ರದ್ಧೆ. ಒಂದು ಅತಿವಿರಳ ಅನುಭವದಿಂದ ಬೆಳಗಿಸಲ್ಪಟ್ಟು ಅದನ್ನೇ ಆಧಾರವಾಗಿ ಹೊಂದಿರುವ ಶ್ರದ್ಧೆಯೇ ಆ ಧರ್ಮ. ಆ ಅನುಭವದ ಸಾಧ್ಯತೆಯಲ್ಲಿರುವ ಶ್ರದ್ಧೆ ಸಾಕಷ್ಟು ಒಳ್ಳೆಯದನ್ನು ಮಾಡುತ್ತದೆ; ಶ್ರದ್ಧೆಯ ಪರೀಕ್ಷೆಯು ಒಳಗಾಗಿರುವ ಅಂತರ್ಮುಖಿಯಾದ ಬೆಳಕು. ಆ ಬೆಳಕು ಸದಾ ಒಳಗೇ ಪ್ರಜ್ವಲಿಸುತ್ತಿರುತ್ತದೆ. 'ಜ್ಯೋತಿಷಾಂಜ್ಯೋತಿಃ'[೨], ಅದು ನಮ್ಮನ್ನು ನಮ್ಮ ಪರಮ ಗಮ್ಯದ ಕಡೆಗೆ ನಡೆಸಿಕೊಂಡು ಹೋಗುತ್ತದೆ; ಆ ಗಮ್ಯವೇ ಶಾಶ್ವತ ಬ್ರಹ್ಮವಸ್ತುವಿಗಿಂತ ಬೇರೆಯಲ್ಲ ಎಂಬ ಅರಿವು, ಸಾಕ್ಷಾತ್ಕಾರ. ಆ ಪ್ರಕಾಶದ ಪರಿಣಾಮವಾದ ಅಂತರ್ಮುಖಿ ದರ್ಶನವು ಗಾಢವಾದ ಸಂಚಲನವನ್ನು ಉಂಟು ಮಾಡುವ ಆನಂದಮಯ ಅನುಭವ. ಅದು ಶ್ರದ್ಧೆಯಿಂದ ಹುಟ್ಟುವ ದೃಢವಿಶ್ವಾಸ. ಅದೇ ಶ್ರದ್ಧೆಯ ಅನುಭೂತಿಯ ಪ್ರಕಾಶನ. ಈ ಪ್ರಬಲವಾದ ಮತ್ತು ಶಕ್ತಿ ತುಂಬಿದ ವಿಚಾರಗಳನ್ನು ಇಂದಿನ ಸಮಕಾಲೀನ ವಿಚಾರಧಾರೆಗಳು ಉಪೇಕ್ಷಿಸಿ ನಮ್ಮನ್ನು ಒಂದು ವಿಚಿತ್ರ ನಿಷ್ಕ್ರಿಯತೆಯ ಕಡೆಗೆ ಕರೆದೊಯ್ಯುತ್ತಿವೆ. ಈ ದೃಷ್ಟಿಯಲ್ಲಿ ನಮಗಿಂತ ಪ್ರಾಚೀನ ಪೀಳಿಗೆಗಳು ಹೆಚ್ಚು ಅದೃಷ್ಟಶಾಲಿಗಳಾಗಿದ್ದವು.

'ಪ್ರಕೃತಿಪೂಜೆ' 'ವರ್ಷಿಪ್ ಆಫ್ ನೇಚರ್' ಎಂಬ ಹೆಸರಿನ ಗಿಫರ್ಡ್ ಉಪನ್ಯಾಸಗಳಲ್ಲಿ ಸರ್ ಜೇಮ್ಸ್ ಫ್ರೇಜರ್ ಹೀಗೆನ್ನುತ್ತಾನೆ: "ಬೋಧನೆಯಿಂದ ಬೆಳಕನ್ನು ಕಂಡ ಮಾನವಜನಾಂಗದ ಒಂದು ಭಾಗವು ಯಾವ ನಂಬಿಕೆಗಳನ್ನು ಸಂಪ್ರದಾಯಗಳನ್ನು ಮಿಥ್ಯಾ ಮತ್ತು ಅವಿವೇಕಗ್ರಸ್ತ ಎಂದೋ ಅಥವಾ ಪೈಶಾಚಿಕ, ವಿಷಮಯ ಮತ್ತು ಕ್ರೂರ ಎಂದೋ ಕರೆದು ತಿರಸ್ಕರಿಸಿದೆಯೋ, ಅವುಗಳ

೨. ಇಲ್ಲಿ ನನ್ನ ಮನಸ್ಸಿನಲ್ಲಿರುವುದು ಲಿಂಗಪುರಾಣದ ಒಂದು ಕಥೆ. ಯಾವುದರಲ್ಲಿ ಎಲ್ಲವೂ ಲೀನವಾಗುವುದೋ ಮತ್ತು ಯಾವುದನ್ನು ಅಳೆಯುವುದಾಗಲಿ ಲೆಕ್ಕ ಮಾಡುವುದಾಗಲಿ ಸಾಧ್ಯವಾಗದೋ ಆ ಶಾಶ್ವತ ಪ್ರಕಾಶದ ಜ್ಯೋತಿಯು ಅಲ್ಲಿ ಅನಾವರಣಗೊಳಿಸಲ್ಪಟ್ಟಿದೆ.

ವರ್ಣನೆಯು ಬೇಸರ ಹುಟ್ಟಿಸುವುದೂ ಜುಗುಪ್ಸಾದಾಯಕವೂ ಆಗುವುದೆಂಬುದನ್ನು ನಾನು ಬಲ್ಲೆ. ವಿಜ್ಞಾನದ ಇತ್ತೀಚಿನ ಮುನ್ನಡೆ ಹಾಗೂ ದೇವಶಾಸ್ತ್ರದ ಇತ್ತೀಚಿನ ಮುನ್ನಡೆ ಅಥವಾ ಹಿನ್ನಡೆಯ ಸಂಬಂಧಗಳ ಬಗೆಗೆ ನಾನಾಗಲೇ ಸೂಚಿಸಿರುವ ಚರ್ಚೆ ಸ್ವಾಭಾವಿಕವಾಗಿ ಉಂಟಾಗುವ ಆಸಕ್ತಿಯಂತೂ ಆ ವರ್ಣನೆಯಲ್ಲಿರುವುದೇ ಇಲ್ಲ. ಆದರೂ ಆ ಕಚ್ಚಾ ಚಿಂತನೆಗಳ ಮತ್ತು ತರ್ಕವಿರುದ್ಧ ಆಚರಣೆಗಳ ಕಥನವು ಸಂಪೂರ್ಣವಾಗಿ ಆಸಕ್ತಿರಹಿತ ಮತ್ತು ಉಪದೇಶಶೂನ್ಯವಾಗಿರಲಾರದೆಂದು ನಾನು ನಂಬಿದ್ದೇನೆ. ಏಕೆಂದರೆ ಈ ಪೀಳಿಗೆಯ ನಾವು ಜ್ಞಾನದ ಮತ್ತು ವಿವೇಕದ ಬೆಳಕೆಂದು ಯಾವುದನ್ನು ತಿಳಿದಿದ್ದೇವೋ ಅದರೆಡೆಗೆ ಅಜ್ಞಾನ ಮತ್ತು ಮೂಢನಂಬಿಕೆಗಳ ಮುಸುಕಿದ ಮಂಜಿನ ಮೂಲಕ ತೆವಳಿ ದಾರಿಯನ್ನು ಕಾಣಲು ನಮ್ಮ ಪೂರ್ವಜರು ಎಷ್ಟು ಪ್ರಯತ್ನಗಳನ್ನು ಮಾಡಿರಬಹುದು ಎಂಬ ಚಿತ್ರವನ್ನು ಕಲ್ಪಿಸಿಕೊಳ್ಳಲು ಆ ವರ್ಣನೆಯು ನಮಗೆ ಸಾಮರ್ಥ್ಯವನ್ನು ನೀಡುತ್ತದೆ. ಅಂದಿನ ಮಾನವರು ದುರ್ಗಮ ಎನಿಸಿದ್ದ ಕಾಡಿನಲ್ಲಿ ತಮ್ಮ ದಾರಿಯನ್ನು ತಾವೇ ನಿರ್ಮಿಸಿದ ಮುಂದಾಳುಗಳು. ಅವರ ಅನಂತರ ಬಂದವರಿಗೆ ಅವರು ಮಾರ್ಗವನ್ನು ಹಸನು ಮಾಡಿದರು. ಅವರ ಹೆಜ್ಜೆಗಳ ಮೇಲೆ ನಡೆಯುತ್ತಾ ಅವರು ಪರಿಶ್ರಮ ಮತ್ತು ನೋವಿನಿಂದ ಬಿತ್ತಿದ ಬೆಳೆಯ ಫಸಲನ್ನು ನಾವು ಇಂದು ಸುಲಭವಾಗಿ ಕುಯ್ದುಕೊಳ್ಳುತ್ತಿದ್ದೇವೆ. ಅವರು ನಮಗೆ ಸಲ್ಲಿಸಿರುವ ಅಂದಾಜು ಮಾಡಲೂ ಅಶಕ್ಯವಾದ ಸೇವೆಗಾಗಿ ನಾವು ಅವರಿಗೆ ಕೃತಜ್ಞತೆಯ ಋಣವನ್ನು ತೀರಿಸಬೇಕಾಗಿದೆ. ಅವರ ತಪ್ಪುಗಳ ಬಗೆಗೆ ನಾವು ಮಾಡಲು ಅತಿಯಾಗಿ ಸಿದ್ಧರಾಗಿರುವ ಕಠೋರ ತೀರ್ಪುಗಳನ್ನು ಆ ಕೃತಜ್ಞತೆಯು ಸ್ವಲ್ಪ ಮೃದುಗೊಳಿಸಬೇಕು. ಆ ಬಗೆಗೆ ಆತುರದಿಂದ ನಾವು ಮಾಡುವ ತೀರ್ಮಾನವು ಅವರ ತಪ್ಪುಗಳನ್ನು ಮೂರ್ಖತೆಯೆಂದೋ ಅಪರಾಧವೆಂದೋ ನಿಂದನೆಗೆ ಒಳಪಡಿಸಬಹುದು. ಸತ್ಯದ ಮತ್ತು ಒಳ್ಳೆಯದರ ಅನ್ವೇಷಣೆಗಾಗಿ ಅವರು ಮಾಡಿದ ದೀರ್ಘಕಾಲದ ಅಲೆದಾಟಗಳನ್ನೂ ನಾನಾ ರೀತಿಯ ವಿಕೃತಿಗಳನ್ನೂ ಕಂಡು ನಾವು ಕಲಿಯಬೇಕಾದ ಪಾಠವು ಗರ್ವಕ್ಕಿಂತ ವಿನಯವನ್ನು ಹೆಚ್ಚಾಗಿ ನಮ್ಮಲ್ಲಿ ಉಂಟು ಮಾಡಬೇಕು. ಮನುಷ್ಯನ ಸ್ವಭಾವವು ಎಷ್ಟು ದುರ್ಬಲ ಮತ್ತು ಚಂಚಲ; ವಿಶ್ವದ ಊಹಾತೀತ ಅನಂತತೆಗಳಲ್ಲಿ ಎಲ್ಲೋ ನೇತಾಡುತ್ತಿರುವ ಒಂದು ಮಾನವಕುಲದ ಅಸ್ತಿತ್ವವು ಎಂಥ ತೆಳುವಾದ ದಾರವನ್ನು ಅವಲಂಬಿಸಿ ತೂಗಾಡುತ್ತಿದೆ ಎಂಬುದನ್ನು ಆ ಪಾಠವು ನಮಗೆ ಕಲಿಸಬೇಕು.[೩]

ಪ್ರಪಂಚದ ಬಗೆಗೆ ಇರುವ ಎರಡು ಪ್ರಮುಖ ದೃಷ್ಟಿಕೋನಗಳನ್ನು ಪಾಶ್ಚಾತ್ಯ

೩.*The Worship of Nature*: Sir. James Frazer, Vol. 1, pp.13-14

ಮತ್ತು ಪೌರಸ್ತ್ಯ ಎಂದು ಬಣ್ಣಿಸುವುದು ಅತಿ ಸಾಮಾನ್ಯವಾಗಿದೆ. ಪ್ರತಿಯೊಂದು ವಸ್ತುವಿಗೂ ಒಂದು ಹಣೆಪಟ್ಟಿಯನ್ನು ಹಚ್ಚುವ ಹುಚ್ಚಿನ ಈಚಿನ ದಿನಗಳಲ್ಲಿ ಪಾಶ್ಚಾತ್ಯರ ಪ್ರಪಂಚದೃಷ್ಟಿಯನ್ನು ಭೌತಿಕದೃಷ್ಟಿ ಎಂದೂ ಪೌರಸ್ತ್ಯರ ದೃಷ್ಟಿಯನ್ನು ಆಧ್ಯಾತ್ಮಿಕ ದೃಷ್ಟಿ ಎಂದೂ ಪಟ್ಟಿಹಚ್ಚಿ ಕರೆಯುವುದು ವಾಡಿಕೆಯಾಗಿದೆ. ಇದು ಸುಳ್ಳು ತಳಹದಿಯ ಮೇಲೆ ನಿಂತಿರುವ ವಾಡಿಕೆ. ಅನೇಕ ಸುಲಭಗ್ರಾಹ್ಯ ಸರಳ ಸಾಮಾನ್ಯೀಕರಣಗಳಂತೆ, ಈ ಹೇಳಿಕೆಯಲ್ಲೂ ದೊಡ್ಡ ವಿಷಯಗಳನ್ನು ತೇಲಿಸಿ ಬಿಡಲಾಗಿದೆ. ಪ್ರಾಯಶಃ ಈ ಹೇಳಿಕೆಯಲ್ಲಿ ಇಷ್ಟು ಮಾತ್ರ ಸತ್ಯವಿದೆಯೆಂದು ನಾವು ಒಪ್ಪಿಕೊಳ್ಳಬಹುದು. ಏನೆಂದರೆ ಹೆಚ್ಚು ಕಡಿಮೆ, ಪಶ್ಚಿಮವು ಆತ್ಮಕ್ಕೆ ಸಂಬಂಧಿಸಿದ ಆಂತರಿಕ ವಿಷಯಗಳಿಗಿಂತ ಭೌತ ಪ್ರಪಂಚಕ್ಕೆ ಸಂಬಂಧಿಸಿದ ಹೊರಗಿನ ವಸ್ತುಗಳಿಗೆ ಹೆಚ್ಚು ಗಮನವನ್ನಿತ್ತಿದೆ. ಅದಕ್ಕೆ ಸಮಾನವಾಗಿ ಪೂರ್ವ ದೇಶದ ಮೇಲೂ ಅದು ಜೀವನದ ಆಂತರ ವಿಷಯಗಳ ಬಗೆಗೆ ಅತಿಯಾದ ಆಸಕ್ತಿಯಿಂದ ಹೊರಗಿನ ಭೌತ ಪ್ರಪಂಚದ ಅಸ್ತಿತ್ವವನ್ನೇ ಮರೆತುಬಿಟ್ಟಿತು ಎಂಬ ಆಪಾದನೆಯನ್ನು ಹೊರಿಸಬಹುದು. ಆದ್ದರಿಂದ ಇಂಥ ಸಾಮಾನ್ಯೀಕರಣಗಳು ಯಾರಿಗೂ ಏನೂ ಒಳ್ಳೆಯದನ್ನು ಮಾಡಲಾರವು, ಆ ವಾದಗಳ ಸಮರ್ಥಕರಿಗಂತೂ ಅಲ್ಲವೇ ಅಲ್ಲ. ಈಗ ಬೇಕಾದುದೇನೆಂದರೆ ಪರಸ್ಪರರ ದೃಷ್ಟಿಕೋನಗಳ ಹೆಚ್ಚು ಆಳವಾದ ತಿಳಿವು ಮತ್ತು ದೋಷನಿವಾರಕಗಳ ಅನ್ಯೋನ್ಯ ವಿನಿಮಯ.

ಸಾಧಾರಣ ಜೀವನದ ಕೆಲವು ಶಬ್ದಗಳನ್ನು ತೆಗೆದುಕೊಂಡು ಪೂರ್ವ-ಪಶ್ಚಿಮಗಳಲ್ಲಿ ಅವುಗಳ ಬಳಕೆಯ ಪರಿಣಾಮಗಳನ್ನು ಪರಿಶೀಲಿಸಿ ನೋಡೋಣ. ಧರ್ಮ ಮತ್ತು ಮಾನವ ('Religion' and 'man') ಎಂಬ ಎರಡು ಶಬ್ದಗಳನ್ನು ಪರಿಗಣಿಸೋಣ. ರುಡಾಲ್ಫ್ ಓಟ್ಟೋ[೪] ಹೇಳುವ ಪ್ರಕಾರವಾಗಿ ಧರ್ಮವು ಒಂದು ವಿಧವಾದ ಬೆರಗು ಮತ್ತು ಭಕ್ತಿಭಾವ; ಜನರು ಅಂಥ ಭಾವನೆಯನ್ನು ಉಕ್ಕಿಸುವ ಯಾವುದೋ ವಸ್ತುವಿನೊಡನೆ ಮುಖಾಮುಖಿಯಾಗಿ ನಿಂತಾಗ ಅದನ್ನು ಅನುಭವಿಸುತ್ತಾರೆ. ಗೀತೆಯ ಭಾಷೆಯಲ್ಲಿ ಹೇಳಬೇಕೆಂದರೆ ಅದು ಅದ್ಭುತ ಅಥವಾ ಆಶ್ಚರ್ಯವನ್ನು ಉಕ್ಕಿಸುವ ವಸ್ತು; ವಿಶ್ವರೂಪದರ್ಶನವನ್ನು ಅನುಗ್ರಹವಾಗಿ ಪಡೆದಾಗ ಅರ್ಜುನನಲ್ಲಿ ಉಕ್ಕಿದ ಭಾವನೆ ಈ ರೀತಿಯದು.

ಈ ಶಬ್ದವನ್ನು ಬಳಸಿರುವ ರೀತಿಯು ಒಂದೇ ಸಮಸ್ಯೆಯನ್ನು ನೋಡುವ ಎರಡು ದಾರಿಗಳನ್ನು ಸೂಚಿಸುತ್ತದೆ. ಧರ್ಮ ಎಂದರೆ ಭಗವಂತನಲ್ಲಿ ಮತ್ತು ನಿಸರ್ಗಾತೀತದಲ್ಲಿ ಶ್ರದ್ಧೆ ಎಂದು ಘೋಷಿಸುವವರಿದ್ದಾರೆ. ಶ್ರದ್ಧೆ ಎಂದರೆ ನಂಬಲು

೪. Vide, Ch. IV pp.12-13, *The ldea of the Holy*, Edn, 1950.

ಮಾನವನ ಅಪೇಕ್ಷೆ ಎಂದು ಹೇಳುವವರಿದ್ದಾರೆ-ವಿಲಿಯಮ್ ಜೇಮ್ಸ್ ಹೇಳುವಂತೆ.

ಅದು ಹೇಗಾದರೂ ಇರಲಿ-ಏಕೆಂದರೆ ಈ ವಿಷಯದಲ್ಲಿ ವಿವಾದ ಅನಂತ. ಯಾರು ಧರ್ಮದಲ್ಲಿ ನಂಬಿಕೆಯನ್ನು ಇಟ್ಟಿರುವರೋ ಅವರಿಗೆ ದೇವರಲ್ಲೂ ನಂಬಿಕೆ ಇದೆಯೆಂಬ ವಸ್ತುಸ್ಥಿತಿಯಿಂದ ಆಚೆ ಹೋಗಲು ಸಾಧ್ಯವಿಲ್ಲ ಮತ್ತು ಅವರು ನಿಸರ್ಗಾತೀತವನ್ನೂ ಒಪ್ಪಿಕೊಳ್ಳಬೇಕಾಗುತ್ತದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ನಿಸರ್ಗಾತೀತ ಎಂದರೆ ಯಾವುದನ್ನು ಅರಿತುಕೊಳ್ಳಲು ಅಥವಾ ಗ್ರಹಿಸಲು ಸಾಧ್ಯವಿಲ್ಲವೋ ಅದು ಎಂಬ ಅರ್ಥವನ್ನು ನಾನು ಇಟ್ಟುಕೊಂಡಿಲ್ಲ. ಆದರೆ ಯಾವುದು ಉನ್ನತವಾದ ಶಿಖರದಂತೆ ಎದ್ದು ನಿಂತಿರುವುದೋ, ಉಳಿದ ಎಲ್ಲಕ್ಕಿಂತ ಮೇಲೆ ಮತ್ತು ದೂರವಾಗಿ, ಆಶ್ಚರ್ಯಜನಕವೂ ವಿಸ್ಮಯಾವಹವೂ ಸರ್ವಶಕ್ತವೂ ಆದ ಬೆಳಕೋ,[೫] ಅದು ನಿಸರ್ಗಾತೀತ. ಹಾಗೆಂದರೆ, ಇಂಥ ಜೀವಂತವಾದ ಶ್ರದ್ಧೆಯನ್ನು ಹೊಂದಿರುವವನು ತನ್ನ ಸ್ವಜೀವನದ ಸಂಯಮದಲ್ಲಿ ಆ ಬೆಳಕು ಪ್ರತಿಫಲಿಸುವುದನ್ನೂ, ಅದು ತನ್ನ ಆತ್ಮದ ಬೆಳಕನ್ನು ವಿಲೀನಗೊಳಿಸಿಕೊಳ್ಳುವದನ್ನೂ ಕಂಡುಕೊಳ್ಳುತ್ತಾನೆ. ಈಶಾವಾಸ್ಯೋಪನಿಷತ್ತಿನ[೬] ಮೊದಲ ಕೆಲವು ಸಾಲುಗಳಲ್ಲಿ ಈ ವಿಚಾರವು ಸೂಚಿತವಾಗಿದೆ. ಈ ಉಪನಿಷತ್ತಿನ ಸಂದೇಶವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು: ಸಮಸ್ತ ಪ್ರಪಂಚವೂ ವಿಶ್ವದ ಸ್ವತ್ತನ್ನು ಆಶಿಸದಿರುವುದರಿಂದ, ಆಶೆಯನ್ನು ತ್ಯಜಿಸುವುದರಿಂದ, ಫಲಾಪೇಕ್ಷೆಯಿಲ್ಲದೆ ಕರ್ತವ್ಯವನ್ನು ಮಾಡುವುದರಿಂದ ಮನುಷ್ಯನು ನೂರು ವರ್ಷ ಬದುಕಲು ಬಯಸಬೇಕು. ಇಲ್ಲಿ ಫಲಾಭಿಸಂಧಿರಹಿತವಾದ ಕರ್ಮಕ್ಕೂ, ವಿಶ್ವವನ್ನು ಭಗವಂತನ ಅಭಿವ್ಯಕ್ತಿಯೆಂದು ಒಪ್ಪಿಕೊಳ್ಳುವುದಕ್ಕೂ ಒತ್ತನ್ನು ನೀಡಲಾಗಿದೆ. ನಮ್ಮ ಪವಿತ್ರಗ್ರಂಥಗಳು ಪ್ರತಿಪಾದಿಸಿರುವ ದೃಷ್ಟಿಯು ಇಷ್ಟು ಉದಾತ್ತವಾದುದು.

ಭಾರತದಲ್ಲಿ ಧಾರ್ಮಿಕ ಸತ್ಯಾವಿಷ್ಕಾರಣವು ವೇದಗಳಲ್ಲಿ ಆಗಿದೆ ಎಂಬ ನಂಬಿಕೆಯಿದೆ. ವೇದಗಳನ್ನು ಅಪೌರುಷೇಯ ಎನ್ನುತ್ತಾರೆ. ಹಾಗೆಂದರೆ ಅವು ಪೌರುಷೇಯಕ್ಕಿಂತ ಆಚಿನವು ಎಂದು ಅರ್ಥ. ಅವುಗಳಲ್ಲಿ ಪ್ರತಿಪಾದಿತವಾಗಿರುವ ಸತ್ಯವು ಯಾವುದೇ ಮಾನವ ಅಥವಾ ದೈವ ಕರ್ತೃತ್ವವನ್ನು ಕಾರಣವಾಗಿ ಹೊಂದಿಲ್ಲ. ಅವುಗಳನ್ನು ಅನುಸರಿಸುವವರು ಇಲ್ಲಿ ಈಗ ಅನುಭವಿಸಬಹುದಾದ ಶಾಶ್ವತ ಸತ್ಯಗಳ ಬಗೆಗೆ ವೇದಗಳು ಮಾತನಾಡುತ್ತವೆ. ಡಾ. ರಾಧಾಕೃಷ್ಣನ್ ಹೇಳುವಂತೆ "ವೇದಗಳ

೫.ಪುರಾಣಗಳಲ್ಲಿ ಬ್ರಹ್ಮ ಮತ್ತು ವಿಷ್ಣು ಬೆಳಕನ್ನು ಸಮೀಕ್ಷಿಸುವ ಕಥೆಯನ್ನು ಬ್ರಹ್ಮನ ಅನಂತತ್ವವನ್ನು ಒತ್ತಿಹೇಳಲು ಬಳಸಲಾಗಿರುವುದನ್ನು ಗಮನಿಸಬಹುದು.

೬. ಈಶಾ ವಾಸ್ಯಮಿದಂ ಸರ್ವಂ ಯತ್ ಕಿಂಚ ಜಗತ್ಯಾಂ ಜಗತ್ I
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ ಧನಮ್ II
ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಂ ಸಮಾಃ (*ಈಶಾವಾಸ್ಯೋಪನಿಷತ್*, 1-2)

ಪ್ರಾರ್ಥನೆ ಯಾವುದೇ ತತ್ತ್ವಶಾಸ್ತ್ರೋತ್ತರ ಮಾನದಂಡದ ಉಲ್ಲೇಖವನ್ನು ಒಳಗೊಳ್ಳುವುದಿಲ್ಲ ಸಾಮಾನ್ಯ ಮಾನವನಿಗೆ ಯಾವುದು ಕೇವಲ ಶಾಸ್ತ್ರಸಂಪ್ರದಾಯದ ಮಾತೋ, ಅದು ಶುದ್ಧ ಹೃದಯದವರಿಗೆ ಅನುಭವ." ವೇದಗಳು ಪ್ರತಿಪಾದಿಸುವ ಸತ್ಯಗಳು ಇನ್ನೊಂದು ಯುಗದ ಸತ್ಯಕ್ಕೆ ವಿರುದ್ಧವಾಗಿಲ್ಲ. ಪರಿಪೂರ್ಣ, ಸಾರ್ವತ್ರಿಕ ಹಾಗೂ ತಪ್ಪಾಗದ ಜ್ಞಾನವು ವೇದಗಳಿಂದ ಮಾತ್ರ ಉದಯಿಸಬಲ್ಲುದು. ಶಂಕರಾಚಾರ್ಯರು ಸಾಮಾನ್ಯವಾಗಿ ಹೀಗೆ ಅಭಿಪ್ರಾಯಪಡುತ್ತಾರೆ. "ಸಮ್ಯಗ್‌ಜ್ಞಾನವು ವಸ್ತುತಂತ್ರವಾಗಿರುವುದರಿಂದ ಒಂದೇ ರೂಪವನ್ನು ಹೊಂದಿರುತ್ತದೆ. ಯಾವ ವಸ್ತು ಶಾಶ್ವತವಾಗಿ ಒಂದೇ ರೂಪದಲ್ಲಿರುವದೋ ಅದು ಸತ್ಯವಾದ ವಸ್ತುವೆಂದು ಪರಿಗಣಿಸಲ್ಪಡುತ್ತದೆ. ಒಂದೇ ರೂಪದಿಂದ ಸದಾ ಇರುವ ವಸ್ತುವೇ ಪರಮಾರ್ಥವೆನಿಸುವುದು. ಲೋಕದಲ್ಲಿ ಅಂಥ ವಸ್ತುವನ್ನು ವಿಷಯವನ್ನಾಗಿ ಹೊಂದಿರುವ ಜ್ಞಾನವೇ ಸಮ್ಯಗ್ ಜ್ಞಾನವೆನಿಸುವುದು. ಉದಾಹರಣೆಗೆ ಬೆಂಕಿಯು ಉಷ್ಣವಾಗಿದೆ ಎಂಬ ವಾಕ್ಯದ ಜ್ಞಾನ. ಹೀಗಿರುವುದರಿಂದ ಸಮ್ಯಗ್ ಜ್ಞಾನದ ವಿಷಯದಲ್ಲಿ ವಾದಿಗಳಿಗೆ ಪರಸ್ಪರ ವಿರುದ್ಧವಾದ ಅಭಿಪ್ರಾಯವುಂಟಾಗಲಾರದು. ಆದರೆ ತರ್ಕವನ್ನು ಅವಲಂಬಿಸಿದ ಜ್ಞಾನದಲ್ಲಿ ಪರಸ್ಪರ ವಿರೋಧಗಳು ಉಂಟಾಗುವುದು ಎಲ್ಲರಿಗೂ ಗೊತ್ತು. ಏಕೆಂದರೆ ಒಬ್ಬ ತಾರ್ಕಿಕನು ಸಮ್ಯಗ್ ಜ್ಞಾನವೆಂದು ಪ್ರತಿಪಾದಿಸಿದುದನ್ನು ಇನ್ನೊಬ್ಬ ತಾರ್ಕಿಕನು ಖಂಡಿಸಿ ತುಂಡು ತುಂಡು ಮಾಡಬಹುದು. ಮೂರನೆಯವನು ಇವರಿಬ್ಬರ ವಾದವನ್ನು ಹಾಗೇ ಮಾಡಿ ಖಂಡಿಸಬಹುದು. ತರ್ಕಾವಲಂಬಿತವಾದ ಏಕರೂಪದಲ್ಲಿರದ ವಿಷಯವುಳ್ಳ ಜ್ಞಾನವು ಸಮ್ಯಗ್ ಜ್ಞಾನವಾಗುವುದಾದರೂ ಹೇಗೆ ? 'ಪ್ರಧಾನವೇ' ಜಗತ್ತಿನ ಕಾರಣವೆಂದು ವಾದಿಸುವ ಸಾಂಖ್ಯನೇ ತಾರ್ಕಿಕರಲ್ಲೆಲ್ಲ ಶ್ರೇಷ್ಠನೆಂದು ಎಲ್ಲ ತಾರ್ಕಿಕರೂ ಒಪ್ಪಿಕೊಂಡಿಲ್ಲ. ಹಾಗಿದ್ದಿದ್ದರೆ ಅವನ ಅಭಿಪ್ರಾಯವೇ ಸಮ್ಯಗ್ ಜ್ಞಾನವೆನ್ನಬಹುದಾಗಿತ್ತೇನೋ. ವೇದವು ನಿತ್ಯ ಹಾಗೂ ವಿಜ್ಞಾನೋತ್ಪತ್ತಿಗೆ ಕಾರಣ. ಆದ್ದರಿಂದ ವ್ಯವಸ್ಥಿತವಾದ ವಸ್ತುಗಳೇ ಅದರ ವಿಷಯ. ಆ ಕಾರಣದಿಂದ ವೇದದಿಂದ ಬರುವ ಜ್ಞಾನ ಸಮ್ಯಗ್‌ಜ್ಞಾನ. ಸಮ್ಯಗ್ ಜ್ಞಾನವನ್ನು ಭೂತ-ವರ್ತಮಾನ-ಭವಿಷ್ಯತ್ತುಗಳ ಯಾವ ತಾರ್ಕಿಕನೂ ನಿರಾಕರಿಸುವುದು ಅಸಾಧ್ಯ. ಉಪನಿಷತ್ತುಗಳ ಮೇಲೆ ಅವಲಂಬಿಸಿರುವ ನಮ್ಮ ಜ್ಞಾನವು ಸಮ್ಯಗ್ ಜ್ಞಾನವೆಂದು ನಾವು ಸಾಧಿಸಿ ತೋರಿಸಿದ್ದೇವೆ. ಹಾಗಲ್ಲದೆ ಬೇರೆ ಯಾವ ರೀತಿಯಲ್ಲೂ ಸಮ್ಯಗ್ ಜ್ಞಾನವನ್ನು ನಿರಾಕರಿಸಿದರೆ ಸಂಸಾರಿಗಳಾದ ಜೀವರಿಗೆ ಮೋಕ್ಷವು ಇಲ್ಲವಾಗುತ್ತದೆ. ಆದ್ದರಿಂದ ನಮ್ಮ ಸಿದ್ಧಾಂತವೇನೆಂದರೆ-ಶ್ರುತಿಯ ಮತ್ತು ಶ್ರುತ್ಯವಿರುದ್ಧವಾದ ತರ್ಕದ ಆಧಾರದಿಂದ ಚೇತನವಾದ ಬ್ರಹ್ಮವೇ ಜಗತ್ತಿನ ಕಾರಣವೂ ಪ್ರಕೃತಿಯೂ ಆಗಿದೆ

ಎಂದು ತಿಳಿಯಬೇಕು."[೭]

ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಪಾಶ್ಚಾತ್ಯ ಪರಂಪರೆಗೆ ಅನುಗುಣವಾಗಿ ಮಾನವನು ಭಗವಂತನ ರೂಪದಲ್ಲೇ ನಿರ್ಮಿಸಲ್ಪಟ್ಟನೆಂದು ನಮಗೆ ಹೇಳುತ್ತಾರೆ. ಮಾನವನು ಭಗವಂತನನ್ನು ಹುಡುಕಿ ಕಾಣಬೇಕು, ಅನಂತರ ಅವನ ಕಾರ್ಯಗಳಿಗೆ ಅನುಸಾರವಾಗಿ ಅವನು ಸ್ವರ್ಗವನ್ನಾದರೂ ಪ್ರವೇಶಿಸಬಹುದು ಅಥವಾ ನರಕಕ್ಕೆ ನೂಕಲ್ಪಡಬಹುದು. ಆದರೆ ಭಾರತದಲ್ಲಿ ಆರಂಭದಿಂದಲೂ ಮಾನವನು ಬ್ರಹ್ಮಕ್ಕಿಂತ ಬೇರೆಯಲ್ಲ ಎಂದೇ ಘೋಷಿಸಲಾಗಿದೆ. "ಅಯಮಾತ್ಮಾ ಬ್ರಹ್ಮ". ಮಾನವನ ಎರಡು ಪರಿಕಲ್ಪನೆಗಳ ಮಧ್ಯೆ ಇರುವ ವ್ಯತ್ಯಾಸವನ್ನು "ಭಗವಂತನ ರೂಪ" ಮತ್ತು "ಬ್ರಹ್ಮಕ್ಕಿಂತ ಬೇರೆಯಲ್ಲ" ಎಂಬ ವಾಕ್ಯಾಂಶಗಳಿಗೆ ಕೊಟ್ಟಿರುವ ಒತ್ತಿನ ಆಧಾರದಿಂದ ನಾವು ನೋಡಬಹುದು. ಹಿಂದೂ ಧರ್ಮದ ಪ್ರಧಾನ ನಂಬಿಕೆಗಳಲ್ಲಿ ಒಂದು 'ನಾನೇ ಬ್ರಹ್ಮನಾಗಿರುವೆ' ಮತ್ತು 'ನೀನೇ ಅದು ಆಗಿರುವೆ' ಎಂಬ ವಾಕ್ಯಗಳಲ್ಲಿದೆ. ಇವು 'ಮಹಾವಾಕ್ಯ'ಗಳೆಂದು ಪ್ರಸಿದ್ಧವಾಗಿವೆ. ಇಲ್ಲಿ ಒಂದು ಪುಟ್ಟ ಮಾತಿನಲ್ಲೇ ಎಲ್ಲ ಜೀವಿಗಳೊಳಗಿರುವ ಆತ್ಮವು ಬ್ರಹ್ಮವಲ್ಲದೆ ಬೇರೆಯಲ್ಲ ಎಂಬ ಮಹತ್ತ್ವಪೂರ್ಣ ಪ್ರತಿಪಾದನೆ ಅಡಗಿದೆ. ಮನುಷ್ಯನನ್ನು ಅವನ ಎಲ್ಲ ಬಂಧನಗಳಿಂದ ವಿಮುಕ್ತಿಗೊಳಿಸುವ ವಿವೇಕಜ್ಞಾನದ ಬೆಳಕನ್ನು ಈ ವಾಕ್ಯಗಳು ತೋರಿಸಿಕೊಡುತ್ತವೆ. 'ಬ್ರಹ್ಮವಿದ್ಯಾ' ಎಂದು ಕರೆಯಲಾಗುವ ಜ್ಞಾನ ಇಲ್ಲಿದೆ. ಈ ಪ್ರಪಂಚದಲ್ಲಿ ಮನುಷ್ಯನ ಅಂತಸ್ತು ಮತ್ತು ವಿಶ್ವದಲ್ಲಿ ಅವನ ಸ್ಥಾನ ಏನೆಂಬುದು ಇಲ್ಲಿ ಸೂಚಿತವಾಗಿದೆ. ಬೇರೆ ಯಾವುದೇ ಮತಧರ್ಮಕ್ಕೆ ಭಿನ್ನವಾಗಿ ಹಿಂದೂಧರ್ಮವು ಮನುಷ್ಯನ ಆತ್ಮವು ಬ್ರಹ್ಮಕ್ಕಿಂತ ಬೇರೆಯಲ್ಲ ಎಂಬ ಮಹಾಸತ್ಯವನ್ನು ಒತ್ತಿ ಹೇಳುತ್ತದೆ. ಇಲ್ಲಿ ಧಾರ್ಮಿಕ ಅನುಭೂತಿಯ ಅನ್ವೇಷಣೆಯಿದೆ; ಅದರ ಪ್ರಧಾನ ವಿಷಯ ಆತ್ಮ ಮತ್ತು ಬ್ರಹ್ಮ-ಇವರ ಅಭೇದ.

ನಾವು ಯಾವ ಪ್ರಪಂಚದಲ್ಲಿ ಹುಟ್ಟಿರುವೆವೋ ಮತ್ತು ಬದುಕಿರುವೆವೋ ಅದು ಪರಮಾತ್ಮನಿಂದ ಹುಟ್ಟಿ ಅವನಲ್ಲೇ ವಿಲೀನವಾಗುವುದು ಎಂಬುದನ್ನು ನಾವೆಲ್ಲ ತಿಳಿದಿದ್ದೇವೆ ಮತ್ತು ನಂಬಿದ್ದೇವೆ. ಆ ಪರಮಾತ್ಮನ ಸ್ವಭಾವವು ಅಸ್ತಿತ್ವ, ಚೈತನ್ಯ ಮತ್ತು ಆನಂದ; ಸತ್, ಚಿತ್, ಆನಂದ. ಆ ಪರಮಾತ್ಮನು ಪರಿಮಿತದ ದೃಷ್ಟಿಕೋನದಿಂದ ನೋಡಿದಾಗ- ಪ್ರಪಂಚವನ್ನು ಸೃಷ್ಟಿಸುತ್ತಾನೆ, ಪಾಲಿಸುತ್ತಾನೆ, ಪೋಷಿಸುತ್ತಾನೆ, ಮತ್ತು ಕಾಲಬಂದಾಗ ವಿಲೀನಗೊಳಿಸುತ್ತಾನೆ. ಈ ಮೂಲಕ

೭. ವೇದಾಂತ ಸೂತ್ರಗಳ ಮೇಲೆ ಆಚಾರ್ಯ ಶಂಕರರು ಬರೆದ ಭಾಷ್ಯದ ಅನುವಾದ; ಜಾರ್ಜ್ ತಿಬೌಟ್, ಭಾಗ 1, ಪು.316-17, 1962

ಶಕ್ತಿಯಿಂದಲೇ ಜಗತ್ತಿನ ಎಲ್ಲ ವಸ್ತುಗಳೂ ಮಾನವರೂ ಅವರವರ ಸಾಮರ್ಥ್ಯವನ್ನು ಪಡೆಯುತ್ತಾರೆ ಮತ್ತು ಅಸ್ತಿತ್ವದಲ್ಲಿರುತ್ತಾರೆ.

ಜೀವನವು ಆ ಶಕ್ತಿಮೂಲದಿಂದಲೇ ಚಿಮ್ಮುತ್ತದೆ, ಅದರಿಂದಲೇ ಮೃತ್ಯುವೂ ಬರುತ್ತದೆ. ಅದರಿಂದಲೇ ಅಮೃತತ್ವವೂ ಸಿಗುತ್ತದೆ. ಈ ಪರಮ ತತ್ತ್ವದ ಭಾಗ ಅಥವಾ ಅಂಶವಾಗಿಲ್ಲದೆ ಬೇರೆ ಯಾವ ರೀತಿಯಲ್ಲೂ ಯಾವುದಕ್ಕೂ ಅಸ್ತಿತ್ವವೇ ಇಲ್ಲ. ಋಗ್ವೇದದ[೮] ಒಂದು ಸೂಕ್ತದಲ್ಲಿ ಈ ಭಾವನೆಯು ಅತ್ಯಂತ ಕಾವ್ಯಾತ್ಮಕವಾಗಿ ಅಭಿವ್ಯಕ್ತವಾಗಿದೆ.

> **ಹಿರಣ್ಯಗರ್ಭ:** ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್ ।
> ಸ ದಾಧಾರ ಪೃಥಿವೀಂ ದ್ಯಾಮುತೇಮಾಂ ಕಸ್ಮೈ ದೇವಾಯ ಹವಿಷಾ ವಿಧೇಮ ॥
> ಯ ಆತ್ಮದಾ ಬಲದಾ ಯಸ್ಯ ವಿಶ್ವಾ ಉಪಾಸತೇ ಪ್ರಶಿಷಂ ಯಸ್ಯ ದೇವಾಃ ॥ ಯಸ್ಯಚ್ಛಾಯಾಮೃತಂ
> ಯಸ್ಯ ಮೃತ್ಯು: ಕಸ್ಮೈ ದೇವಾಯ ಹವಿಷಾ ವಿಧೇಮ ॥

"ಹಿರಣ್ಯಗರ್ಭನು ಮೊದಲೇ ಇದ್ದನು. ಹುಟ್ಟಿದಾಗಲೇ ಅವನು ಸೃಷ್ಟಿಯ ಎಲ್ಲಕ್ಕೂ ಏಕಮಾತ್ರ ಒಡೆಯನಾಗಿದ್ದನು. ಅವನು ಈ ಭೂಮಿಯನ್ನೂ ಸ್ವರ್ಗವನ್ನೂ ಎತ್ತಿ ಹಿಡಿದವನು. ಹವಿಸ್ಸುಗಳನ್ನು ಕ (ಬ್ರಹ್ಮ) ಸ್ವರೂಪನಾದ ಅವನಿಗೆ ಅರ್ಪಿಸೋಣ."[೯]

"ಯಾವನು ಶಕ್ತಿಯನ್ನು ನೀಡುವನೋ, ಯಾವನ ಆಜ್ಞೆಯನ್ನು ಎಲ್ಲರೂ ದೇವತೆಗಳೂ, ಪಾಲಿಸುವರೋ. ಯಾವನ ನೆರಳೇ ಅಮೃತತ್ವವೂ ಮೃತ್ಯುವೂ ಆಗಿರುವುದೋ ಆ ಕ (ಬ್ರಹ್ಮ) ಸ್ವರೂಪನಿಗೆ ಹವಿಸ್ಸುಗಳಿಂದ ಪೂಜೆ ಮಾಡೋಣ."[೧೦]

ಫಲಪ್ರಾಪ್ತಿಗಾಗಿ ನಾನಾ ಕರ್ಮಗಳನ್ನು ಆಚರಿಸುವಂತೆ ನಮ್ಮನ್ನು ಪ್ರೇರಿಸುವ ಕಾರಣವನ್ನೂ ಧ್ವಂಸಮಾಡುವುದೇ ಮೊದಲನೆಯದಾಗಿ ಬ್ರಹ್ಮವಿದ್ಯೆಯ ಗುರಿ. ಹಾಗೆ ಕರ್ಮಗಳನ್ನು ಮಾಡಲು ನಮ್ಮನ್ನು ಪ್ರೇರಿಸುವುದು ಕಾಮ, ಕಾಮದಿಂದ ಕರ್ಮವು ಹುಟ್ಟುತ್ತದೆ. ಕಾಮವನ್ನು ಕೊನೆಗಾಣಿಸಿದರೆ ಕರ್ಮದ ಪ್ರೇರಣೆ ತಾನಾಗಿ ತೊಲಗಿ ಹೋಗುವುದು. ನಿರ್ದಿಷ್ಟ ಫಲಗಳನ್ನು ಗಳಿಸಲು ಕೈಗೆತ್ತಿಕೊಳ್ಳುವ ಕರ್ಮಗಳ ವ್ಯರ್ಥತ್ವವನ್ನು ವಿವೇಕದಿಂದ ನಾವು ಕಂಡುಕೊಂಡಾಗ, ನಾವು ಯಾವ ಕರ್ಮವನ್ನೂ ಕರ್ತವ್ಯಕ್ಕಾಗಿ ಮಾಡುವುದಿಲ್ಲ, ಫಲಗಳನ್ನು ಪಡೆಯುವುದಕ್ಕಾಗಿ ಮಾಡುತ್ತೇವೆ ಎಂಬ ಜ್ಞಾನವು ಉದಯಿಸುತ್ತದೆ. ಆತ್ಮಜ್ಞಾನದ ಪ್ರಗತಿಗಾಗಿ ಎಲ್ಲ ಕರ್ಮಗಳನ್ನೂ ಸಮರ್ಪಿಸಿಬಿಟ್ಟರೆ, ಕಾಮದಿಂದ ಉಂಟಾಗುವ ಕರ್ಮಗಳು ಕ್ಷಯಿಸುತ್ತವೆ; ಆಗ

೮. *ಋಗ್ವೇದ* 10. 121. 1-2

೯. *ಋಗ್ವೇದ ಸಂಹಿತಾ*; ಎಚ್. ಎಚ್. ವಿಲ್‌ಸನ್ ಅನುವಾದ, ಸಂಪುಟ 6, ಪು. 225

೧೦. ಅದೇ, ಪು. 225

ನಾವು ಯಾರು ಎಂಬ ಅರಿವೂ ನಮ್ಮಲ್ಲಿ ಉಂಟಾಗಿ ನಾವು ಬ್ರಹ್ಮಕ್ಕಿಂತ ಬೇರೆಯಲ್ಲ ಎಂಬ ಸಾಕ್ಷಾತ್ಕಾರ ಉದಯಿಸುತ್ತದೆ. ಅಂಥ ಸ್ಥಿತಿಯಲ್ಲಿ ಆತ್ಮವು ತನ್ನದೇ ಆದ ರೂಪದಲ್ಲೂ ಕಾಂತಿ ಸೂಚಿತವಾದಂತೆ ನಮ್ಮ ಆತ್ಮವು ಬ್ರಹ್ಮವಸ್ತುವಿಗೆ ಸಮವಾಗಿ ಶೋಭಿಸುತ್ತದೆ.

ಆತ್ಮನಲ್ಲಿ ನೆಲೆಯನ್ನು ಕಂಡು ನಿಲ್ಲುವುದೇ ಮಾನವನ ಪ್ರಧಾನ ಗುರಿ.[೧೧] ಇದೊಂದೇ ಅವನಿಗೆ ಮುಕ್ತಿಯನ್ನು ತರಬಲ್ಲುದು. ಕೇವಲ ಆಶೆಯ ತೃಪ್ತಿಗಾಗಿ ಆಚರಿಸುವ ವ್ಯರ್ಥವೂ ಕೊನೆಯಿಲ್ಲದುದೂ ಆದ ಕರ್ಮಗಳ ಅನುಚರಣೆ ಆ ಗುರಿಯನ್ನು ಮುಟ್ಟಿಸಲಾರದು. ಅಂಥ ಮಾನವನು ನಿರ್ಭಯತ್ವದ[೧೨] ಲೋಕವನ್ನು ಪಡೆದು ಆನಂದ ಸ್ವರೂಪನಾದ ಆತ್ಮನೊಡನೆ ಸೇರಿ ಒಂದಾಗುತ್ತಾನೆ. ಕಾಮ ಅಥವಾ ಆಸಕ್ತಿಯು ಸಂಕೋಲೆಯಂತೆ ವರ್ತಿಸುತ್ತದೆ, ವೈರಾಗ್ಯವು ಕಟ್ಟುಗಳನ್ನು ಬಿಚ್ಚಿಹಾಕುತ್ತದೆ. ಬಂಧನದ ಭಾವನೆಯನ್ನು ಕಳಚಿ ಹಾಕಿದಾಗಲೇ ಮುಕ್ತಿಯು ಉಂಟಾಗುವುದು.[೧೩] ಬ್ರಹ್ಮವು ಸ್ವಯಂ ಇತರಾನಪೇಕ್ಷವಾಗಿ ಇರುತ್ತದೆ. ಅದಕ್ಕೆ ಯಾವ ಅವಲಂಬನವೂ ಬೇಕಿಲ್ಲ. ಅದು ಸದಾ ಅದ್ವಿತೀಯ. ಅದಕ್ಕೆ ಎರಡನೆಯದು ಇಲ್ಲ(ಏಕಮೇವ ಅದ್ವಿತೀಯಮ್) ಬ್ರಹ್ಮವನ್ನು ಅರಿತರೆ ಎಲ್ಲವನ್ನೂ ಅರಿತಂತೆ.

ಈ ಸಂದರ್ಭದಲ್ಲಿ ಮೀಮಾಂಸಕರ ಎರಡು ಮುಖ್ಯ ದೃಷ್ಟಿಗಳನ್ನು ಪರೀಕ್ಷಿಸುವುದು ಅತ್ಯಂತ ಉಚಿತ. ಮೋಕ್ಷವನ್ನು ಕರ್ಮಗಳಿಂದಲೇ ಸಾಧಿಸಬಹುದು; ಆ ಗುರಿಯನ್ನು ಸಾಧಿಸಲು ಜ್ಞಾನವು ಆವಶ್ಯಕ ಅಲ್ಲ ಎಂದು ಪ್ರಾಚೀನ ಮೀಮಾಂಸಕರು ವಾದಿಸುತ್ತಿದ್ದರು. ನಿತ್ಯ ಹಾಗೂ ನೈಮಿತ್ತಿಕ ಕರ್ಮಗಳ ಅನುಷ್ಠಾನವು ಪಾಪಗಳ ನಿವಾರಣೆಯನ್ನು ಉಂಟುಮಾಡುತ್ತದೆ ಎಂದು ಅವರ ನಿಲವು. ಅಲ್ಲದೆ ನಿಷಿದ್ಧ ಕರ್ಮಗಳ ತ್ಯಾಗವೂ ಪಾಪವನ್ನು ತೊಲಗಿಸುತ್ತದೆ; ಆಶಾ ಪ್ರೇರಿತವಾದ ಎಲ್ಲ ಮಾರ್ಗದರ್ಶನವನ್ನು ಐಂದ್ರಿಯಿಕ ಸುಖವನ್ನು ಇಲ್ಲವಾಗಿಸುತ್ತದೆ. ಈ ಮಾರ್ಗದರ್ಶನವನ್ನು ಪ್ರಾಮಾಣಿಕವಾಗಿ ಅನುಸರಿಸುವುದರಿಂದ ಮಾನವನು ಪುಣ್ಯ ಕರ್ಮಗಳ ಅನುಷ್ಠಾನದ ಫಲವಾದ ಸ್ವರ್ಗವಾಸವನ್ನೂ ತಪ್ಪಿಸಿಕೊಳ್ಳಲು ಸಾಧ್ಯ; ಪಾಪಕರ್ಮಗಳ ಪರಿಣಾಮವಾದ ನರಕಯಾತನೆಯನ್ನೂ ದೂರ ಮಾಡಬಹುದು. ಈಗಾಗಲೇ ಫಲವನ್ನು ನೀಡಲೆಂದು ಆರಂಭಿಸಿರುವ ಪ್ರಾರಬ್ಧ ಕರ್ಮಗಳೂ ಮನುಷ್ಯನಿಗೆ ಅಡ್ಡಿಯನ್ನುಂಟು

೧೧. ತದಾತ್ಮಾನ ಸ್ವಯಮ್ ಕುರುತ ತಸ್ಮಾತ್ತತ್ತ್ ಸುಕೃಮುಚ್ಯತೇ (*ತೈತ್ತಿರೀಯೋಪನಿಷತ್*, 2-7-1)

೧೨. 'ಆನಂದಂ ಬ್ರಹ್ಮಣೋ ವಿದ್ವಾನ್‌ನಬಿಭೇತಿಕುತಶ್ಚನ' (*ತೈತ್ತಿರೀಯೋಪನಿಷತ್*, 29-1)

೧೩. 'ಯತ್‌ಕರ್ಮಕುರುತೇತದಭಿಸಂಪದ್ಯತೇಬ್ರಹ್ಮೈವಸನ್‌ಬ್ರಹ್ಮಾಪ್ಯೇತಿ (*ಬೃಹದಾರಣ್ಯಕೋಪನಿಷತ್* 4-4-5 ಮತ್ತು 6)

ಮಾಡಲಾರವು, ಏಕೆಂದರೆ ಅವುಗಳ ಫಲಗಳನ್ನು ಪೂರ್ಣವಾಗಿ ಅನುಭವಿಸುವುದರಿಂದ ಅವುಗಳನ್ನು ಕೊನೆಗಾಣಿಸಬಹುದು. ಅಂಥ ಪ್ರಕ್ರಿಯೆಗಳಿಂದ ಪುನರ್ಜನ್ಮವನ್ನು ತರುವ ಎಲ್ಲ ಕಾರಣಗಳು ಇಲ್ಲವಾದಾಗ ಅದರ ಪರಿಣಾಮವಾಗಿ ಮನುಷ್ಯನು ಮುಕ್ತಿಯನ್ನು ಪಡೆಯುತ್ತಾನೆ. ಮುಕ್ತಿಯೆಂದರೆ ಆತ್ಮವು ತನ್ನ ಸ್ವಾಭಾವಿಕ ಸ್ವರೂಪದಲ್ಲಿರುವುದು.[೧೪] ಈ ವಿಷಯದ ಬಗೆಗೆ ಮೀಮಾಂಸಕರ ಇನ್ನೊಂದು ವಿಚಾರಧಾರೆಯು ಹೆಚ್ಚು ನೇರವೂ ಸ್ಪಷ್ಟವೂ ಆಗಿದೆ. ವೇದವಿಹಿತವಾದ ಕರ್ಮಗಳ ಅನುಷ್ಠಾನದಿಂದ ಮೋಕ್ಷವು ಸಿದ್ಧಿಸುವುದು.[೧೫] ಇದರಲ್ಲಿ ಜ್ಞಾನ ನಿಷ್ಪ್ರಯೋಜನ ಎಂದು ಈ ವಿಚಾರಧಾರೆಯು ಪ್ರತಿಪಾದಿಸುತ್ತದೆ. ಮೀಮಾಂಸಕರ ಈ ವಿಚಾರಗಳನ್ನು ಪರೀಕ್ಷೆಗೆ ಒಳಪಡಿಸಿದರೆ ಅವು ಎಷ್ಟು ಅರ್ಥಶೂನ್ಯ ಎಂಬುದು ತಿಳಿದುಬರುತ್ತದೆ. ಕಾರಣವು ಇಲ್ಲವಾದಾಗ ಕಾರ್ಯವೂ ಸ್ವಯಂ ಇಲ್ಲವಾಗುತ್ತದೆ ಎಂಬ ಸಿದ್ಧಾಂತದ ಮೇಲೆ ಮೊದಲನೆಯ ವಿಚಾರಧಾರೆಯು ನಿಂತಿದೆ.

'ನಿಮಿತ್ತಾಪಾಯೇ ನೈಮಿತ್ತಿಕಾಪಾಯ'. ಆದ್ದರಿಂದ ಪುನರ್ಜನ್ಮಕ್ಕೆ ಕಾರಣವಾಗಿರುವ ಕರ್ಮವನ್ನು ತೊಲಗಿಸಿದರೆ, ಪುನರ್ಜನ್ಮವೂ ಇಲ್ಲದಾಗುತ್ತದೆ. ಆದರೆ ಮೀಮಾಂಸಕರ ಈ ವಾದಕ್ಕೆ ಶ್ರುತಿಯ ಪ್ರಾಮಾಣ್ಯವಿಲ್ಲ. ಪುನರ್ಜನ್ಮದ ಕಾರಣಗಳಾದ ಕರ್ಮಗಳನ್ನು ಸಂಪೂರ್ಣವಾಗಿ ತ್ಯಜಿಸಲು ಸಾಧ್ಯ ಎಂಬುದನ್ನೂ ನಂಬಲಾಗದು. ಹಿಂದಿನ ಜನ್ಮಗಳಲ್ಲಿ ಮನುಷ್ಯನು ಅನೇಕ ಕರ್ಮಗಳನ್ನೆಸಗಿರುತ್ತಾನೆ. ಅವುಗಳ ಫಲಗಳನ್ನು ಅನುಭವಿಸಿ ಮುಗಿಸಲು ಅಸಂಖ್ಯ ಜನ್ಮಗಳು ಬೇಕಾಗುತ್ತವೆ ಎಂಬುದು ಸತ್ಯ. ಆ ಕರ್ಮಗಳಲ್ಲಿ ಕೆಲವು ಸುಖಮಯವಾದ ಇಷ್ಟವಾಗುವ ಫಲಗಳನ್ನು, ಮತ್ತೆ ಕೆಲವು ದುಃಖಮಯವಾದ ಅನಿಷ್ಟ ಫಲಗಳನ್ನು ತರುತ್ತವೆ. ಅಲ್ಲದೆ ಪರಸ್ಪರ ವಿರುದ್ಧವಾದ ಫಲಗಳನ್ನು ತರುವ ಕರ್ಮಗಳೂ ಇವೆ. ಇತರ ಕೆಲವು ಕರ್ಮಗಳು ಜನ್ಮಕ್ಕೆ ಕಾರಣವಾದರೆ ಇತರ ಕೆಲವು ತಮ್ಮ ಫಲವನ್ನು ನೀಡಲು ಯೋಗ್ಯ ದೇಶಕಾಲಗಳಿಗಾಗಿ ಕಾಯುತ್ತಿರುತ್ತವೆ. ಆದ್ದರಿಂದ ಒಬ್ಬ ಮನುಷ್ಯನ ಎಲ್ಲ ಕರ್ಮಗಳೂ ಒಂದೇ ಜನ್ಮದಲ್ಲಿ ಫಲವನ್ನು ನೀಡಿ ಮುಗಿದು ಹೋಗುತ್ತವೆ ಎಂಬ ವಾದವು ಸಂಪೂರ್ಣವಾಗಿ ನಿರಾಧಾರ. ಪುಣ್ಯ ಕರ್ಮಗಳ ಫಲವನ್ನು ಸ್ವರ್ಗದಲ್ಲಿ ಪೂರ್ಣವಾಗಿ ಭೋಗಿಸಿದ ಮೇಲೂ ಉಳಿದ ಕರ್ಮಗಳ ಫಲದ ಅನುಭವಕ್ಕಾಗಿ ಮಾನವನು ಮತ್ತೆ ಈ ಲೋಕಕ್ಕೆ ಬರಬೇಕಾಗುವುದು ಎಂದು ಪವಿತ್ರಗ್ರಂಥಗಳು ಹೇಳುತ್ತವೆ. ನಿತ್ಯ ಕರ್ಮಗಳ ಮತ್ತು ನೈಮಿತ್ತಿಕ ಕರ್ಮಗಳ

೧೪. ಬ್ರಹ್ಮಸೂತ್ರಗಳ ಮೇಲೆ ಶಂಕರರ ಭಾಷ್ಯ : ೪.೩, ೭–೧೪ ಶಂಕರಾಚಾರ್ಯರ ತೈತ್ತಿರೀಯ ಭಾಷ್ಯ; ಶಂಕರಾಚಾರ್ಯರ ಗೀತಾಭಾಷ್ಯ – ಸರ್ವಧರ್ಮಾನ್ ಪರಿತ್ಯಜ್ಯ.

೧೫. ಶಂಕರಾಚಾರ್ಯರ ತೈತ್ತಿರೀಯ ಭಾಷ್ಯ, ಪೀಠಿಕೆ

ಅನುಷ್ಠಾನದಿಂದ ಹಿಂದಿನ ಜನ್ಮಗಳ ಎಲ್ಲ ಕರ್ಮಗಳ ಫಲಗಳು ನಾಶಹೊಂದುತ್ತವೆ ಎಂದು ಹೇಳುವುದೂ ಸರಿಯಲ್ಲ. ಏಕೆಂದರೆ ಅವುಗಳಿಗೂ ನಿತ್ಯ-ನೈಮಿತ್ತಿಕ ಕರ್ಮಗಳಿಗೂ ವಿರೋಧವಿಲ್ಲ. ಕೆಲವು ವೇಳೆ ನಿತ್ಯ-ನೈಮಿತ್ತಿಕ ಕರ್ಮಗಳಿಂದ ಪಾಪಗಳು ಮಾತ್ರ ನಾಶವನ್ನು ಹೊಂದಬಹುದು. ಆದರೆ ಪುಣ್ಯಕರ್ಮಗಳು ಒಳ್ಳೆಯ ಜನ್ಮವನ್ನು ತಂದುಕೊಡಬಹುದು. ವಸ್ತುತಃ ಹೇಳಬೇಕೆಂದರೆ ಎಲ್ಲ ಪಾಪಗಳೂ ನಾಶ ಹೊಂದುವುದಿಲ್ಲ. ಬ್ರಹ್ಮಹತ್ಯೆಯ ದೋಷದ ಪರಿಹಾರಕ್ಕೆ ಪವಿತ್ರಗ್ರಂಥಗಳು ಹನ್ನೊಂದು ಜನ್ಮಗಳು ಬೇಕೆಂದು ಹೇಳಿವೆ. ಪುಣ್ಯ ಕರ್ಮಗಳೂ ಹಲವು ಜನ್ಮಗಳಿಗೆ ಕಾರಣವಾಗಬಹುದು. ಬ್ರಹ್ಮ ಸಾಕ್ಷಾತ್ಕಾರವಿಲ್ಲದೆ ನಿತ್ಯ, ನೈಮಿತ್ತಿಕ, ನಿಷಿದ್ಧ ಮತ್ತು ಕಾಮ್ಯಗಳೆಂಬ ಕರ್ಮಗಳನ್ನು ತ್ಯಜಿಸುವುದು ಅಶಕ್ಯ. ವಿವೇಕಿಗಳೂ ತಪ್ಪುಗಳನ್ನು ಮಾಡುತ್ತಾರೆ. ಆದ್ದರಿಂದ ಬ್ರಹ್ಮಜ್ಞಾನವಿಲ್ಲದೆ, ಬ್ರಹ್ಮ ಸಾಕ್ಷಾತ್ಕಾರವಿಲ್ಲದೆ ಕರ್ಮಗಳ ಅನುಷ್ಠಾನದಿಂದಲೇ ಮೋಕ್ಷವನ್ನು ಸಾಧಿಸಿಕೊಳ್ಳಬಹುದು ಎಂದು ಯೋಚಿಸುವುದು ಕೇವಲ ವ್ಯರ್ಥ ಆಸೆ.

ಮೀಮಾಂಸಕರ ಎರಡನೆಯ ವಾದವನ್ನೂ ಸುಲಭವಾಗಿ ತಳ್ಳಿ ಹಾಕಬಹುದು. ಸ್ವರ್ಗದ ಸುಖಗಳೇ ಮೋಕ್ಷ ಎಂದು ಒಪ್ಪಲು ಸಾಧ್ಯವಿಲ್ಲ. ಮೋಕ್ಷವು ಶಾಶ್ವತ, ಸ್ವರ್ಗದ ಸುಖಗಳು ಶಾಶ್ವತವಲ್ಲ ಎಂದು ಸತ್ಯದರ್ಶನವನ್ನು ಹೊಂದಿದವರು ದೃಢವಾಗಿ ಹೇಳಿದ್ದಾರೆ. ಅಲ್ಲದೆ, ಕರ್ಮಗಳಿಂದ ಸಾಧಿಸಲ್ಪಟ್ಟುದು ಅಶಾಶ್ವತ ಎಂಬುದನ್ನು ಒಪ್ಪಲೇಬೇಕು. 'ಯತ್ ಕೃತಂ ತದನಿತ್ಯಮ್'(ಕೃತಕವಾದುದು ಅನಿತ್ಯ) ಎಂಬ ಲೋಕೋಕ್ತಿಗೆ ಇದು ಅನುಗುಣವಾಗಿದೆ. ಆದ್ದರಿಂದ ನಿತ್ಯವಾದ ಮೋಕ್ಷವನ್ನು ಸ್ವರ್ಗಸುಖಗಳ ಪ್ರಾಪ್ತಿಯೊಡನೆ ಸಮೀಕರಿಸಲಾಗದು.

ಹಾಗಾದರೆ ಬ್ರಹ್ಮವಾದಿಯ ಮತದಲ್ಲಿ ಮೋಕ್ಷಕ್ಕೆ ಕಾರಣವಾಗುವುದೇನು? ಜ್ಞಾನದಿಂದಲೇ ಮುಕ್ತಿ ಬರುವುದು ಎಂಬುದೇ ಅದು.[೧೬] ಜ್ಞಾನವೊಂದನ್ನು ಬಿಟ್ಟು ಬೇರೆ ಯಾವುದರಿಂದಲೂ ಕರ್ಮಗಳ ಫಲವನ್ನು ತೊಡೆದು ಹಾಕಲು ಅಸಾಧ್ಯ. ಒಳ್ಳೆಯವು ಕೆಟ್ಟವು ಎಂದು ಕರ್ಮಗಳು ಎರಡು ವಿಧ. ಒಳ್ಳೆಯ ಕರ್ಮಗಳು ಸುಖಮಯವಾದ ಫಲಗಳನ್ನೂ, ಕೆಟ್ಟ ಕರ್ಮಗಳು ಅನಿಷ್ಟ ಫಲಗಳನ್ನೂ ತಂದು ಕೊಡುತ್ತವೆ. ಎಲ್ಲಿಯವರೆಗೆ ಮನುಷ್ಯನ ಹೃದಯದಲ್ಲಿ ಕಾಮವು ಇರುವುದೋ ಅಲ್ಲಿಯವರೆಗೂ ಕರ್ಮಗಳೂ ಇರುತ್ತವೆ. ಆ ಕರ್ಮಗಳು ಸ್ವಭಾವಕ್ಕೆ ಅನುಗುಣವಾಗಿ ಒಳ್ಳೆಯ ಅಥವಾ ಕೆಟ್ಟ ಫಲಗಳನ್ನು ತಂದುಕೊಡುತ್ತವೆ. ಆದ್ದರಿಂದ ಮೋಕ್ಷವನ್ನು ಅಪೇಕ್ಷಿಸುವವನಿಗೆ ಜ್ಞಾನ ಮಾರ್ಗವೊಂದೇ ಸರಿಯಾದ ದಾರಿ. ಸತ್ಯವನ್ನು ತಿಳಿದವನಿಗೆ

---

೧೬. ಆಚಾರ್ಯ ಶಂಕರ ಗೀತಾಭಾಷ್ಯದ ಪೀಠಿಕೆಯನ್ನು ನೋಡಿ.

ಆತ್ಮಜ್ಞಾನವು ತಾನಾಗಿ ಹುಟ್ಟುತ್ತದೆ. ಯಾವನಿಗೆ ಆತ್ಮಜ್ಞಾನವಿದೆಯೋ ಅವನಿಗೆ ಬ್ರಹ್ಮಜ್ಞಾನವೂ ಇದೆ. ಆತ್ಮನೇ ಬ್ರಹ್ಮ, ಸತ್ಯವಾದ ಆತ್ಮಜ್ಞಾನವೇ ಬ್ರಹ್ಮಜ್ಞಾನ ಎಂದು ಪವಿತ್ರ ಗ್ರಂಥಗಳು ತಿಳಿಸುತ್ತವೆ. ಈ ಆತ್ಮಜ್ಞಾನವು ಸತ್‌ಸ್ವರೂಪ. ಕೇವಲ ಕರ್ಮಗಳ ಅನುಷ್ಠಾನದಿಂದಾಗಲಿ, ಕರ್ಮಗಳ ತ್ಯಾಗದಿಂದಾಗಲಿ ಆ ಜ್ಞಾನವು ಉದಿಸಲಾರದು. ಆತ್ಮಜ್ಞಾನವನ್ನು ಪಡೆಯಲು ಪ್ರಯತ್ನ ವಿಶೇಷವು ಬೇಕು. ಈ ಪ್ರಯತ್ನವು ಮೋಕ್ಷವನ್ನು ಅಥವಾ ಶಾಶ್ವತ ಮುಕ್ತಿಯನ್ನು ತಂದು ಕೊಡುತ್ತದೆ. ಈ ಮೋಕ್ಷ ಅಥವಾ ಕರ್ಮಬಂಧನದಿಂದ ಬಿಡುಗಡೆ ಕೇವಲ ಕರ್ಮದಿಂದ ಉಂಟಾಗದು. ಆತ್ಮದ ನಿಜ ಸ್ವರೂಪ ಏನು ಎಂಬ ಜ್ಞಾನಸಾಕ್ಷಾತ್ಕಾರದಿಂದ ಮಾತ್ರ ಮೋಕ್ಷವು ಲಭಿಸುವುದು.

ಈ ವಿಷಯದಲ್ಲಿ ಇನ್ನೊಂದು ಪೂರ್ವಪಕ್ಷವೂ ತಲೆ ಎತ್ತಬಹುದು. ವಿದ್ಯೆಯ (ಅಥವಾ ಜ್ಞಾನದ) ಸಹಾಯದಿಂದ ಉಂಟಾಗುವ ಸಾಕ್ಷಾತ್ಕಾರವನ್ನು ಕರ್ಮವೂ ಉತ್ಪಾದಿಸುವುದು ಸಾಧ್ಯವಿಲ್ಲವೆ? ಈ ಪ್ರಶ್ನೆಗೆ ವೇದಾಂತದ ಉತ್ತರವೇನೆಂದರೆ- ಮೋಕ್ಷವು ಶಾಶ್ವತ; ಅದು ಕರ್ಮದಿಂದ ಉತ್ಪಾದಿಸಲ್ಪಡುವುದಲ್ಲ. ಅಲ್ಲದೆ ಕರ್ಮದ ಎಲ್ಲ ಫಲಗಳೂ ಯಾವಾಗಲೂ ಅನಿತ್ಯ. ಮೇಲೆ ಹೇಳಿದ (ಪೂರ್ವಾಪಕ್ಷದ) ವಾದವು ಸರ್ವಾಂಗೀಕೃತವಾದ ಸಿದ್ಧಾಂತಕ್ಕೆ ವಿರುದ್ಧವಾದುದರಿಂದ ಅಪ್ರಯೋಜಕ. ವಿದ್ಯೆಯೂ ಅದರಿಂದ ಬರುವ ಮೋಕ್ಷವೂ ಶಾಶ್ವತವಾದುದರಿಂದ, ಕೇವಲ ಕರ್ಮಗಳಿಂದ ಸಾಕ್ಷಾತ್ಕಾರವು ಉಂಟಾಗದು, ಅಲ್ಲದೆ ಮೋಕ್ಷವು ವಿದ್ಯೆ ಮತ್ತು ತಪಸ್ಸು (ಧ್ಯಾನ)ಗಳಿಂದ ಸಾಧ್ಯವಾಗುವುದು. ಮೋಕ್ಷ ಎಂದರೆ ಸ್ವಾಭಾವಿಕವಾದ ಅಮೃತತ್ವ, ಬೇರೆ ಯಾವುದೋ ನಿಯಮಕ್ಕೆ ಒಳಪಟ್ಟ ಅವಲಂಬಿತ ಅಮೃತತ್ವವಲ್ಲ. ಆದ್ದರಿಂದಲೇ ಈ ಉಪನಿಷತ್ತಿನ ಪ್ರಾರ್ಥನೆ-ಸತ್ಯದ ಮುಖವನ್ನು ಚಿನ್ನದ ಪಾತ್ರೆಯು ಮರೆ ಮಾಡಿದೆ. ಸತ್ಯಧರ್ಮಗಳ ದೃಷ್ಟಿಯನ್ನುಳ್ಳ ಸಾಧಕನಿಗಾಗಿ ಆ ಮುಚ್ಚಳವನ್ನು ತೆರೆದುಬಿಡು.[೧೭]

ಯಾವುದಾದರೊಂದು ವಸ್ತುವನ್ನು ನಾಶಪಡಿಸಿದ ಮೇಲೆ ಅದು ಅಸ್ತಿತ್ವದಲ್ಲಿರುವುದಿಲ್ಲ. ಆದರೆ ಅದು ಇನ್ನೊಂದು ರೂಪದಲ್ಲಿ ಉಳಿದುಕೊಂಡಿರಬಹುದು. ಉದಾಹರಣೆಗೆ, ಒಂದು ಮಡಿಕೆಯನ್ನು ಒಡೆದು ಹಾಕಿದಾಗ ಅದರ ಚೂರುಗಳು ಇರುತ್ತವೆ. ಇಲ್ಲಿ ಘಟದ ನಾಶವಾಗಿದೆ, ಆದರೆ ಅದು ಇನ್ನೊಂದು ರೂಪದಲ್ಲಿ, ಚೂರುಗಳ ರೂಪದಲ್ಲಿ, ಅಸ್ತಿತ್ವವನ್ನು ಹೊಂದಿದೆ. ಆದರೆ ಮೋಕ್ಷದ ವಿಷಯ ಇದಕ್ಕೆ ವಿಲಕ್ಷಣ. ಮೋಕ್ಷವೆಂದರೆ ಶಾಶ್ವತವಾಗಿ ಆತ್ಮನಲ್ಲಿ ಇರುವುದು. ಅವಿದ್ಯೆ (ಅಜ್ಞಾನ) ಮತ್ತು ಕಾಮಗಳು ಇಲ್ಲವಾದಾಗ ಮೋಕ್ಷದ ಅನುಭವವಾಗುತ್ತದೆ.

---

೧೭. ಹಿರಣ್ಮಯೇನ ಪಾತ್ರೇನ ಸತ್ಯಸ್ಯಾಪಿಹಿತಂ ಮುಖಂ (*ಬೃಹದಾರಣ್ಯಕ ಉಪನಿಷತ್,* 5-15-1)

ಈ ಎರಡೂ (ಅವಿದ್ಯೆ, ಕಾಮ)ಇರುವವರೆಗೂ ಕರ್ಮವನ್ನು ಆಚರಿಸಲು ನಿರ್ಬಂಧಿಸುವ ಧ್ಯೇಯವಿರುತ್ತದೆ. ಅದು ತನ್ನ ಸರದಿಯಂತೆ ದುಃಖವನ್ನೋ ಸುಖವನ್ನೋ ಉತ್ಪಾದಿಸುತ್ತದೆ. ಆದರೆ 'ಆತ್ಮನೇ ಬ್ರಹ್ಮ' ಎಂಬ ನಿಜ ಜ್ಞಾನವು ಉದಯಿಸಿದಾಗ, ಆ ಜ್ಞಾನವು ಅವಿದ್ಯೆ ಮತ್ತು ಕಾಮಗಳ ವಿನಾಶಕ್ಕೆ ಕಾರಣವಾಗುತ್ತದೆ. ಅವಿದ್ಯೆ ಇದ್ದಾಗ ಆತ್ಮಜ್ಞಾನವು ಉದಿಸಲಾರದು. ಆದ್ದರಿಂದ ನೈಜವಾದ ಹಾಗೂ ಸಮಗ್ರವಾದ ಆತ್ಮ- ಬ್ರಹ್ಮರ ಅಭೇದದ ಅಥವಾ ಏಕತ್ವದ ಸಾಕ್ಷಾತ್ಕಾರವನ್ನು 'ಬ್ರಹ್ಮವಿದ್ಯಾ' ಎಂದು ಕರೆಯುತ್ತಾರೆ.

ಇದುವರೆಗೂ ನಾವು ಅರಿತುಕೊಳ್ಳಲು ಯತ್ನಿಸುತ್ತಿರುವ ಬ್ರಹ್ಮವು ಅನಿರ್ವಚನೀಯ, ಎಂದರೆ ಮಾತುಗಳಿಂದ ಬಣ್ಣಿಸಲು ಅಥವಾ ತಿಳಿಸಲು ಅಶಕ್ಯ. ಉಪನಿಷದ್ವಾಣಿಯು ಬ್ರಹ್ಮವನ್ನು ಪಡೆಯಲಾಗದೆ ಮಾತುಗಳು ಮನಸ್ಸಿನೊಡನೆ ಹಿಂದಕ್ಕೆ ಬರುತ್ತವೆ ಎಂದು ಈ ವಿಷಯವನ್ನು ಸಾರಿ ಹೇಳುತ್ತದೆ.[೧೮] ಹೀಗಿರುವಾಗ ಸ್ವಾಭಾವಿಕವಾಗಿ ನಮ್ಮಲ್ಲಿ ಹುಟ್ಟುವ ಪ್ರಶ್ನೆ ಏನೆಂದರೆ 'ಅನಿರ್ವಚನೀಯವಾದ ಬ್ರಹ್ಮವನ್ನು ತಿಳಿಯಲು ನಾವೇಕೆ ಕಷ್ಟಪಟ್ಟು ಶ್ರಮಿಸಬೇಕು?' ಈ ಪ್ರಶ್ನೆಗೆ ಉತ್ತರವನ್ನು ನೀಡಲು ಉಪನಿಷತ್ತುಗಳು ಪ್ರಯತ್ನಿಸುತ್ತವೆ. ಅವು ಹೇಳುತ್ತವೆ: "ಬ್ರಹ್ಮವು ಸಚ್ಚಿದಾನಂದ, ಸತ್ಯ, ಚೈತನ್ಯ ಮತ್ತು ಆನಂದ." ಹೀಗೆ ಹೇಳಿ ಅವು ಬ್ರಹ್ಮನ ನಿಜಸ್ವರೂಪವನ್ನು ಅರಿತುಕೊಳ್ಳಲು ನಮಗೆ ಶಕ್ತಿಯನ್ನು ನೀಡುತ್ತವೆ. ಮತ್ತೆ ಶ್ರದ್ಧಾಳುವಾದ ಬ್ರಹ್ಮವಿದ್ಯೆಯ ವಿದ್ಯಾರ್ಥಿಗೆ ಕೆಲವು ಪ್ರಾಯೋಗಿಕ ಹೆಜ್ಜೆಗಳನ್ನು ಉಪನಿಷತ್ತುಗಳು ಅನಿರ್ವಚನೀಯುವಾದುದನ್ನೂ ಅರಿತುಕೊಳ್ಳುವುದಕ್ಕಾಗಿ ಬೋಧಿಸುತ್ತವೆ. ಹೀಗೆ ಅಂತಿಮವಾಗಿ ಪವಿತ್ರಗ್ರಂಥಗಳು ಸಾಧಕನಿಗೆ ಆಗುವ ವಿಚಾರಗಳನ್ನು ಕಲಿಸಿಕೊಡುತ್ತವೆ. ಮನಸ್ಸನ್ನು ಏಕಾಗ್ರವೂ ಸೂಕ್ಷ್ಮವೂ ಆದ ರೀತಿಯಲ್ಲಿ ಉಪಯೋಗಿಸಿಕೊಂಡು ಆತ್ಮಧ್ಯಾನವನ್ನು ಮಾಡಲು ಸಾಧಕನಿಗೆ ಕಲಿಸಿಕೊಡಲಾಗುತ್ತದೆ.[೧೯] ಸತತಾಭ್ಯಾಸ ಮತ್ತು ಏಕಾಗ್ರನಿಶ್ಚಯದಿಂದ ಅಂಥ ಧ್ಯಾನವನ್ನು ಮಾಡಲು ಸಾಧ್ಯ ಎಂಬುದನ್ನು ಸೂಚಿಸಲಾಗಿದೆ.[೨೦]

ಪೂಜಕನ ಮತ್ತು ಪೂಜ್ಯದ ಏಕತ್ವವನ್ನು ತೋರಿಸುವುದರ ಮೂಲಕ ಪೂಜೆಯ ಸತ್ಯಸ್ವರೂಪವನ್ನು ಕಲಿಸಲಾಗಿದೆ ಎಂಬುದನ್ನೂ ಹೇಳಬೇಕೆಂದರೆ ಜೀವಾತ್ಮನು ಬ್ರಹ್ಮ ವಸ್ತುವಿನೊಡನೆ ತನ್ನ ಐಕ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಉಪದೇಶಿಸಲಾಗಿದೆ. ಹೀಗೆ ತನ್ನ ಆತ್ಮವೇ ಬ್ರಹ್ಮ ಎಂದು ಅರಿತುಕೊಂಡವನು

೧೮. ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ (*ತೈತ್ತಿರೀಯ ಉಪನಿಷತ್ತು*, II,4-1)

೧೯. ಏಷ ಸರ್ವೇಷು ಭೂತೇಷು ಗೂಡ್ಹಾತ್ಮಾ ನ ಪ್ರಕಾಶತೆ ದೃಶ್ಯತೆ ತ್ವ ಗ್ರ್ಯಯಾ ಬುಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ (*ಕಠೋಪನಿಷತ್ತು*, 3-12)

೨೦. ತತ್ರೈಕಾಗ್ರಂ ಮನಃ ಕೃತ್ವಾ ಯತ ಚಿತ್ತೇಂದ್ರಿಯ ಕ್ರಿಯಃ। ಉಪವಿಶ್ಯಾಸನೇ ಮಂಜ್ಯಾದ್ ಯೋಗ ಮಾತ್ಮವಿಶುಧಯೇ II (*ಭಗವದ್ ಗೀತಾ*: vi. 12)

ಬ್ರಹ್ಮವೇ ಆಗುತ್ತಾನೆ.

ಬ್ರಹ್ಮಸಾಕ್ಷಾತ್ಕಾರವನ್ನು ಪಡೆದುಕೊಳ್ಳಲು ಹೊರಟ ವ್ಯಕ್ತಿಗೆ ಬರುವ ಕಷ್ಟಗಳು ಅನೇಕ. ಬ್ರಹ್ಮದ ಬಗೆಗೆ ಕೇಳಿದವರು ಕೆಲವರೇ, ಅದನ್ನು ತಿಳಿದುಕೊಂಡವರು, ಸಾಕ್ಷಾತ್ಕರಿಸಿಕೊಂಡವರಂತೂ ವಿರಳ ಎಂದು ಹೇಳುತ್ತದೆ ಉಪನಿಷತ್ತು.[೨೧]

ಭಗವದ್ಗೀತೆಯೂ ಇದೇ ವಿಚಾರವನ್ನು ವ್ಯಕ್ತಪಡಿಸುತ್ತಾ ಸಹಸ್ರಾರು ಜನರಲ್ಲಿ ಕೆಲವರು ಮಾತ್ರ ಸಿದ್ಧಿಗಾಗಿ ಪ್ರಯತ್ನಿಸುತ್ತಾರೆ, ಅವರಲ್ಲಿ ಯಾರೋ ಒಬ್ಬರು ಮಾತ್ರ ವಸ್ತುತಃ ಬ್ರಹ್ಮವನ್ನು ನೋಡುತ್ತಾರೆ ಎಂದು ಹೇಳಿದೆ.[೨೨]

ಅಂಥ ಜ್ಞಾನವನ್ನು ಪಡೆಯುವ ಪಾತ್ರನಾಗಲು ವ್ಯಕ್ತಿಯು ತನ್ನ ಶುದ್ಧಿಯ ಪ್ರಕ್ರಿಯೆಗೆ ಒಳಗಾಗಬೇಕು. ಯಾವ ಕರ್ಮಗಳಿಂದ ಎಲ್ಲ ಸ್ವಾರ್ಥಕೇಂದ್ರಿತ ಆಸೆಗಳಿಗೂ ಇಲ್ಲವಾಗುವುವೋ ಮತ್ತು ಅವುಗಳ ಫಲಗಳು ಬ್ರಹ್ಮಕ್ಕೆ ಸಮರ್ಪಿತವಾಗುವುವೋ ಅಂಥ ಕರ್ಮಗಳನ್ನೇ ಕೈಗೊಳ್ಳುವುದರಿಂದ ಶುದ್ಧಿಯನ್ನು ಸಾಧಿಸಬಹುದು. "ಎಲ್ಲ ಕರ್ಮಗಳನ್ನೂ ಬ್ರಹ್ಮಕ್ಕೆ ಸಮರ್ಪಿಸಿ ಫಲಾಸಕ್ತಿಯನ್ನು ತ್ಯಜಿಸಿ ಕರ್ಮನಿರತನಾದವನು, ನೀರಿನಲ್ಲಿದ್ದೂ ಅದನ್ನು ಅಂಟಿಸಿಕೊಳ್ಳದ ತಾವರೆ ಎಲೆಯಂತೆ, ಪಾಪದ ಸ್ಪರ್ಶವನ್ನು ಪಡೆಯುವುದಿಲ್ಲ" ಎನ್ನುತ್ತದೆ ಭಗವದ್ಗೀತೆ.[೨೩]

ಮನಸ್ಸು ವೈರಾಗ್ಯವನ್ನು ಪಡೆದುಕೊಂಡ ಮೇಲೂ, ಆ ಮನಸ್ಸು ಏಕಾಗ್ರತೆಯನ್ನು ಪಡೆಯಬೇಕಾದರೆ ದಾಟಬೇಕಾದ ಹಲವು ಇತರ ಅಡ್ಡಿಗಳಿವೆ. ಇವುಗಳನ್ನು ಪತಂಜಲಿಯು ಯೋಗಸೂತ್ರಗಳಲ್ಲಿ ಹೇಳಿದ್ದಾನೆ. ಅವು ಯಾವುವೆಂದರೆ-[೨೪] ವ್ಯಾಧಿ(ಶಾರೀರ ರೋಗ), ಸ್ತ್ಯಾನ (ಮನಸ್ಸಿನ ನಿರುತ್ಸಾಹ), ಸಂಶಯ(ಸಂದೇಹ), ಪ್ರಮಾದ (ಅಜಾಗರೂಕತೆ), ಆಲಸ್ಯ (ಸೋಮಾರಿತನ), ವಿರತಿ(ವಿಷಯಾಸಕ್ತಿ), ಭ್ರಾಂತಿದರ್ಶನ(ತಪ್ಪು ತಿಳಿವಳಿಕೆ), ಅಲಬ್ಧ ಭೂಮಿಕತ್ವ(ಗುರಿಯನ್ನು ತಲುಪದಿರುವಿಕೆ), ಅನವಸ್ಥಿತತ್ವ (ಅಸ್ಥಿರತ್ವ) ಇವು ಅಡ್ಡಿಗಳು. ಸರಿಯಾದ ಮಾರ್ಗದರ್ಶನಕ್ಕಾಗಿ ಮತ್ತು ಅರಿವಿಗಾಗಿ ಬ್ರಹ್ಮಕ್ಕೆ ಮಾಡುವ ಪ್ರಾರ್ಥನೆ ಈ ಅಡ್ಡಿಗಳನ್ನು ನಿವಾರಿಸುತ್ತದೆ. ನಮ್ಮ ಪ್ರಾಚೀನ ಋಷಿಗಳು ಪ್ರಾರ್ಥನೆಯ

೨೧. ಶ್ರವಣಾಸ್ಯಾ ಬಹುಭಿರ್ಯೋ ನ ಲಭ್ಯಃಂತೋಪಿ ಬಹವೋ ಯಂ ನ ವಿದ್ಯುಃ।
(ಕಠೋಪನಿಷತ್ 3-12) ಆಶ್ಚರ್ಯೋ ವಕ್ತಾ ಕುಶಲೋ ಅಸ್ಯ ಲಬ್ಧಾ ಆಶ್ಚರ್ಯೋ ವಜ್ಞಾತಾ ಕುಶಲಾನುಶಿಷ್ಟ॥

೨೨. ಮನುಷ್ಯಾಣಾಂ ಸಹಸ್ರೇಷು ಕಶ್ಚಿದ್ ಯತತಿ ಸಿದ್ಧಯೇ ಯತತಾ ಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ತ್ವತಃ ಭಗವದ್ಗೀತೆ (VII-3)

೨೩. ಬ್ರಹ್ಮಣ್ಯಾಧ್ಯಾ ಕರ್ಮಾಣಿ ಸಂಗ ತ್ಯಕ್ತ್ವಾಕರೋತಿಯಃ
ಲಿಪ್ಯತೇ ನ ಸ ಪಾಪೇನ ಪದ್ಮ ಪತ್ರಮಿವಾಂಭ ಸಾ ಭಗವದ್ಗೀತೆ (V-10)

೨೪. ವ್ಯಾದಿ- ಸ್ತ್ಯಾನ- ಸಂಶಯ- ಪ್ರಮಾದ- ಆಲಸ್ಯ- ವಿರತಿ-ಭ್ರಾಂತಿದರ್ಶನ- ಅಲಬ್ಧಭೂಮಿಕತ್ವ-ಅನವಸ್ಥಿತತ್ವಾನಿ- ಚಿತ್ತವಿಕ್ಷೇಪಾಃ ತೇಂSರಾಯಾಃ (ಯೋಗಸೂತ್ರ I.30)

ಕಲೆಯನ್ನು ಪರಿಪೂರ್ಣಗೊಳಿಸಿದ್ದರು. ಬ್ರಹ್ಮದ ನಾನಾ ಅಭಿವ್ಯಕ್ತಿಗಳ ನಯನಗೋಚರ ಗುರುತುಗಳನ್ನು ಅವರು ಸಾಧಕನ ಅಂತಿಮ ಗುರಿಯನ್ನು ದೃಢಪಡಿಸಲು ಉಪಯೋಗಿಸಿದರು. ಮೊದಲು ಮಾನವಶರೀರವನ್ನು ಗಮನವನ್ನಿಟ್ಟು ನೋಡಿ ಅರ್ಥಮಾಡಿಕೊಳ್ಳಲು ಸಾಧಕನಿಗೆ ಹೇಳಲಾಗುತ್ತಿತ್ತು. ಪ್ರತಿಯೊಬ್ಬ ಮಾನವನೂ ಉಚ್ಛ್ವಾಸ-ನಿಶ್ವಾಸಗಳಿಂದ ಉಸಿರಾಡಲೇಬೇಕು. ಪ್ರಾಣ ಎನ್ನುವುದು ಮೇಲ್ಮುಖವಾದ ಉಸಿರು, ಅಪಾನ ಎನ್ನುವುದು ಅಧೋಮುಖವಾದುದು. ಹೀಗೆ ಜೀವದ ಉಸಿರನ್ನು ಎಂದರೆ ಪ್ರಾಣಶಕ್ತಿಯನ್ನು ವರ್ಣಿಸಲಾಗಿದೆ. ಕಣ್ಣಿನಲ್ಲಿ ಅಥವಾ ಸೂರ್ಯನಲ್ಲಿ ಇರುವ ಶಕ್ತಿಮಯ ಬೆಳಕಿನ ಕಣವೇ ಅರ್ಯಮನ್. ಶರೀರಕ್ಕೆ ಶಕ್ತಿಯನ್ನು ಕೊಡುವವನು ಇಂದ್ರ. ಬುದ್ಧಿಯೇ ಬೃಹಸ್ಪತಿ. ಪಾದಗಳನ್ನು ವಿಷ್ಣು ಎಂದು ಪ್ರತಿನಿಧಿಸಲಾಗಿದೆ. ಹೀಗೆ ಮಾನವ ದೇಹದ ಪ್ರತಿಯೊಂದು ಅಂಗವೂ ಬ್ರಹ್ಮದೊಡನೆ ಇರುವ ಸಂಬಂಧದಿಂದ ಕ್ರಿಯಾಶೀಲವಾಗಿರುತ್ತದೆ. ಜೀವನ ಕಾಂತಿ ಕಣವು ಬ್ರಹ್ಮ. ಈ ರೀತಿಯಾಗಿ ಬ್ರಹ್ಮವನ್ನು ಅದರ ಇಂದ್ರಿಯಗೋಚರ ರೂಪದಲ್ಲಿ ಅರಿತು ಕೊಳ್ಳಲು ಶಿಷ್ಯನಿಗೆ ಕಲಿಸಿಕೊಡಲಾಗುತ್ತದೆ. ಇಲ್ಲಿ ಎಂದರೆ ದೇಹದಲ್ಲಿ, ವಾಯು ಅಥವಾ ಗಾಳಿಯ ರೂಪದಲ್ಲಿ ಸುಲಭವಾಗಿ ಗ್ರಹಿಸಲಾಗುವ ಜೀವನ ತತ್ತ್ವವನ್ನು ಜೀವಶಕ್ತಿ ಅಥವಾ ಉಸಿರಿನೊಡನೆ ಸಮೀಕರಿಸಲಾಗಿದೆ. ಶಿಷ್ಯನು ಸುಲಭವಾಗಿ ಗ್ರಹಿಸಬಲ್ಲ ಪ್ರಾಣವಾಯುವನ್ನು ಬ್ರಹ್ಮವೆಂದು ಸಂಬೋಧಿಸಲು ಹೇಳಲಾಗುತ್ತದೆ. ಗೋಚರವಾಗುವುದನ್ನು ಗುರುತಿಸುವ ಮೂಲಕ ಶಿಷ್ಯನನ್ನು ಅಗೋಚರವಾಗಿರುವ, ಎಲ್ಲರೊಳಗೆ ಅಡಗಿರುವ ಈಶ್ವರನ ಕಡೆಗೆ ಶಿಷ್ಯನನ್ನು ಒಯ್ಯುತ್ತಾರೆ. ಹೀಗೆ ಬ್ರಹ್ಮವು ಎಲ್ಲರನ್ನೂ ಬಂಧಿಸುವ ಸೂತ್ರ. ಉಪನಿಷತ್ತು ಹೇಳುವಂತೆ- " ಈ ಪ್ರಪಂಚ ಮತ್ತು ಎಲ್ಲ ಭೂತಗಳೂ ವಾಯುವಿನಿಂದ ಒಟ್ಟಿಗೆ ಪೋಣಿಸಲ್ಪಟ್ಟಿವೆ."[೨೫] ವಾಯುವೆಂದು ನಾವು ಕರೆಯುವ ಬ್ರಹ್ಮವು ಗೋಚರ, ಏಕೆಂದರೆ ವಾಯುವು ಸ್ಪರ್ಶಿಸಿದಾಗ ಅದನ್ನು ನಾವು ಅನುಭವಿಸಿ ತಿಳಿಯಬಹುದು. ಇದೇ ಗುಣಗಳಿಂದ ಕೂಡಿದ ಬ್ರಹ್ಮ ಅಥವಾ ಸಗುಣಬ್ರಹ್ಮ. ದೀರ್ಘಕಾಲದ ಅಭ್ಯಾಸದ ಅನಂತರ ಅದನ್ನು ಇಂದ್ರಿಯಾತೀತ ರೂಪದಲ್ಲಿ ಧ್ಯಾನಿಸಬಹುದು. ಆದುದರಿಂದಲೇ ಹೀಗೆ ಹೇಳಿದ್ದಾರೆ: "ಈಶ್ವರ ರೂಪವನ್ನು ಗೋಚರಮಾಡಿಕೊಂಡವನು ಇಲ್ಲಿ ತನ್ನ ಜೀವನ ಮುಗಿದ ಮೇಲೆ ಪರಬ್ರಹ್ಮವನ್ನೂ ಸಾಕ್ಷಾತ್ಕರಿಸಿಕೊಳ್ಳುವನು."[೨೬] ಅಂಥ ಸ್ಥಿತಿಯು ದೇವ ಅಥವಾ ಈಶ್ವರನೊಡನೆ ಒಂದಾಗುವುದನ್ನು ಸೂಚಿಸುತ್ತದೆ, ಅಂದರೆ

೨೫. "ವಾಯುನಾ ಹಿ ಗೌತಮ ಸೂತ್ರೇಣ ಸಂದೃಬ್ಧಾನಿ ಭವಂತೀತಿ" (*ಬೃಹದಾರಣ್ಯಕೋಪನಿಷತ್*, 3-72)

೨೬. ಸಿದ್ಧಾಂತಲೇಶ ಸಂಗ್ರಹ, ಪು. 113. ಮದ್ರಾಸ್ ವಿಶ್ವವಿದ್ಯಾಲಯದ ಪ್ರಕಟಣೆ.

ದೇವ ಮತ್ತು ಭಕ್ತನ ಸಂಪೂರ್ಣ ತಾದಾತ್ಮ್ಯವನ್ನು ಹೇಳುತ್ತದೆ.[೨೭] ಬೃಹದಾರಣ್ಯಕವು ಹೇಳುವಂತೆ "ಶಿಷ್ಯನು ದೇವನಾಗಿ ದೇವರಲ್ಲೇ ಲೀನವಾಗುತ್ತಾನೆ, ಒಂದಾಗುತ್ತಾನೆ."[೨೮] ಇದು ಸತ್ಯಗೋಚರವಾದ ಬ್ರಹ್ಮವು ವಾಯುವೆಂದು ಹೇಳಿ ಸಾಧಕನು ತನ್ನೊಳಗಿರುವ ಅಗೋಚರ ಈಶ್ವರನನ್ನು, ಅಂತರ್ಯಾಮಿಯನ್ನು ಅರಿತುಕೊಳ್ಳಲು ಮುನ್ನಡೆಯುತ್ತಾನೆ. ಇದನ್ನು ಸಾಂಕೇತಿಕವಾಗಿ ಓಮ್ ಎಂದು ಕರೆಯುವ ಪ್ರಣವದ ಮೂಲಕ ಅವನು ಸಾಧಿಸುತ್ತಾನೆ. ಬ್ರಹ್ಮ ಸಾಕ್ಷಾತ್ಕಾರಕ್ಕೆ ಇರುವ ಅಡೆತಡೆಗಳನ್ನು ಪ್ರಣವವು ದೂರ ಮಾಡುತ್ತದೆ ಉಪನಿಷತ್ತು ಹೇಳುವಂತೆ ಪ್ರಣವವೇ ಧನುಸ್ಸು, ಆತ್ಮನೇ ಬಾಣ. ಆ ಬಾಣದಿಂದ ಬ್ರಹ್ಮವೆಂಬ ಲಕ್ಷ್ಯವನ್ನು ಭೇದಿಸಬೇಕು.[೨೯]

* * * *

೨೭. ದೀವ್ಯತಿ ಇತಿ ದೇವಃ। ಹೊಳೆಯುವವನು ದೇವ.

೨೮. ನೋಡಿ, *ಬೃಹದಾರಣ್ಯಕ*, I,4-5

೨೯. ನೋಡಿ, *ಮುಂಡಕ*, 2-2-4

೨. ಬ್ರಹ್ಮವಿದ್ಯೆಗೆ ಬೇಕಾದ ಜೀವನದ ಶಿಸ್ತು

ಮೊದಲನೆಯ ಉಪನ್ಯಾಸದಲ್ಲಿ ಆತ್ಮ- ಬ್ರಹ್ಮರ ಐಕ್ಯವನ್ನು ವೇದಾಂತವು ಯಾವ ರೀತಿಯಲ್ಲಿ ಸಾಧಿಸುತ್ತದೆ ಎಂಬುದರ ಬಗೆಗೆ ಮುಖ್ಯವಾಗಿ ನಾನು ತಿಳಿಸಿದೆನು. ಮಹಾವಾಕ್ಯಗಳಿಂದ ತಿಳಿದುಬರುವ ಹಾದಿಯಲ್ಲಿ ಧ್ಯಾನ ಅಥವಾ ಮನನದ ಮಾಧ್ಯಮದ ಮೂಲಕ ಇದನ್ನು ಸಾಧಿಸಿಕೊಳ್ಳುವುದು ಹೇಗೆ ಎಂಬುದನ್ನು ಸೂಚಿಸಲಾಯಿತು. 'ಅಹಂ ಬ್ರಹ್ಮಾಸ್ಮಿ', 'ತತ್ತ್ವಮಸಿ', 'ವಿಜ್ಞಾನಂ ಬ್ರಹ್ಮ' 'ಅಯಮಾತ್ಮಾ ಬ್ರಹ್ಮ' ಇತ್ಯಾದಿ ವಾಕ್ಯಗಳಿಂದ ಉಪನಿಷತ್ತುಗಳು ಸಾರಿ ಹೇಳುವ ವೇದಾಂತದ ಸತ್ಯಗಳನ್ನು ಸಾಧಕನು ಅರಿತುಕೊಳ್ಳುವುದು ಕೇವಲ ಚಿಂತನೆ ಮತ್ತು ಧ್ಯಾನಗಳಿಂದ ಹೇಗೆ ಸಾಧ್ಯ ಎಂದು ಪ್ರಶ್ನಿಸುವುದು ಸಕಾರಣವಾಗಿದೆ. ಅಷ್ಟು ಮಾತ್ರದಿಂದಲೇ ವೇದಾಂತ ಸತ್ಯಗಳು ಅನುಭವಕ್ಕೆ ಬರುವಹಾಗಿದ್ದಿದ್ದರೆ ಎಲ್ಲರೂ ಸುಲಭವಾಗಿ ಬ್ರಹ್ಮವಿತ್ ಅಥವಾ ಬ್ರಹ್ಮಜ್ಞಾನಿಗಳಾಗಲು ಸಾಧ್ಯವಾಗಬೇಕಿತ್ತು. ಆದರೂ ಮತ್ತೆ ಮತ್ತೆ ಶ್ರುತಿಗಳು ಬ್ರಹ್ಮ ಸಾಕ್ಷಾತ್ಕಾರದ ದಾರಿ ತುಂಬ ಕಷ್ಟವಾದುದು ಎಂದು ಘೋಷಿಸುವುದನ್ನು ನಾವು ನೋಡಿದ್ದೇವೆ. "ಅದು ಚೂಪಾದ ಖಡ್ಗಧಾರೆಯ ಮೇಲೆ ನಡೆದಂತೆ" ಎಂದು ಕಠೋಪನಿಷತ್ತು[೩೦] ಹೇಳುತ್ತದೆ. ಅದು ಹಾಗಿದ್ದರೆ, ಅದನ್ನು ಸಾಧಿಸಲು ಮನಸ್ಸು ಅನುಸರಿಸಲೇಬೇಕಾದ ನಿಯಮಗಳು ಮತ್ತು ಕ್ಲೇಶಗಳು ಯಾವುವು? ಈ ಗುರಿಯನ್ನು ಸಾಧಿಸಲು ಒಂದು ನಿಯತವಾದ ಪ್ರಶಿಕ್ಷಣ ಅಥವಾ ತರಬೇತಿಯೂ ನಿಯಮ ಪಾಲನೆಯೂ ಇದ್ದ ಶಿಕ್ಷಣವಿಧಾನವಿತ್ತು. ಯಾವುದನ್ನೂ ಅದೃಷ್ಟಕ್ಕೆ ಬಿಡುತ್ತಿರಲಿಲ್ಲ. ನಮ್ಮ ಪ್ರಾಚೀನರು ಮಾನಸಶಾರೀರಿಕ ಶಿಸ್ತಿನ ಒಂದು ವ್ಯವಸ್ಥೆಯನ್ನು ಎಷ್ಟು ಚೆನ್ನಾಗಿ ಪರಿಪೂರ್ಣಗೊಳಿಸಿದ್ದರೆಂದರೆ ಅದನ್ನು ಶ್ರದ್ಧಾಪೂರ್ವಕವಾಗಿ ಮತ್ತು ಆಮೂಲಾಗ್ರವಾಗಿ ಅನುಸರಿಸಿದರೆ ಯಾರು ಬೇಕಾದರೂ ಅಪೇಕ್ಷಿತ ಫಲವನ್ನು ಪಡೆದುಕೊಳ್ಳಬಹುದು. ನಿಯಮಪಾಲನೆಯು ಶಿಕ್ಷಾಶಾಸ್ತ್ರದ ಅಧ್ಯಯನವನ್ನೂ ಬೀಜಾಕ್ಷರಗಳೆನಿಸಿದ ಓಮ್ ಮತ್ತು ವ್ಯಾಹೃತಿ ಇತ್ಯಾದಿಗಳ

೩೦. ಉತ್ತಿಷ್ಠತ ಜಾಗ್ರತ ಪ್ರಾಪ್ಯವರಾನ್ ನಿಬೋಧತ। ಕ್ಷುರಸ್ಯ ಧಾರಾ ನಿಶಿತಾ ದುರತ್ಯಯಾ ದುರ್ಗಂ ಪಥಸ್ತತ್ ಕವಯೋ ವದಂತಿ॥ (*ಕಠೋಪನಿಷತ್* III.14)

ಅರ್ಥಾನುಸಂಧಾನಪೂರ್ವಕ ಜಪವನ್ನು ಒಳಗೊಂಡಿತ್ತು. ಹಿರಣ್ಯಗರ್ಭ ಮತ್ತು ಪ್ರಣವದ ಜ್ಞಾನ ಮತ್ತು ಮಹಾವಾಕ್ಯಗಳ ಅರ್ಥದ ಅರಿವಿಗೆ ಬೇಕಾದ ಅನುಶಾಸನಗಳ ಜ್ಞಾನವೂ ಅದರಲ್ಲಿ ಸೇರಿತ್ತು. ಈ ಎಲ್ಲ ನಿಯಮಗಳೂ ಓತಪ್ರೋತವಾಗಿ (ಹಾಸುಹೊಕ್ಕಾಗಿ) ಸೇರಿಕೊಂಡಿದ್ದು 'ಅಹಂ ಬ್ರಹ್ಮಾಸ್ಮಿ' ಮುಂತಾದ ವಾಕ್ಯಗಳು ಪರಮಾರ್ಥವನ್ನು ತಿಳಿಸಿಕೊಡುವುವೆಂದು ಹೇಳಲಾಗಿದೆ. ಆದ್ದರಿಂದ ಅವುಗಳನ್ನು ಇನ್ನೂ ಸ್ವಲ್ಪ ಹೆಚ್ಚು ಸೂಕ್ಷ್ಮವಾಗಿ ಪರೀಕ್ಷಿಸುವುದು ನಮಗೆ ಲಾಭಕರವಾಗಬಹುದು. ಶಿಕ್ಷಾಶಾಸ್ತ್ರದ ವಿಷಯದಿಂದ ಆರಂಭಮಾಡೋಣ.

ಶಿಕ್ಷಾಶಾಸ್ತ್ರವೆಂದರೆ ಧ್ವನಿಗಳ ಮತ್ತು ಅವುಗಳ ಉಚ್ಚಾರಣೆಯ ವಿಜ್ಞಾನವೆಂಬುದನ್ನು ನಾವೆಲ್ಲ ತಿಳಿದಿದ್ದೇವೆ. ನಾವು ಒಂದು ಶಬ್ದವನ್ನು ಉಚ್ಚರಿಸುವಾಗ ಅಥವಾ ವಾಕ್ಯವನ್ನು ಹೇಳುವಾಗ ಅನೇಕ ಧ್ವನಿಗಳನ್ನು ವಿಶಿಷ್ಟ ರೀತಿಯಲ್ಲಿ ಜೋಡಿಸಿ ಅರ್ಥ ಪ್ರತಿಪಾದನೆಗಾಗಿ ಉಚ್ಚರಿಸುತ್ತೇವೆ. ಪದಗಳು ಅರ್ಥವನ್ನು ಪ್ರತಿಪಾದಿಸಬೇಕಾಗಿದ್ದರೆ ಅವುಗಳನ್ನು ನಿರ್ದಿಷ್ಟವಾದ ರೀತಿಯಲ್ಲಿ ಉಚ್ಚರಿಸಬೇಕಾಗುತ್ತದೆ.

ಪದಗಳ ತಪ್ಪು ಉಚ್ಚಾರಣೆಯು ಸಂಭ್ರಾಂತಿಯನ್ನು ಹುಟ್ಟಿಸಬಹುದು ಅಥವಾ ಮಕ್ಕಳ ಮಾತಿನಂತೆ ಆಗಿಬಿಡಬಹುದು. ಇದು ಪ್ರತಿದಿನ ಆಗುವ ಅನುಭವ. ಅರ್ಥವನ್ನು ಸರಿಯಾಗಿ ತಿಳಿಸಲು ಪದಗಳನ್ನು ವ್ಯಾಕರಣ ನಿಯಮಾನುಸಾರವಾಗಿ ಮತ್ತು ಸ್ಪಷ್ಟವಾಗಿ ಉಚ್ಚರಿಸಬೇಕು ಎಂಬುದು ಶ್ರುತಿಯ (ವೇದದ) ದೃಷ್ಟಿ. ಉದ್ದೇಶಿತ ಅರ್ಥವನ್ನು ಪ್ರತಿಪಾದಿಸಲು ಕಂಠಧ್ವನಿಯನ್ನು ಸರಿಪಡಿಸಿಕೊಳ್ಳಬೇಕು.

ಈ ಪಾಠಗಳನ್ನು ಮೊದಲು ಅವಶ್ಯಕವಾಗಿ ಕಲಿತುಕೊಳ್ಳಬೇಕು. ಏಕೆಂದರೆ ಅವುಗಳಿಲ್ಲದೆ ಅರ್ಥವೇ ಇರುವುದಿಲ್ಲ, ಈಶ್ರೋತೃವಿಗೆ ಆ ಅರ್ಥವನ್ನು ತಿಳಿಸುವುದಂತೂ ಇಲ್ಲವೇ ಇಲ್ಲ. ಅರ್ಥವು ಜ್ಞಾನ ಸಂಬದ್ಧವಾಗಿರುತ್ತದೆ. ಆದ್ದರಿಂದ ಭಾಷೆಯ ಬಳಕೆಯ ಮೂಲಕ ನಮ್ಮ ಆಲೋಚನೆಗಳನ್ನು ಅಭಿವ್ಯಕ್ತಪಡಿಸಲು ಹೆಚ್ಚು ಎಚ್ಚರಿಕೆ ವಹಿಸಬೇಕು. ಭಾಷೆಯು ಶಿಕ್ಷಾಶಾಸ್ತ್ರದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಆದ್ದರಿಂದ ವಿದ್ಯಾರ್ಥಿಯು ಶಿಕ್ಷಾಶಾಸ್ತ್ರದ ಕಲೆಯನ್ನು ಸರಿಯಾಗಿ ವಶಪಡಿಸಿಕೊಳ್ಳುವುದು (ಎಂದರೆ ಅದರಲ್ಲಿ ಪ್ರಭುತ್ವವನ್ನು ಪಡೆದುಕೊಳ್ಳುವುದು) ಮುಖ್ಯವಾದ ಆವಶ್ಯಕತೆ. ಇದಿಲ್ಲದಿದ್ದರೆ ಅವನ ಅಧ್ಯಯನ ವ್ಯರ್ಥ. ಶ್ರುತಿಗಳು ಅತ್ಯಂತ ಉನ್ನತ ಅರ್ಥವನ್ನು ತಿಳಿಸಬೇಕಾಗಿರುವುದರಿಂದ ಪವಿತ್ರಗ್ರಂಥಗಳ ಅಧ್ಯಯನಕ್ಕೂ ಅವುಗಳನ್ನು ಅರಿತುಕೊಳ್ಳುವುದಕ್ಕೂ ಪರಮ ಪ್ರಾಮುಖ್ಯವನ್ನು ನೀಡಲಾಗಿದೆ. ಅವುಗಳ ಉಚ್ಚಾರಣೆ, ಪ್ರತ್ಯಯಯೋಜನೆ ಮತ್ತು ಪ್ರಯೋಗಕ್ಕೂ ಅಷ್ಟೇ ಮಹತ್ತ್ವವಿದೆ. ಇದು ಮಾಡಿದ ಮೇಲೆ ಮುಂದಿನ ಹೆಜ್ಜೆ ಅರ್ಥದ ಮೇಲೆ

ಮನಸ್ಸಿನ ಏಕಾಗ್ರತೆ. ಹೀಗೆ ಮಾತ್ರ ಗ್ರಂಥಗಳ ಮಹತ್ವವನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಆದ್ದರಿಂದ ಮೊದಲನೆಯ ಹೆಜ್ಜೆ ಎಂದರೆ ಶಿಕ್ಷಾಶಾಸ್ತ್ರದ ಕಲೆಯ ಮೇಲೆ ಪ್ರಭುತ್ವವನ್ನು ಪಡೆದುಕೊಳ್ಳುವುದು.

ವಿದ್ಯಾರ್ಥಿಯು ಕಲಿಯಬೇಕಾದ ಮುಂದಿನ ವಿಷಯವೇ ಸಂಹಿತೆ. ಸಂಹಿತೆ ಎಂದರೇನು? ಧ್ಯಾನ ಅಥವಾ ಮನನ, ಭೌತ ಪದಾರ್ಥಗಳು ಮತ್ತು ಶಬ್ಧಗಳ ಸುಂದರಸಮನ್ವಯವೇ ಸಂಹಿತೆ. ಉದಾಹರಣೆಗೆ 'ಬ್ರಹ್ಮ' ಎಂಬ ಶಬ್ದವನ್ನು ತೆಗೆದುಕೊಳ್ಳೋಣ. ಆರಂಭದಲ್ಲಿ 'ಬ್ರಹ್ಮ' ಎಂದರೆ ಏನು ಎಂದು ವಿದ್ಯಾರ್ಥಿ ತಿಳಿದಿರುವುದಿಲ್ಲ. ಅವನಿಗೆ ತಿಳಿದಿರುವ ವಸ್ತುವಿನ ಮೂಲಕ ಅವನು ಬ್ರಹ್ಮವನ್ನು ಅರ್ಥ ಮಾಡಿಕೊಳ್ಳುವಂತೆ ಮಾಡುವುದಕ್ಕಾಗಿ ವಾಯುವನ್ನು ಬ್ರಹ್ಮ ಎಂದು ತಿಳಿದುಕೋ ಎಂದು ಅವನಿಗೆ ಮೊದಲು ಕಲಿಸಲಾಗುತ್ತದೆ. ಆದ್ದರಿಂದಲೇ 'ನಮಸ್ತೇ ವಾಯೋ, ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ' ಎಂಬ ಶ್ರದ್ಧಾಪೂರ್ವಕ ಪ್ರಾರ್ಥನೆ. ವಾಯು ಅಥವಾ ಗಾಳಿ ಒಂದು ಸ್ಥೂಲಪದಾರ್ಥ, ಅದನ್ನು ಎಲ್ಲರೂ ಅನುಭವದಿಂದ ಅರಿತುಕೊಂಡಿದ್ದಾರೆ. ಅದನ್ನು ಧ್ಯಾನಿಸುವಾಗ ನಾವು ಸ್ಥೂಲವಸ್ತುವಿನ ಮೇಲೆ, ಸ್ಥೂಲಭೂತದ ಮೇಲೆ ಧ್ಯಾನ ಮಾಡಿ ಬ್ರಹ್ಮದ ಸೂಕ್ಷ್ಮರೂಪವನ್ನು ಸಂಬಂಧದಿಂದ ಸೂಚಿತವಾದ ರೀತಿಯಲ್ಲಿ, ಪಡೆದುಕೊಳ್ಳುತ್ತೇವೆ. ಸಾಧಾರಣವಾಗಿ ಬಹಿರ್ಮುಖವಾಗಿರುವ ಮನಸ್ಸು ಅದರ ಗಮನವನ್ನು ಅಂತರ್ಮುಖವನ್ನಾಗಿ ಮಾಡಿಕೊಳ್ಳುವಂತೆ ಅದನ್ನು ಸಮರ್ಥವನ್ನಾಗಿ ಮಾಡುವುದು ಇದರ ಉದ್ದೇಶ. ಈ ವಿಧವಾದ ಸಂಹಿತೆಯಿಂದ, ಅಂದರೆ ಸಮನ್ವಯದಿಂದ, ಶ್ರುತಿಗಳಲ್ಲಿ ಸೂಚಿತವಾಗಿರುವ ಸತ್ಯಗಳ ಸಾಕ್ಷಾತ್ಕಾರವುಂಟಾಗುತ್ತದೆ. ಗುರುವು ಕಲಿಸುವ ಸತ್ಯಗಳನ್ನು ಸಂಹಿತೆಯ ಪ್ರಕ್ರಿಯೆಯ ಮೂಲಕ ಅರ್ಥ ಮಾಡಿಕೊಳ್ಳುವುದು ಶಿಷ್ಯನ ಪ್ರಯತ್ನದ ಗುರಿ ಆಗಿರಬೇಕು. ಶಿಷ್ಯ ಅಂಥ ಜ್ಞಾನವನ್ನು ಪಡೆಯಲು ಇಷ್ಟಪಡುವವನು. ಸತ್ಯಗಳು ಅವನಿಗೆ ಗುರುವಿನ ಮೂಲಕ ತಲುಪಲಿ ಎಂಬುದು ಅವನ ಪ್ರಾರ್ಥನೆ. ಅಂಥ ಅಧ್ಯಯನವು ಅವನಿಗೆ ಕೀರ್ತಿಯನ್ನೂ ವರ್ಚಸ್ಸನ್ನೂ ನಿಶ್ಚಿತವಾಗಿ ತಂದು ಕೊಡುತ್ತದೆ. 'ಸಹ ನೌ ಯಶಃ I ಸಹ ನೌ ಬ್ರಹ್ಮವರ್ಚಸಮ್I'

ತೈತ್ತಿರೀಯೋಪನಿಷತ್ತು ಸ್ಪಷ್ಟವಾಗಿ ಐದು ಮಹಾ ಸಂಹಿತೆಗಳನ್ನು ಧ್ಯಾನಕ್ಕಾಗಿ ನಿರೂಪಿಸುತ್ತದೆ. ಇವು ಪ್ರಪಂಚ, ಪ್ರಕಾಶಮಾನಕಾಯಗಳು, ವಿದ್ಯೆ, ಸಂತಾನ ಮತ್ತು ಆತ್ಮಸಂಹಿತೆಯಲ್ಲಿರುವ ಶಬ್ದಗಳ ಧ್ಯಾನದಿಂದ ಮನುಷ್ಯನು ತನಗೆ ಸಂಬಂಧಿಸಿದ ಪ್ರಪಂಚದ ಎಲ್ಲ ಒಳ್ಳೆ ವಸ್ತುಗಳನ್ನೂ ಪಡೆಯುತ್ತಾನೆ. ಮಾರ್ಗದರ್ಶನದ ಕ್ರಮದಲ್ಲಿ ವಿದ್ಯಾರ್ಥಿ (ಸಾಧಕನು) ಪ್ರಪಂಚ (ಲೋಕ)ಗಳ ಧ್ಯಾನದಿಂದ ಆರಂಭ ಮಾಡುತ್ತಾನೆ. ಇವುಗಳ ಪೂರ್ವಾ ರೂಪವನ್ನು ಪೃಥಿವೀ(ಭೂಮಿ) ಎಂದೂ ಉತ್ತರ ರೂಪವು

ಸ್ವರ್ಗ ಎಂದೂ ಧ್ಯಾನಿಸಬೇಕು. ಆಕಾಶವು ಅವುಗಳ ಸಂಧಿ ಮತ್ತು ವಾಯುವು ಸಂಧಾನವನ್ನು ಮಾಡುತ್ತದೆ. ಪ್ರಕಾಶಮಾನವಾದ ಕಾಯಗಳ ವಿಷಯಕ್ಕೆ ಬಂದರೆ, ಮೊದಲನೆಯ ಪೂರ್ವರೂಪವು ಅಗ್ನಿ ಮತ್ತು ಎರಡನೆಯ ಉತ್ತರರೂಪವು ಸೂರ್ಯ. ಜಲವು ಸಂಧಿ ಮತ್ತು ಮಿಂಚು ಸಂಧಾನ. ಮೂರನೆಯ ಶ್ರೇಣಿಯಲ್ಲಿ ಗುರುಶಿಷ್ಯರು ಬರುತ್ತಾರೆ. ವಿದ್ಯೆಯು ಅಲ್ಲಿ ಸಂಧಿ. ಅಧ್ಯಯನವು ಸಂಧಾನ. ಈ ಸರಣಿಯಲ್ಲಿ ನಾಲ್ಕನೆಯದಾದ ಸಂತಾನವನ್ನು ತೆಗೆದುಕೊಂಡರೆ, ತಾಯಿ ಪೂರ್ವರೂಪ, ತಂದೆ ಉತ್ತರ ರೂಪ. ಮಕ್ಕಳೇ ಸಂಧಿ. ಪ್ರಜನನ ಅಲ್ಲಿ ಸಂಧಾನ. ಕೊನೆಯದು, ಆದರೆ ಮುಖ್ಯವಾದುದು, ಆತ್ಮ. ಇಲ್ಲಿ ಪೂರ್ವೋತ್ತರ ರೂಪಗಳು ಕೆಳಗಿನ ಮತ್ತು ಮೇಲಿನ ದವಡೆಗಳು. ಮಾತೇ ಅಲ್ಲಿ ಸಂಧಿ. ನಾಲಗೆಯು ಸಂಧಾನ. ಇಲ್ಲಿಗೆ ಮಹಾಸಂಹಿತೆಗಳು ಮುಗಿಯುತ್ತವೆ. ಈ ಸಂಹಿತೆಗಳ ಮೇಲೆ ಸತತ ಧ್ಯಾನವನ್ನು ಮಾಡಬೇಕೆಂದು ಶಿಷ್ಯನಿಗೆ ಹೇಳಲಾಗಿದೆ. ಅದರಿಂದ ಅವನು 'ವಿದ್ವಾನ್' ಅಥವಾ ತಿಳಿದವನು ಆಗುತ್ತಾನೆ. ವಿಶಿಷ್ಟವಾಗಿ ಹೇಳಿರುವುದೇನೆಂದರೆ ಈ ಧ್ಯಾನವು ಸತತವಾಗಿರಬೇಕು ಮತ್ತು ಈ ಎಲ್ಲ ಚಿಹ್ನೆಗಳನ್ನೂ ಬ್ರಹ್ಮವೆಂದು ಭಾವಿಸಬೇಕೆಂಬುದು. ಈ ಎಲ್ಲ ಚಿಹ್ನೆಗಳು ಅಥವಾ ಪ್ರತಿಮೆಗಳು ಬ್ರಹ್ಮವೆಂದು ಧ್ಯಾನ ಮಾಡುವುದರಿಂದ ಪರಮಾರ್ಥಸತ್ಯದ ವಿಚಾರವು ಸಾಧಕನಲ್ಲಿ ದೃಢವಾಗಿ ಬೇರೂರುತ್ತದೆ. ಏಕೆಂದರೆ ಲೋಕಗಳು, ಜ್ಯೋತಿಗಳು, ವಿದ್ಯೆ, ಸಂತಾನ, ಮತ್ತು ಆತ್ಮ- ಇವೆಲ್ಲ ಬ್ರಹ್ಮದ ಅವಿಭಾಜ್ಯ ಅಂಶಗಳು. ಇವೇ ಬ್ರಹ್ಮದ ನಿಜ ಪ್ರತಿಮೆಗಳು, (ಅಥವಾ ಚಿಹ್ನೆಗಳು). ಆದ್ದರಿಂದ ನಾವು ಚಿಹ್ನೆಯಿಂದ ಚಿಹ್ನಿತದೆಡೆಗೆ ಹೋಗಲು ಸಾಮರ್ಥ್ಯವನ್ನು ಪಡೆಯುತ್ತೇವೆ.

ಬ್ರಹ್ಮದ ಧ್ಯಾನದಲ್ಲಿ ತೊಡಗಿ ಸಫಲನಾಗಬೇಕಾದರೆ ಸಾಧಕನು ಆರೋಗ್ಯವನ್ನೂ ದೇಹ ಶಕ್ತಿಯನ್ನೂ ಹೊಂದಿರಬೇಕು. ಆದ್ದರಿಂದಲೇ ತೈತ್ತಿರೀಯೋಪನಿಷತ್ತಿನಲ್ಲಿ ಈ ಪ್ರಾರ್ಥನೆಯಿದೆ; "ನನ್ನ ಶರೀರ ಬಲಿಷ್ಠವಾಗಿರಲಿ; ನನ್ನ ನಾಲಗೆ ಜೇನು ತುಂಬಿದಂತೆ ಅತ್ಯಂತ ಸಿಹಿಯಾಗಿರಲಿ; ನಾನು ಚೆನ್ನಾಗಿ ಕೇಳುವಂತಾಗಲಿ."[೩೧] ಶಾಂತಿಯುತ ಮನಸ್ಸಿರುವವನು ಮಾತ್ರ ಪೂರ್ಣ ವಿಕಾಸವನ್ನು ಹೊಂದಬಲ್ಲನು. ಧಾರಣ ಶಕ್ತಿಯುಳ್ಳ ಸ್ಮರಣೆಗಾಗಿಯೂ ಪ್ರಾರ್ಥನೆಯಿದೆ. ಆ ಪ್ರಾರ್ಥನೆಯು ಓಂಕಾರದ ಅನುಭಾವಿ ಧ್ಯಾನದ ರೂಪದಲ್ಲಿದೆ.[೩೨]

೩೧. "ಶರೀರರಂ ಮೇ ವಿಚರ್ಷಣಂI ಜಿಹ್ವಾ ಮೇ ಮಧು ಮತ್ತಮಾI ಕರ್ಣಾಭ್ಯಾಂ ಭೂರಿ ವಿಶ್ರುವಮ್II" (*ತೈತ್ತಿರೀಯೋಪನಿಷತ್* 1-4-1)

೩೨. "ತಾನ್ಯ ಭ್ಯತಪತ್I ತೇಭ್ಯೋಽಭಿತಪ್ತೇಭ್ಯ ಓಂಕಾರಃ ಸಂಪ್ರಾಸ್ರವತ್ ತದ್ ಯಥಾ ಶಕುನಾಃ ಸರ್ವಾಣಿ ಪರ್ಣಾನಿ ಸಂತೃಣ್ಣಾನ್ಯೇವಮ್ ಓಂಕಾರೇಣ ಸರ್ವಾ ವಾಕ್ ಸಂತೃಣ್ಣಾ ಓಂಕಾರ ಏವೇದಗ್ ಸರ್ವಮೋಂಕಾರ ಏವೇದಗಂ ಸರ್ವಮ್ *ಛಾಂದೋಗ್ಯೋಪನಿಷತ್* 2-23-3

ಛಾಂದೋಗ್ಯೋಪನಿಷತ್ತು ಹೇಳುವಂತೆ ಎಲ್ಲ ವಾಕ್ಕೂ ಮೊದಲು ಓಂಕಾರದಲ್ಲೇ ನಿಬದ್ಧವಾಗಿದೆ, ಎಲ್ಲ ಎಲೆಗಳೂ ಕಾಂಡದಲ್ಲಿ ನಿಬದ್ಧವಾಗಿರುವಂತೆ ಇಂಥದ್ದೇ ಒಂದು ಮಂತ್ರವು ಕಠೋಪನಿಷತ್ತಿನಲ್ಲಿ ಹೀಗೆನ್ನುತ್ತದೆ" ಯಾವುದನ್ನು ಎಲ್ಲ ವೇದಗಳೂ ಉನ್ನತವೆಂದು ಹೇಳುವುವೋ, ಎಲ್ಲ ತಪಸ್ಸುಗಳನ್ನು ಯಾವುದಕ್ಕಾಗಿ ಆಚರಿಸುವವರೋ............. ಅದನ್ನು ನಿನಗೆ ಹೇಳುತ್ತೇನೆ. ಅದೇ ಓಂಕಾರ."[೩೩] ಮತ್ತೊಂದು ಪ್ರಾರ್ಥನೆಯು ಭಗವಂತನನ್ನು ಸಾಧಕನ ಅಂತರಾತ್ಮನಲ್ಲಿ ಪ್ರವೇಶಿಸಬೇಕೆಂದೂ, ಅಂತರಾತ್ಮವು ಭಗವಂತನಲ್ಲಿ ಪ್ರವೇಶಿಸಬೇಕೆಂದೂ ಕೇಳಿಕೊಳ್ಳುತ್ತದೆ. ಹೀಗೆ ಮಾಡುವುದರಿಂದ ಎಲ್ಲ ಪಾಪಗಳೂ ತೊಳೆದು ಹೋಗುವುವೆಂದು ನಮಗೆ ಹೇಳಲಾಗಿದೆ.

ತಂ ತ್ವಾ ಭಗ ಪ್ರವಿಶಾನಿ ಸ್ವಾಹಾ
ಸ ಮಾ ಭಗ ಪ್ರವಿಶ ಸ್ವಾಹಾ॥[೩೪]

ನಿರುಕ್ತದ ಆಧಾರದ ಮೇಲೆ, ಭಗ ಎಂದರೆ ಸಮಗ್ರ ಐಶ್ವರ್ಯ, ಶೌರ್ಯ, ಯಶಸ್ಸು, ಸಂಪತ್ತು, ಜ್ಞಾನ, ವೈರಾಗ್ಯ, ಇವೆಲ್ಲವನ್ನೂ ಹೊಂದಿರುವುದು. ಈ ಎಲ್ಲ ಗುಣಗಳೂ ಹೊಮ್ಮುವುದು ಭಗವಂತನಿಂದ. ಎಲ್ಲ ಪಾಪಗಳಿಂದ ಮುಕ್ತನಾದ ಆಧ್ಯಾತ್ಮಿಕ ಗುರು ಭಗವಂತನಲ್ಲಿ ಅವನಿಗಿರುವ ಭಕ್ತಿಯ ಕಾರಣದಿಂದ ಅನೇಕ ಶಿಷ್ಯರನ್ನು ಗಳಿಸಿಕೊಳ್ಳುತ್ತಾನೆ.

ಈಗ ವ್ಯಾಹೃತಿಗಳೆಂಬ ಅನುಭಾವಿಕ ಶಬ್ದಗಳ ಧ್ಯಾನದ ಬಗೆಗೆ ಹೇಳೋಣ. ವ್ಯಾಹೃತಿ ಎಂಬುದು ಪ್ರತಿಯೊಬ್ಬ ದ್ವಿಜನೂ ಪ್ರತಿದಿನವೂ ಸಂಧ್ಯೆಯನ್ನು ಉಪಾಸಿಸುವಾಗ ಉಚ್ಚರಿಸುವ ಬೀಜಾಕ್ಷರ. ಈ ವ್ಯಾಹೃತಿಗಳ ಉಚ್ಚಾರಣೆ ಮನುಷ್ಯನಿಗೆ ಮುಕ್ತಿಯನ್ನು ನೀಡುತ್ತದೆ. ಎಲ್ಲ ಧಾರ್ಮಿಕ ಆಚರಣೆಗಳಲ್ಲೂ ವ್ಯಾಹೃತಿಗಳನ್ನು ಉಚ್ಚರಿಸಲಾಗುತ್ತದೆ. ಮೊದಲನೆಯ ಮೂರು ವ್ಯಾಹೃತಿಗಳು- ಭೂಃ, ಭುವ, ಸುವಃ, ನಾಲ್ಕನೆಯದು ಮಹಃ, ಇದನ್ನು ಬ್ರಹ್ಮವೆಂದು ಉಪಾಸನೆ ಮಾಡಬೇಕು. ಮಹಃ ಎಂಬ ಈ ವ್ಯಾಹೃತಿಯಲ್ಲಿ ಉಳಿದ ಮೂರು ವ್ಯಾಹೃತಿಗಳನ್ನೂ ಅದರ ಭಾಗಗಳಂತೆ ಭಾವಿಸಿ ಧ್ಯಾನಿಸಬೇಕು ಎಂದು ಮುಂದೆ ಹೇಳಲಾಗಿದೆ. ಭೂಃ ಎಂಬ ವ್ಯಾಹೃತಿಯು ಈ ಪ್ರಪಂಚಕ್ಕೆ ಸಂಕೇತವಾಗಿದೆ. ಭುವಃ ಎಂಬುದು ಅಂತ ರಿಕ್ಷಕ್ಕೂ, ಸುವಃ ಎಂಬುದು ಮೇಲಿನ ಲೋಕಕ್ಕೂ, ಮಹಃ ಎಂಬುದು ಸೂರ್ಯನಿಗೂ ಸಂಕೇತವಾಗಿದೆ. ವ್ಯಾಹೃತಿಗಳನ್ನು ಮೊದಲು ಈ ಲೋಕ, ಅಂತರಿಕ್ಷ, ಸ್ವರ್ಗ,

೩೩. ಸರ್ವೇವೇದಾ ಯತ್ ಪದ ಮಾಮನಂತಿ ತಪಾಂಸಿ ಸರ್ವಾಣಿ ಚ ಯದ್ ವದಂತಿ।
ಯದಿಚ್ಛಂತೋ ಬ್ರಹ್ಮಚರ್ಯಂ ಚರಂತಿ ತತ್ತೇ ಪದಂ ಸಂಗ್ರಹೇಣ ಬ್ರವೀಮಿ ॥
೩೪. ಓಮಿತ್ಯೇತತ್, ಕಠೋಪನಿಷತ್, 2–15 *ತೈತ್ತಿರೀಯೋಪನಿಷತ್* 1-4-3

ಸೂರ್ಯ ಎಂದು ಧ್ಯಾನಿಸಲಾಗುತ್ತದೆ. ಸೂರ್ಯನು ಸಮಸ್ತ ಲೋಕಗಳನ್ನೂ ಧರಿಸಿದ್ದಾನೆ. ಈ ವ್ಯಾಹೃತಿಗಳೇ ಕ್ರಮವಾಗಿ ಅಗ್ನಿ, ವಾಯು, ಸೂರ್ಯ ಮತ್ತು ಚಂದ್ರರನ್ನು ಸಂಕೇತಿಸುತ್ತವೆ. ಚಂದ್ರನು ಎಲ್ಲವನ್ನು ಬೆಳಗಿಸುತ್ತಾನೆ. ಹಾಗೇ ಈ ವ್ಯಾಹೃತಿಗಳು ಋಕ್, ಸಾಮ, ಯಜುಸ್ ಎಂಬ ವೇದಗಳು. ಮಹಃ ಎಂಬುದು ಎಲ್ಲ ವೇದಗಳನ್ನೂ ಒಟ್ಟಿಗೆ ಹಿಡಿದಿಟ್ಟಿರುವ ಬ್ರಹ್ಮ. ಇಲ್ಲಿ ಬ್ರಹ್ಮ ಎಂದರೆ 'ಓಮ್'. ಈ ವ್ಯಾಹೃತಿಗಳನ್ನು ಪ್ರಾಣ (ಊರ್ಧ್ವಮುಖಿ ವಾಯು), ಅಪಾನ (ಅಧೋಮುಖಿ ವಾಯು), ವ್ಯಾನ (ಸರ್ವಶರೀರ ವ್ಯಾಪಿ ವಾಯು) ಮತ್ತು ಆಹಾರ (ಎಲ್ಲಕ್ಕೂ ಅವಲಂಬನ) ಎಂದೂ ಉಪಾಸನೆ ಮಾಡಲಾಗುತ್ತದೆ. ಒಂದೊಂದು ವ್ಯಾಹೃತಿಯೂ ನಾಲ್ಕು ನಾಲ್ಕು ರೂಪಗಳನ್ನು ಹೊಂದಿವೆಯೆಂದು ಭಾವಿಸಿಕೊಂಡಾಗ ಅವು ಹದಿನಾರು ಆಗಿ ಬ್ರಹ್ಮದ ಹದಿನಾರು ರೂಪಗಳನ್ನು ಪ್ರತಿನಿಧಿಸುತ್ತವೆ.[೩೫] ಆಗ ಅವು ಪರಮತತ್ತ್ವದ ಧ್ಯಾನಕ್ಕೆ ಸಹಾಯಕಗಳಾಗುತ್ತವೆ.

ಈ ವ್ಯಾಹೃತಿಗಳನ್ನು ತಿಳಿದುಕೊಂಡು ಅವುಗಳ ಮೇಲೆ ಧ್ಯಾನವನ್ನು ಮಾಡುವವನು ಬ್ರಹ್ಮವನ್ನು ತಿಳಿದುಕೊಳ್ಳುತ್ತಾನೆ ಎಂದು ತೈತ್ತಿರೀಯವು ಹೇಳುತ್ತದೆ.[೩೬] ಭಗವಾನ್ ಹಿರಣ್ಯಗರ್ಭನನ್ನು ದೇವತೆಗಳಲ್ಲಿ ಶ್ರೇಷ್ಠನೆಂದು ಹೇಗೆ ಪರಿಗಣಿಸುವೆವೋ ಹಾಗೆ 'ಮಹಃ' ಎಂಬುದು ವ್ಯಾಹೃತಿಗಳಲ್ಲೆಲ್ಲ ಪ್ರಧಾನವೆಂದು ಪರಿಗಣಿಸಬೇಕು. ಎಲ್ಲ ಮೂರು ವ್ಯಾಹೃತಿಗಳು 'ಮಹಃ' ಎಂಬುದರಿಂದ ಪ್ರತಿನಿಧಿಸಲ್ಪಟ್ಟ ಬ್ರಹ್ಮನ ಅಂಗಗಳೆಂಬುದನ್ನು ನಾವು ನೋಡಿದ್ದೇವೆ. ಈ ಬ್ರಹ್ಮನ ಮೇಲೆ ಧ್ಯಾನ ಮಾಡಲು ಬೇಕಾದ ಸ್ಥಾನವು ಹೃದಯದೊಳಗಿನ ದಹರಾಕಾಶ ಎಂದೂ ನಮಗೆ ಹೇಳುತ್ತಾರೆ. ಹೃದಯದೊಳಗಿನ ಪ್ರಕಾಶ ಮಾನವಾದ ದಹರಾಕಾಶದಲ್ಲಿ ಬ್ರಹ್ಮವು ಇದೆ. ಅವನು ನಿತ್ಯ ಮತ್ತು ಕಾಂತಿಮಯ. ಕೆಳಮುಖವಾದ ತಾವರೆಯಂತಿರುವುದು ಹೃದಯ. ಅದರಿಂದ ನೂರಾರು ನಾಡಿಗಳು ಹೊರಟಿವೆ. ಹೃದಯದ ಬೆಳಗುವ ಬಾನಿನಲ್ಲಿ ಪುರುಷ ಅಥವಾ ಆತ್ಮನಿದ್ದಾನೆ- ಶರೀರವೆಂಬ ಪುರದಲ್ಲಿ ಇರುವ ಕಾರಣದಿಂದ ಅವನು 'ಪುರುಷ' ಎನಿಸಿದ್ದಾನೆ (ಪುರಿಶೇತೇ) ಅಥವಾ ಜಗತ್ತನ್ನೆಲ್ಲ ವ್ಯಾಪಿಸಿರುವುದರಿಂದ ಅವನು ಪುರುಷ.

ಇಲ್ಲಿ ಸ್ಪಷ್ಟತೆಗೋಸ್ಕರ ಸ್ವಲ್ಪ ಪುನರವಲೋಕನ ಮಾಡೋಣ. ಎಲ್ಲ ದೇವತೆಗಳೂ ಯಾವುದರಿಂದ ಕೊಂಬೆಗಳು ಕಾಂಡದಿಂದ ಹೊರಬರುವಂತೆ ಬಂದಿದ್ದಾರೋ ಅದು ಬ್ರಹ್ಮ ಎಂದು ನಮಗೆ ಒತ್ತಿ ಹೇಳುವುದಕ್ಕಾಗಿ ಲೋಕಗಳು,

೩೫. *ತೈತ್ತಿರೀಯ ಭಾಷ್ಯದ ಮೇಲೆ ಆನಂದಗಿರಿಯ ಟೀಕೆ* ಪು.19. ನೋಡಿ
೩೬. *ತೈತ್ತಿರೀಯೋಪನಿಷತ್ತಿನ ಮೇಲೆ ಸಾಯಣಭಾಷ್ಯ*, ಪು. 510.

ಜ್ಯೋತಿಗಳು, ದೇವತೆಗಳು ಮತ್ತು ಆತ್ಮ ಎಂದು ವ್ಯಾಹೃತಿಗಳ ಮೇಲೆ ಉಪಾಸನೆ ಮಾಡಬೇಕೆಂದು ಹೇಳುವುದರ ಉದ್ದೇಶ ಎಂದು ನಮಗೆ ಹೇಳಲಾಗಿದೆ. ಪ್ರಕೃತಧ್ಯಾನದಲ್ಲಿ ಬ್ರಹ್ಮವು ನಮ್ಮ ಅಂತರ್ಯಾಮಿ ಎಂದು ಸಾಧಕರು ಧ್ಯಾನ ಮಾಡಬೇಕು ಎಂದು ನಮಗೆ ಹೇಳುತ್ತಾರೆ. ಈ ಸಂದರ್ಭದಲ್ಲೊಂದು ಪ್ರಶ್ನೆಯನ್ನು ನ್ಯಾಯಯುತವಾಗಿ ಕೇಳಬಹುದು. ಬ್ರಹ್ಮವು ನಮ್ಮೊಳಗೇ ಇದ್ದಾನೆಂದು ಭಾವಿಸಿ ಧ್ಯಾನ ಮಾಡಬೇಕೆಂದು ಸಾಧಕನಿಗೆ ಮೊದಲೇ ಏಕೆ ನಿರ್ದೇಶನವನ್ನು ನೀಡಲಿಲ್ಲ? ಧ್ಯಾನಕ್ಕೆ ಬಾಹ್ಯ ವಿಶ್ವವೇ ಬ್ರಹ್ಮ ಎಂಬ ವಿಚಾರಕ್ಕೆ ಆದ್ಯತೆಯನ್ನು ಏಕೆ ಕೊಡಲಾಯಿತು? ಏಕೆಂದರೆ, ಮನುಷ್ಯರ ಇಂದ್ರಿಯಗಳು ಸ್ವಭಾವತಃ ಬಾಹ್ಯ ವಸ್ತುಗಳನ್ನು ಗ್ರಹಿಸುತ್ತವೆ. ಅವುಗಳು ನೋಡಬಹುದಾದ ಮತ್ತು ಅರ್ಥಮಾಡಿಕೊಳ್ಳಬಹುದಾದ ವಿಷಯಗಳಿಂದ ಅವುಗಳ ಗಮನವನ್ನು ಹಿಂದಿರುಗಿಸಿ ಒಳಗಿನ ವಿಷಯದ ಮೇಲೆ ಅವುಗಳನ್ನು ಕೇಂದ್ರೀಕರಿಸುವುದು ಕಷ್ಟ. ಏಕೆಂದರೆ ಆ ಸೂಕ್ಷ್ಮ ವಿಷಯವನ್ನು ಇಂದ್ರಿಯಗಳು ಗ್ರಹಿಸಲಾರವು. ಸಾಮಾನ್ಯವಾದ ಇಂದ್ರಿಯ ಪ್ರತ್ಯಕ್ಷಕ್ಕೆ ಅಂತರ್ಯಾಮಿಯಾದ ಆತ್ಮನು ವಿಷಯವಾಗುವುದು ಕಷ್ಟ. ಮನಸ್ಸು ಅದು ನೋಡುವ ಸಮಸ್ತ ಹೊರಗಿನ ಪ್ರಪಂಚವು ಬ್ರಹ್ಮ ಎಂದು ಗ್ರಹಿಸಿ ಆ ವಿಚಾರಕ್ಕೆ ಹೊಂದಿಕೊಂಡು ಆ ಮೇಲೆ ಒಳಗಿರುವ ಸತ್ಯವೇ ಬ್ರಹ್ಮವೆಂಬ ವಿಚಾರಕ್ಕೆ ಧ್ಯೇಯವನ್ನು ಬದಲಾಯಿಸುವುದು ಸುಲಭವಾಗುತ್ತದೆ. ಈ ವಿಧಾನವು ಬ್ರಹ್ಮನ ಬಳಿಗೆ ಸೇರುವ ಸುಲಭ ಮಾರ್ಗ. ಆದ್ದರಿಂದ ಹೊರಗೆ ಗ್ರಹಿಸಿರುವ ಬ್ರಹ್ಮವು ಹೃದಯದೊಳಗೆ ಇರುವ ಬ್ರಹ್ಮನಿಗಿಂತ ಬೇರೆಯಲ್ಲ ಎಂದು ಬಾಹ್ಯದಿಂದ ಆಂತರಕ್ಕೆ ಹಾಕುವ ನೆಗೆತವು, ವಿಶ್ವವು ನೋಡಲಾಗುವ ಬ್ರಹ್ಮದಂತೆ ಎಂಬುದರಿಂದ ಅಂತರಾತ್ಮವು ಕಣ್ಣಿಗೆ ಕಾಣದ ಬ್ರಹ್ಮ ಎಂಬಲ್ಲಿಯವರೆಗೆ ಹಾಕುವ ನೆಗೆತವೂ ಮಾನಸಿಕವಾಗಿ ಸಾಧಿಸಲು ಸುಲಭವಾದದ್ದು. ಅಂಥ ಸತ್ಯದ ಅರಿವು ಬ್ರಹ್ಮ ತನ್ನೊಳಗೇ ಇರುವ ಸತ್ಯ ಎಂಬ ಸಾಕ್ಷಾತ್ಕಾರವನ್ನು ಅಂತಃಪ್ರಜ್ಞೆಯಿಂದ ಗಳಿಸಿಕೊಳ್ಳಬಹುದು. ಆದ್ದರಿಂದ ಅಂತಿಮವಾಗಿ ಸತ್ಯವನ್ನು ಗ್ರಹಿಸಿದವನಿಗೆ ಬ್ರಹ್ಮವು ತನ್ನ ಅನುಗ್ರಹ- ಪ್ರಕಾಶಗಳಿಂದ ತಾನೇ ಕಾಣಿಸಿಕೊಳ್ಳುವುದು,

ಈ ಸಿದ್ಧಿಯು ನಿರ್ದಿಷ್ಟವಾದ ಮಾರ್ಗವನ್ನು ಆಶ್ರಯಿಸಿದವನಿಗೆ ಮಾತ್ರ ಲಭ್ಯ. ಈ ಮಾರ್ಗವನ್ನು ವರ್ಣಿಸುತ್ತಾ ತೈತ್ತಿರೀಯ ಉಪನಿಷತ್ತು "ಗಂಟಲೊಳಗೆ ಮೊಲೆಯ ತೊಟ್ಟಿನಂಥ ಒಂದು ಸಣ್ಣ ಅಂಗವಿದೆ; ಅದರೊಳಗೆ ಸುಷುಮ್ನಾ ಎಂಬ ನಾಡಿ ನೆಲೆಗೊಂಡಿದೆ.[೩೭] ಇದು ಇಂದ್ರನ ಅಥವಾ ಬ್ರಹ್ಮನ ಮಾರ್ಗವೆಂದೂ ಪ್ರಸಿದ್ಧವಾಗಿದೆ. ಈ ಮಾರ್ಗದ ನೆರವಿನಿಂದ ನಾವು ನಮ್ಮ ನಿಜವಾದ ಆತ್ಮನ

೩೭. 'ತಾ ಯೋ ವೇದ ಸ ವೇದ ಬ್ರಹ್ಮ' *ತೈತ್ತಿರೀಯೋಪನಿಷತ್*, 1- 5- 5

ಜ್ಞಾನವನ್ನು ಪಡೆದುಕೊಳ್ಳುತ್ತೇವೆ. ಆತ್ಮವು ಸುಷುಮ್ನಾನಾಡಿಯೊಡನೆ ಮೊದಲು ಸಂಬಂಧವನ್ನು ಹೊಂದಿ ಅನಂತರ ಸುಷುಮ್ನಾ ಮೂಲಕ ತಲೆಬುರುಡೆಯ ಮೇಲಿನ ಪ್ರದೇಶಗಳನ್ನು ತಲುಪುತ್ತದೆ. ಇದಕ್ಕೆ ರೇಚಕ (ನಿಃಶ್ವಾಸ)ಎಂಬ ಪ್ರಾಣಾಯಾಮ ವಿಧಾನವು ಸಹಾಯಕವಾಗುತ್ತದೆ. ಅಂತಿಮವಾಗಿ ಆತ್ಮವು ತಲೆ ಬುರುಡೆಯಲ್ಲಿ ಇರುವ ಬ್ರಹ್ಮರಂಧ್ರದಿಂದ ಮೇಲೆ ಹೋಗುತ್ತದೆ. "ಈ ಮಾರ್ಗದಿಂದ ಮೇಲೆ ಏರುವವನು ಅಮೃತತ್ವವನ್ನು ಪಡೆಯುತ್ತಾನೆ" ಎಂದು ಕಠೋಪನಿಷತ್ತು ಹೇಳುತ್ತದೆ.[೩೮] ಭೂಃ ಎಂಬುದರಿಂದ ಪ್ರತಿನಿಧಿಸಲ್ಪಟ್ಟ ಅಗ್ನಿಯಲ್ಲೂ, ಸುವಃ ಎಂಬುದರಿಂದ ಪ್ರತಿನಿಧಿಸಲ್ಪಟ್ಟ ಆದಿತ್ಯನಲ್ಲೂ, ಮಹಃ ಎಂಬುದರಿಂದ ಪ್ರತಿನಿಧಿಸಲ್ಪಟ್ಟ ಬ್ರಹ್ಮನಲ್ಲೂ ನೀನಿರುವೆ ಎಂದು ಮುಂದೆ ಸಾಧಕನಿಗೆ ಹೇಳಲಾಗುತ್ತದೆ. ಅಧೀನತ್ವವೂ ಇಲ್ಲದ ಸ್ವತಂತ್ರತ್ವವನ್ನು, ಪಡೆಯುತ್ತಾನೆ. ಅನಂತರ ಅವನು ಬ್ರಹ್ಮದೊಡನೆ ಒಂದಾಗಿ ಮಾತು, ದೃಷ್ಟಿ, ಕೇಳ್ಮೆ ಮತ್ತು ಬುದ್ಧಿಗಳ ಮೇಲೆ ಪ್ರಭುತ್ವವನ್ನು ಪಡೆದು ಮನಸ್ಸಿನ ಪ್ರಭುವೂ ಆಗುತ್ತಾನೆ. ಅವನೇ ಬ್ರಹ್ಮನಾಗಿಬಿಡುತ್ತಾನೆ.ಆ ಬ್ರಹ್ಮದ ಶರೀರವು ಆಕಾಶ, ಸ್ವಭಾವವು ಸತ್ಯ, ಜೀವನವು ಆನಂದ, ಮನಸ್ಸು ಸಂತೋಷ ಬ್ರಹ್ಮವು ಶಾಂತಿಮಯ, ಸಮೃದ್ಧ, ಅಮೃತ.[೩೯]

ಬ್ರಹ್ಮವಾದವನಿಗೆ ದೇವತೆಗಳೂ ಪೂಜೆಯನ್ನು ಸಲ್ಲಿಸುತ್ತಾರೆ - ಎಂದು ಉಪನಿಷತ್ತು ಹೇಳುತ್ತದೆ.[೪೦] ಎಲ್ಲ ಅಶುದ್ಧಿಗಳನ್ನು ಕಳೆದುಕೊಂಡು ಆತ್ಮನೊಳಗೆ ಪ್ರವೇಶಿಸಿದ ಮನಸ್ಸಿಗೆ ಉಂಟಾಗುವ ಸಂತೋಷವನ್ನು ಶಬ್ದಗಳಿಂದ ವರ್ಣಿಸಲಾಗದು.[೪೧] ಅದನ್ನು ಅನುಭವಿಸುವುದು ಮಾತ್ರ ಸಾಧ್ಯ. ಇನ್ನೊಂದು ಉಪನಿಷತ್ತು[೪೨] ಆ ಅನುಭವವನ್ನು ಜೇನುತುಪ್ಪದಂತೆ ಎಂದು ಬಣ್ಣಿಸುತ್ತದೆ. ಈ ಪರಮೋಚ್ಚ ಸ್ಥಿತಿಗೆ ತಲುಪಿದ ಅಧ್ಯಾತ್ಮಸಾಧಕನು ಇಲ್ಲೇ ಈಗಲೇ ಬ್ರಹ್ಮವಾಗುತ್ತಾನೆ. ಇದನ್ನೇ ಬ್ರಹ್ಮಸಾಕ್ಷಾತ್ಕಾರ ಸಿದ್ಧಿ ಎನ್ನುತ್ತಾರೆ.

ಮುಂದೆ ಸಾಧಕನು ಕಣ್ಣಿಗೆ ಕಾಣಿಸುವ ದೃಶ್ಯಪ್ರಪಂಚವನ್ನು ಬ್ರಹ್ಮವೆಂದು ಕಾಣಲು ಶಿಕ್ಷಣವನ್ನು ನೀಡಲಾಗುತ್ತದೆ. ಇಲ್ಲಿ ಬ್ರಹ್ಮವೇ ಭೂಮಿ, ಅದೇ ಭೂಮಿಗೂ ಮೇಲಿನ ಲೋಕಕ್ಕೂ ಇರುವ ಅಂತರ, ಮೇಲಿನ ಲೋಕ, ಪ್ರಧಾನ

೩೮. ಇದು ನಾಡಿಗಳಲೆಲ್ಲ ಅತ್ಯಂತ ಪ್ರಮುಖವಾದುದು.

೩೯. ಶತಂ ಚೈಕಾ ಚ ಹೃದಯಸ್ಯ ನಾಡ್ಯಃತಾಸಾಂ ಮೂರ್ಧಾನಮಭಿನಿಃ ಸೃತೈಕಾ। ತಯೋರ್ಧ್ವ ಮಾಯನ್ನಮೃತತ್ವ ಮೇತಿ ವಿಷ್ವಜ್ ನಾಡ್ಯ ಉತ್ಕ್ರಮಣೇ ಭವಂತಿ॥ *ಕಠೋಪನಿಷತ್*, 6. 16

೪೦. ಆಕಾಶ ಶರೀರಂ ಬ್ರಹ್ಮ, ಸತ್ಯಾತ್ಮ, ಪ್ರಾಣಾರಾಮಃ ಮನಃ ಸದನಮ್, ಶಾಂತಿ ಸಮೃದ್ಧ ಮಮೃತಮ್। (*ತೈತ್ತಿರೀಯೋಪನಿಷತ್* 1. 6. 2.

೪೧. ಸರ್ವೇಸ್ಮೈ ದೇವಾ ಬಲಿ ಮಾವಹಂತಿ (ಅದೇ,1- 5- 5)

೪೨. ತಾರ ಸಾರೋಪನಿಷತ್.

ಮತ್ತು ಮಧ್ಯದ ದಿಕ್ಕುಗಳು ಎಂದು ಹೇಳಲಾಗುತ್ತದೆ. ಇವು ಐದು ಮೂಲಪದಾರ್ಥಗಳ ಮೊದಲನೆಯ ಗುಂಪು ಎರಡನೆಯ ಗುಂಪಿನಲ್ಲಿ ಬ್ರಹ್ಮವು ಬೆಂಕಿ, ಗಾಳಿ, ಸೂರ್ಯ, ಚಂದ್ರ ಮತ್ತು ನಕ್ಷತ್ರಗಳು. ಮೂರನೆಯದರದಲ್ಲಿ ನೀರು, ಗ್ರಹಗಳು, ಮರಗಳು, ಆಕಾಶ, ಮತ್ತು ಸರ್ವವ್ಯಾಪಿ ಆತ್ಮ- ಇವು ಬ್ರಹ್ಮ. ಈ ಮೇಲಿನ ಮೂರು ಗುಂಪುಗಳನ್ನೂ ಸ್ಥೂಲ ಪದಾರ್ಥಗಳೆಂದು ವರ್ಗೀಕರಿಸಿದ್ದಾರೆ. ಮತ್ತೆ ಮೂರು ಗುಂಪುಗಳ ಎರಡು ಗಣಗಳು ಒಳಗಿನ ಎರಡು ಸೂಕ್ಷ್ಮ ವಸ್ತುಗಳಿಗೆ ಸಂಬಂಧಿಸಿವೆ. ಈ ಗಣದಲ್ಲಿನ ಮೊದಲನೆಯ ಅಪಾನ, ವ್ಯಾನ, ಉದಾನ ಮತ್ತು ಸಮಾನ. ಈ ಗಣದ ಎರಡನೆಯ ಗುಂಪಿನಲ್ಲಿ ಕಣ್ಣು, ಕಿವಿ, ಮನಸ್ಸು, ವಾಕ್ ಮತ್ತು ಸ್ಪರ್ಶಗಳಿವೆ. ಈ ಶ್ರೇಣಿಯಲ್ಲಿ ಮೂರನೆಯ ಗುಂಪು ಚರ್ಮ, ಮಾಂಸ, ಮಾಂಸಖಂಡ, ಎಲುಬು ಮತ್ತು ಮಜ್ಜಾ ಇವುಗಳನ್ನು ಒಳಗೊಂಡಿವೆ. ಹೀಗೆ ಹೊರಗಿನ ಮತ್ತು ಒಳಗಿನ ಐದೈದು ಗುಂಪುಗಳು ಬ್ರಹ್ಮವು ಕ್ರಿಯೆಯನ್ನು ಮಾಡುವ ಸ್ಥಳಗಳೆಂದು ಸಂಕೇತಿಸಲಾಗಿದೆ.

ಒಳಗಿನ ಐದು ಗುಂಪುಗಳೂ ಹೊರಗಿನ ಐದು ಗುಂಪುಗಳೊಡನೆ ಒಟ್ಟಿಗೆ ಕೊನೆಗೊಂಡು ಅಂತಿಮವಾಗಿ ಒಂದಾಗಿ ಸೇರಿಕೊಳ್ಳುತ್ತವೆ. ಆದ್ದರಿಂದ ಬ್ರಹ್ಮದ ವಿಶ್ವವು ನಿಸರ್ಗದಲ್ಲಿ ಐದು ಸ್ತರಗಳನ್ನು ಹೊಂದಿರುವುದೆಂದು ಪರಿಗಣಿಸಲ್ಪಟ್ಟಿದೆ. ವಿರಾಟ್ ಎಂದು ಅದನ್ನು ಧ್ಯಾನಿಸಬೇಕು. 'ವಿರಾಟ್' ಅನ್ನು ಸಾಧಿಸಿದವನಿಗೆ ಮೋಕ್ಷವು ಸಿಗುತ್ತದೆ ಎಂದು ಹೇಳುತ್ತಾರೆ.

ಮುಂದೆ ಬೀಜಾಕ್ಷರ 'ಓಮ್' ಎಂಬುದನ್ನು ಚರ್ಚಿಸಲಾಗಿದೆ. 'ಓಮ್' ಎಂಬ ಅಕ್ಷರವನ್ನೇ ಬ್ರಹ್ಮ ಎಂದು ಧ್ಯಾನಿಸಬೇಕು. ಈ ಅಕ್ಷರವು ಸಮಸ್ತ ವಿಶ್ವವನ್ನು ಪ್ರತಿನಿಧಿಸುವುದರಿಂದ ಅದನ್ನು ಬ್ರಹ್ಮನೊಡನೆ ಒಂದೆಂದು ಭಾವಿಸಬೇಕು. ಒಂದು ವಿಗ್ರಹವನ್ನು ವಿಷ್ಣು ಎಂದು ಭಾವಿಸುತ್ತೇವೆ, ಹಾಗೆ 'ಓಮ್' ಎಂಬ ಅಕ್ಷರವೇ ಬ್ರಹ್ಮ ಎಂದು ಮನನ ಮಾಡಬೇಕು. 'ಓಮ್' ನಿರ್ಗುಣ ಬ್ರಹ್ಮವನ್ನು ಸಂಕೇತಿಸುತ್ತದೆ. ಹಿಂದೆ ಮಾಡಿದ ಅವಲೋಕನಗಳು ಓಮ್ ಎಂಬ ಅಕ್ಷರವು ಸರ್ವವ್ಯಾಪಿ ಎಂಬುದನ್ನು ತೋರಿಸಿವೆ. ಬ್ರಹ್ಮವೂ ಸರ್ವವ್ಯಾಪಿ. ಆದ್ದರಿಂದ ಅಧ್ಯಾತ್ಮಸಾಧಕನು ಓಂಕಾರವೇ ಬ್ರಹ್ಮ ಎಂದು ಧ್ಯಾನಿಸುವುದು ಅಥವಾ ಮನನ ಮಾಡುವುದು ಯುಕ್ತ. ಪವಿತ್ರ ಗ್ರಂಥಗಳು ಓಂಕಾರವನ್ನು ಅತ್ಯುತ್ಕೃಷ್ಟವೆಂದು ಹೊಗಳುತ್ತವೆ. ಅದನ್ನು ಸಮಸ್ತ ವೇದೋಕ್ತ ಯಜ್ಞದೊಡನೆ ಸಂಬಂಧಿಸುತ್ತವೆ. ಆದ್ದರಿಂದ ಧ್ಯಾನಕ್ಕೆ ಓಂಕಾರ ಶ್ರೇಷ್ಠವಾದ ಮಂತ್ರ.

ಈ ಧ್ಯಾನದ ಜೊತೆಗೆ ಮನುಷ್ಯನು ಶ್ರದ್ಧಾ ಪೂರ್ವಕವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು. ಆ ಕರ್ತವ್ಯಗಳು ಒಳ್ಳೆಯ ಕೆಲಸವನ್ನೇ ಮಾಡುವುದು, ಸತ್ಯವನ್ನೇ

ನುಡಿಯುವುದು, ತಪಸ್ಸು, ಅಗ್ನಿರಕ್ಷಣೆ, ಅತಿಥಿಸತ್ಕಾರ, ಜವಾಬ್ದಾರಿಗಳ ನಿರ್ವಹಣೆ, ಮತ್ತು ಸಂತಾನೋತ್ಪಾದನೆ. ಇವೆಲ್ಲವುಗಳ ಜೊತೆಗೆ ಅಧ್ಯಯನ ಮತ್ತು ಅಧ್ಯಾಪನಗಳನ್ನೂ ಕೂಡಿಸಿಕೊಳ್ಳಬೇಕೆಂದು ಹೇಳಿದ್ದಾರೆ.[೪೩]

ಈ ಉಪನಿಷತ್ತಿನ ಪರಿಚ್ಛೇದನದಲ್ಲಿ ಅದರ ಮುಖ್ಯತ್ವದ ಅಧ್ಯಾಯನ ಅಧ್ಯಾಪನಗಳ ಪುರುಚ್ಚಾರಣೆಯಿಂದ ಸೂಚಿತವಾಗಿದೆ. ಮತ್ತೆ ಈ ಹಲವಾರು ಕರ್ತವ್ಯಗಳಲ್ಲಿ ಮುಖ್ಯವಾಗಿ ಆಚರಿಸಲ್ಪಡಬೇಕಾದವುಗಳು ಯಾವುವು? ಕೆಲವರು ಸತ್ಯವಚನೆಯನ್ನೇ ವಿಧಿಸುತ್ತಾರೆ. ಮತ್ತೆ ಕೆಲವರು ತಪಸ್ಸಿನ ಆಚರಣೆಯನ್ನು ಮತ್ತೆ ಕೆಲವರು ಅಧ್ಯಯನ ಅಧ್ಯಾಪನಗಳಿಗೆ ಗಮನವನ್ನು ನೀಡಬೇಕೆನ್ನುತ್ತಾರೆ.[೪೪] ಹೆಚ್ಚು ಜನರು ಒಪ್ಪಿರುವ ವಿಚಾರವೇನೆಂದರೆ, ವೇದಗಳ ಅಧ್ಯಯನವನ್ನು ಮಾಡಬೇಕು, ಅದರ ವಿಧಿಗಳನ್ನು ಅನುಷ್ಠಾನದಲ್ಲಿ ತರಬೇಕು, ಏಕೆಂದರೆ ವೇದವು ಮಾತ್ರ ಸಾವನ್ನು ಗೆಲ್ಲಲು ಮತ್ತು ಬ್ರಹ್ಮದೊಡನೆ ಐಕ್ಯವನ್ನು ಪಡೆಯಲು ನಮಗೆ ಶಕ್ತಿಯನ್ನು ನೀಡುತ್ತದೆ. ಈ ಪಾಠವನ್ನು ಅಂರಿತ ವ್ಯಕ್ತಿಗೆ ಜ್ಞಾನೋದಯವು ಉಂಟಾಗುತ್ತದೆ. ಪ್ರಕಾಶವು ಬೆಳಗುತ್ತದೆ. ಈ ವಿಚಾರವು 'ಅಹಂ ವೃಕ್ಷಸ್ಯ' ಎಂಬ ಮಂತ್ರದಲ್ಲಿ[೪೫] ಅಡಕವಾಗಿದೆ. ಎಲ್ಲ ಸಾಧಕರೂ ಮನಸ್ಸಿನ ಶುದ್ಧಿಯನ್ನು ಜಪಿಸಬೇಕೆಂದು ಸ್ಪಷ್ಟವಾಗಿ ಸೂಚಿಸಲಾಗಿದೆ. ಈ ಮಂತ್ರದ ಜಪದಿಂದ ಸಾಧಕನ ಮನಸ್ಸು ಶುದ್ಧವಾಗುತ್ತದೆ ಮತ್ತು ಅವನು ತಾನು ಬ್ರಹ್ಮಾಭಿನ್ನ ಎಂಬ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ವೇದ ವಿಹಿತ ಕಾರ್ಯಗಳನ್ನೂ ಕರ್ತವ್ಯಗಳನ್ನೂ ಶ್ರದ್ಧಾಪೂರ್ವಕವಾಗಿ ನಿಷ್ಠಾವಂತನಾಗಿ ಮಾಡಿದವನಿಗೆ ಬ್ರಹ್ಮದರ್ಶನವು ಸಾಧ್ಯವಾಗುತ್ತದೆ.

---

೪೩. ವೇದಮನೋಚ್ಯಾಚಾರ್ಯೋಽ ತೇವಾಸಿನ ಮನುಶಾಸ್ತಿ। ಸತ್ಯಂ ವದ, ಧರ್ಮಂ ಚರ। ಸ್ವಧ್ಯಾಯಾನ್ಮಾ ಪ್ರಮದ। ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀ। ಸತ್ಯಾನ್ನ ಪ್ರಮದಿತವ್ಯಮ್। ಧರ್ಮಾನ್ನ ಪ್ರಮದಿತವ್ಯಮ್ ಕುಶಲಾನ್ನ ಪ್ರಮದಿತವ್ಯಮ್।ಭೂತ್ಯೈ ನ ಪ್ರಮದಿತವ್ಯಮ್। ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್। ದೇವ ಪಿತೃಕಾರ್ಯಾಭ್ಯಾಂ ನ ಪ್ರಮದಿವ್ಯಮ್। ಮಾತೃದೇವೋ ಭವ, ಪಿತೃದೇವೋ ಭವ। ಆಚಾರ್ಯದೇವೋ ಭವ। ಅತಿಥಿ ದೇವೋ ಭವ। ಯಾನ್ಯನವದ್ಯಾನಿ ಕರ್ಮಾಣಿ ತಾನಿ ಸೇವಿತವ್ಯಾನಿ। ನೋ ಇತರಾಣಿ। ಯಾನ್ಯ ಸ್ಮಾಕಗ್. ಸುಚರಿತಾನಿ। ತಾನಿ ತ್ವಯೋಪಾಸ್ಯಾನಿ । ನೋ ಇತರಾಣಿ। ಯೇ ಕೇ ಚಾಸ್ಮತ್ ಶ್ರೇಯಾಗ್ ಬ್ರಾಹ್ಮಣಾಃ । ತೇಷಾಂ ತ್ವಯಾಸನೇನ ಪ್ರಶ್ವಸಿತವ್ಯಮ್। ಶ್ರದ್ಧಯಾ ದೇಯಮ್। ಅಶ್ರದ್ಧಯಾ ಅದೇಯಮ್ ಕ್ರಿಯಾ ದೇಯಮ್। ಹ್ರಿಯಾ ದೇಯಮ್। ಭಿಯಾ ದೇಯಮ್। ಸಂವಿದಾ ದೇಯಮ್।ಅಥ ಯದಿ ತೇ ಕರ್ಮ ವಿಚಿಕಿತ್ಸಾ ವಾ ವೃತ್ತ ವಿಚಿಕಿತ್ಸಾ ವಾ ಸ್ಯಾತ್। ಯೇ ತತ್ರ ಬ್ರಾಹ್ಮಣಾಃ ಸ್ಸಮರ್ಶಿನಃ। ಯುಕ್ತಾ ಆಯುಕ್ತಾಃ। ಅಲೂಕ್ಷಾ ಧರ್ಮ ಕಾಮಾಃಸ್ಯುಃ। ಯಥಾ ತೇ ತೇಷುವರ್ತೇರನ್ ತಥಾ ತತ್ರ ವರ್ತೇಥಾಃ। ಅಥಾ ಭ್ಯಾಖ್ಯಾತೇಷು। ಯೇ ತತ್ರ ಬ್ರಾಹ್ಮಣಾಃ ಸಂಮರ್ಶಿನಃ। ಯುಕ್ತಾ ಆಯುಕ್ತಾಃ। ಅಲೂಕ್ಷಾ ಧರ್ಮ ಕಾಮಾಃ ಸ್ಯುಃ । ಯಥಾ ತೇ ತೇಷು ವರ್ತೇರನ್ । ತಥಾ ತೇಷು ವರ್ತೇಥಾಃ। ಏಷ ಆದೇಶಃ। ಏಷ ಉಪದೇಶಃ। ಏಷಾ ವೇದೋಪನಿಷತ್। ಏತದನುಶಾಸನಮ್, ಏವಮುಪಾಸಿತವ್ಯಮ್। ಏವಮು ಚೈತದುಪಾಸ್ಯಮ್। (*ತೈತ್ತಿರೀಯೋಪನಿಷತ್*, I-11-1)

೪೪. ಸತ್ಯಮಿತಿ ಸತ್ಯವಾಚಾ ರಾಥೀತರಃ ತಪ ಇತಿ ತಪೋನಿತ್ಯಃ ಪೌರುಶಿಷ್ಟಿಃ । ಸ್ವಾಧ್ಯಾಯ ಪ್ರವಚನೇ ಏವೇತಿ ನಾಕೋ ಮೌದ್ಗಲ್ಯಃ । ತದ್ಧಿ ತಪಸ್ತದ್ಧಿ ತಪಃ (*ತೈತ್ತಿರೀಯೋಪನಿಷತ್*, I-9-1)

೪೫. ಅಹಂ ವೃಕ್ಷಸ್ಯ ರೇರಿವಾ। ಕೀರ್ತಿಃ ಪೃಷ್ಠಾಂ ಗಿರೇರಿವ। ಊರ್ಧ್ವ ಪವಿತ್ರೋ ವಾಜಿನೀವ ಸ್ವಮೃತ ಮಸ್ಮಿ। ದ್ರವಿಣಗ್ಂ ಸುವರ್ಚ। ಸುಮೇಧಾ ಅಮೃತೋಕ್ಷಿತಃ । ಇತಿ ತ್ರಿಶಂಕೋರ್ವೇದಾನುವಚನಂ ನಾನು ಎಲ್ಲದರಲ್ಲೂ ಇದ್ದೇನೆ, ಎಲ್ಲವನ್ನೂ ನಡೆಸುತ್ತಿದ್ದೇನೆ. ನಾನು ಮುಕ್ತಾತ್ಮ ಎಂದು ತಾತರ್ಯ (*ತೈತ್ತಿರೀಯೋಪನಿಷತ್* I-10-1)

ಅಧ್ಯಯನದ ಕೊನೆಯಲ್ಲಿ ಆಚಾರ್ಯನು ಶಿಷ್ಯನಿಗೆ ಸತ್ಯವನ್ನೇ ಹೇಳಲು ಮತ್ತು ನಡತೆಯಲ್ಲಿ ಧರ್ಮವನ್ನೇ ಆಚರಿಸಲು ಹೇಳುತ್ತಾನೆ ಎಂದು ಉಪನಿಷತ್ತಿನಿಂದ ನಾವು ತಿಳಿದಿದ್ದೇವೆ. ಮುಂದೆ ವೇದಗಳ ವಿದ್ಯೆಯು ಮುಗಿದ ಮೇಲೆ ಶಿಷ್ಯನು ಗುರುವಿಗೆ ತನ್ನ ಕಾಣಿಕೆಯನ್ನು ಸಲ್ಲಿಸಬೇಕು. ಅನಂತರ ಅವನು ಗೃಹಸ್ಥಧರ್ಮವನ್ನು ಸ್ವೀಕರಿಸಬೇಕು. ತನ್ನ ವಂಶವನ್ನು ಮುಂದುವರಿಸಬೇಕು. ದೇವತೆಗಳ ಮತ್ತು ಪಿತೃಗಳ ಋಣವನ್ನು ತೀರಿಸಬೇಕು. ತಾಯಿ, ತಂದೆ, ಗುರು, ಅತಿಥಿ - ಇವರಿಗೆ ಸದಾ ಭಕ್ತಿಯನ್ನು ತೋರಿಸಬೇಕು. ಈ ಎಲ್ಲ ಆದೇಶಗಳನ್ನು ಪಾಲಿಸುವುದರ ಜೊತೆಗೆ, ವಿಚಾರಶೀಲರೂ ಪೂಜ್ಯರೂ ಆದವರು ಅನುಸರಿಸುವ ಸದಾಚಾರಗಳನ್ನು ಸಾಧಕನು ಅಳವಡಿಸಿಕೊಳ್ಳಬೇಕು. ಶ್ರದ್ಧೆಯಿಂದಲೂ ವಿನಯದಿಂದಲೂ ದಾನಗಳನ್ನು ನೀಡಬೇಕು. ಯಾವುದಾದರೂ ಕೆಲಸವನ್ನು ಮಾಡಬೇಕಾದಾಗ ಸಂದೇಹವು ಬಂದಲ್ಲಿ ವಿವೇಕಿಗಳೂ ಸತ್ಕಾರ್ಯತತ್ಪರರೂ ಕರುಣಾಳುಗಳೂ ಆಗಿರುವವರು ಹೇಗೆ ನಡೆದುಕೊಳ್ಳುವರೋ ಹಾಗೆ ನಡೆದುಕೊಳ್ಳಬೇಕು. ಪರಬ್ರಹ್ಮದ ಜ್ಞಾನವನ್ನು ಪಡೆಯಲು ಇಚ್ಛಿಸಿದ ಜಿಜ್ಞಾಸುಸಾಧಕರು ಉಪನಿಷತ್ತಿನ ಈ ಸಂದೇಶವನ್ನು ಕೇಳಿ, ಅದರ ಆದೇಶದಂತೆ ನಡೆದುಕೊಳ್ಳಬೇಕೆಂದು ನಿರ್ದೇಶಿಸಲಾಗಿತ್ತು.

ಬ್ರಹ್ಮವನ್ನು ತಿಳಿದುಕೊಳ್ಳಲು ಬಯಸುವ ವ್ಯಕ್ತಿ ಈ ಎಲ್ಲ ಆದೇಶಗಳಿಗೆ ವಿಧೇಯತೆಯಿಂದ ಅನುವರ್ತಿಯಾಗಿರುವುದು ಆವಶ್ಯಕವೆ ಎಂದು ಕೇಳಬಹುದು. ಇದಕ್ಕೆ ಉತ್ತರವೇನೆಂದರೆ ಈ ಕರ್ತವ್ಯಗಳೆಲ್ಲ ಜ್ಞಾನದ ಸಿದ್ಧಿಗೆ ಅನುಕೂಲವಾಗಿವೆ, ಏಕೆಂದರೆ ಅವು ವ್ಯಕ್ತಿಯನ್ನು ಪರಿಶುದ್ಧನನ್ನಾಗಿ ಮಾಡುತ್ತವೆ. ಈ ಕರ್ತವ್ಯಗಳನ್ನು ಮಾಡಿದರೆ ಜ್ಞಾನಕ್ಕೆ ಇರುವ ವಿಘ್ನಗಳು ದೂರವಾಗುತ್ತವೆ. ಅಂಥ ಜ್ಞಾನವು ಹುಟ್ಟಿದಾಗ ಹೃದಯದ ಎಲ್ಲ ಆಸೆಗಳೂ ಅದೃಶ್ಯವಾಗುತ್ತವೆ, ಎಲ್ಲ ಸಂದೇಹಗಳು ನಿವಾರಣೆಯಾಗುತ್ತವೆ ಮತ್ತು ಎಲ್ಲ ಕರ್ಮಗಳೂ ಕ್ಷೀಣಿಸುತ್ತವೆ.[೪೬] ಜ್ಞಾನದ ಆ ಸ್ಥಿತಿಯಲ್ಲಿ ಬ್ರಹ್ಮ ಸಾಕ್ಷಾತ್ಕಾರವಾಗುತ್ತದೆ; ಅನಾದಿ, ಮಹತ್, ಸುದ್ಧ, ಶಾಶ್ವತ ಬ್ರಹ್ಮದ ಅನುಭವವಾಗುತ್ತದೆ.[೪೭] ಕೊನೆಯ ಪ್ರಾರ್ಥನೆ ಅಥವಾ ಶಾಂತಿಮಂತ್ರದಲ್ಲಿ ಮೊದಲು ಕಲಿಸಲಾದ ಪಾಠವನ್ನು ಮತ್ತೆ ಒತ್ತಿ ಹೇಳಲಾಗಿದೆ. ಸಾಧಕನು ದೃಷ್ಟದಿಂದ ಅದೃಶ್ಯದೆಡೆಗೆ ಒಯ್ಯಲ್ಪಟ್ಟು ತನ್ನನ್ನೂ ಆಚಾರ್ಯನನ್ನೂ ಕಾಪಾಡಿದುದು ಬ್ರಹ್ಮವೇ ಎಂದು ಅರಿತುಕೊಳ್ಳುತ್ತಾನೆ. ಗುರು ಮತ್ತು ದೇವತೆಗಳು ತನಗೆ ಮಾಡಿದ

೪೬. ಭಿದ್ಯತೇ ಹೃದಯಗ್ರಂಥಿಃ ವಿದ್ಯೇತೇ ಸರ್ವಸಂಶಯಾಃ ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ (ಮುಂಡಕೋಪನಿಷತ್ 2-2-9)

೪೭. ಏಕಧೈವಾನುದ್ರಷ್ಟವ್ಯಮ್ ಏತದಪ್ರಮೇಯಂ ಧ್ರುವಮ್। ವಿರಜಃ ಪರ ಆಕಾಶಾತ್ ಅಜ ಆತ್ಮಾ ಮಹಾನ್ ದ್ರುವಃ ॥ (ಬೃಹದಾರಣ್ಯಕೋಪನಿಷತ್ 4-4-20)

ಉಪಕಾರವನ್ನು ಶಿಷ್ಯನು ನೆನಪಿಸಿಕೊಳ್ಳುತ್ತಾನೆ. ಅವರಿಗೆ ಪ್ರಾರ್ಥನೆಯಿಂದ ಕೃತಜ್ಞತೆಯನ್ನು ಅರ್ಪಿಸುತ್ತಾನೆ. ದೇವತೆಗಳು ನಿಶ್ಚಿತವಾಗಿ ಎಲ್ಲಿ ವಿಘ್ನಗಳನ್ನೂ ಕಡಿದುಹಾಕಿ ಅವನ ಪಾಪಗಳನ್ನು ಕಳೆದು ಶುದ್ಧೀಕರಿಸಿದ್ದಾರೆ. ಆ ಮೂಲಕ ಅವನು ಬ್ರಹ್ಮದ ಅನುಗ್ರಹವನ್ನು ಸ್ವೀಕರಿಸಲು ಪಾತ್ರನಾಗುವಂತೆ ಮಾಡಿದ್ದಾರೆ. ತನ್ನ ಅಧ್ಯಾತ್ಮಶಿಷ್ಯನಿಗೆ ಕೊಟ್ಟ ಯೋಗ್ಯ ಶಿಕ್ಷಣದಿಂದ ಗುರು 'ಸಾಧಕ ಮತ್ತು ಬ್ರಹ್ಮ' ಇವರ ಐಕ್ಯವನ್ನು ದೃಢವಾಗಿ ಪ್ರತಿಪಾದಿಸಿದ್ದಾನೆ.

ಇಲ್ಲಿಯವರೆಗೆ ಮಾನವನ ಆತ್ಮವನ್ನು ನಿತ್ಯ ಸ್ಥಿತಿಯ ದೃಷ್ಟಿಯಿಂದ ಪರೀಕ್ಷಿಸಿದ್ದೇವೆ. ಈ ದೃಷ್ಟಿಕೋನದಿಂದ ಜೀವಾತ್ಮನು ಪರಮಾತ್ಮನಿಗೆ ಅಭಿನ್ನನು. ಅಧ್ಯಾತ್ಮ ಪ್ರಯತ್ನಗಳ ಸಾರಸರ್ವಸ್ವವಾದ ಜೀವಾತ್ಮನು ತನ್ನ ಮೂಲಸ್ವರೂಪವಾದ ಬ್ರಹ್ಮಾಭಿನ್ನತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಅವನಿಗೆ ಶಕ್ತಿಯನ್ನು ನೀಡುವುದಾಗಿದೆ. ಈ ಪರಮಫಲಾವಸ್ಥೆಗೆ ಕರೆದೊಯ್ಯುವ ಏಕೈಕ ಮಾರ್ಗವೇ ವೈರಾಗ್ಯ. ಆದ್ದರಿಂದ ವೈರಾಗ್ಯವೆಂಬ ಪರಿಕಲ್ಪನೆಯ ಆಗು ಹೋಗುಗಳನ್ನು ಸ್ಪಷ್ಟಪಡಿಸಿಕೊಳ್ಳುವುದು ನಮಗೆ ಪ್ರಯೋಜನವುಳ್ಳದ್ದಾದೀತು. ಏಕೆಂದರೆ ಬ್ರಹ್ಮಜ್ಞಾನದ ಪ್ರಾಪ್ತಿಯಲ್ಲಿ ವೈರಾಗ್ಯವು ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತದೆ.

ಅಭ್ಯಾಸ ಮತ್ತು ವೈರಾಗ್ಯಗಳಿಂದ ಮನಸ್ಸನ್ನು ಹತೋಟಿಗೆ ತರಬಹುದೆಂದು ಶ್ರೀಕೃಷ್ಣನು ಅರ್ಜುನನಿಗೆ ತಿಳಿಸುತ್ತಾನೆ. "ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ।" 'ಮನಸ್ಸು' ಎಂದು ಯಾವುದನ್ನು ನಾವು ಕರೆಯುತ್ತೇವೋ, ಅದು ಒಂದು ಚಿತ್ತಶಕ್ತಿ. ಅಭ್ಯಾಸ-ವೈರಾಗ್ಯಗಳೆಂಬ ಎರಡು ಪ್ರಕ್ರಿಯೆಗಳಿಂದ ಆ ಮನಸ್ಸನ್ನು ಶಿಸ್ತಿಗೆ ಒಳಪಡಿಸಿದಾಗ ಅದನ್ನು ದೊಡ್ಡಸಿದ್ಧಿಯಲ್ಲಿ ಫಲಿಸಲು ಕಾಲುವೆಗಳಲ್ಲಿ ಹರಿಯುವಂತೆ ಮಾಡಬಹುದು. ಆ ಮನಸ್ಸಿನ ಶಕ್ತಿಯೊಳಗೆ ಸಿಗುವ ಎಲ್ಲ ಸಿದ್ಧಿಗಳಲ್ಲಿ ಸಾಕ್ಷಾತ್ ಪರಮಾತ್ಮನೊಡನೆ ಸಂಬಂಧವನ್ನು ಹೊಂದುವುದು ಅತ್ಯಂತ ಪ್ರಶಂಸನೀಯವಾದುದು. ಮನಸ್ಸಿನ ನಿರೋಧ ಅಥವಾ ನಿಯಂತ್ರಣವು ಧಾರಣಾ, ಧ್ಯಾನ ಮತ್ತು ಸಮಾಧಿ ಎಂಬ ಪ್ರಕ್ರಿಯೆಗಳಿಂದ ಸಾಧ್ಯವಾಗುವುದೆಂದು ಯೋಗ ಶಾಸ್ತ್ರದಿಂದ ನಾವು ಅರಿತಿದ್ದೇವೆ. ಶಾರೀರ-ಅಭ್ಯಾಸಗಳಾದ ಉಸಿರಿನ ಮತ್ತು ಜ್ಞಾನೇಂದ್ರಿಯಗಳ ನಿಯಂತ್ರಣಗಳು, ಎಂದರೆ ಪ್ರಾಣಾಯಾಮ ಮತ್ತು ಪ್ರತ್ಯಾಹಾರಗಳು, ಮನೋನಿರೋಧಕ್ಕೆ ಸಹಕಾರಿಗಳು. ಮತ್ತೆ ಇವುಗಳನ್ನು ಯಮ, ನಿಯಮ, ಆಸನಗಳು ದೃಢವಾಗಿ ಮಾಡುತ್ತವೆ. ಸಾಧಕನ ನಿಯಂತ್ರಣಕ್ಕೆ ಸಿಕ್ಕಿದ ಮನಸ್ಸಿನ ಅತ್ಯುನ್ನತವಾದ ಗುರಿಯು ಪರಮಾತ್ಮನೊಡನೆ ಸಾಮರಸ್ಯ ಅಥವಾ ಭಗವತ್‌ಸಾಕ್ಷಾತ್ಕಾರ. ಇದಕ್ಕೆ ಬೇಕಾದ ಮೊದಲ ಹೆಜ್ಜೆ ತನ್ನನ್ನು ತಾನು ತಿಳಿದುಕೊಳ್ಳುವುದು, ಅಥವಾ ಆತ್ಮಜ್ಞಾನ. ಇದೇ ಕೈವಲ್ಯ. ಪಾತಂಜಲಸೂತ್ರಗಳ ಕೊನೆಯ ಅಧ್ಯಾಯವು (ನಾಲ್ಕನೆಯ ಪಾದವು)

ಈ ವಿಷಯವನ್ನೇ ವಿಶದಪಡಿಸುತ್ತದೆ. ಈ ವೇದಾಂತತತ್ತ್ವವು ಸರ್ವವಿದಿತವಾಗಿದ್ದು ಸೇಂಟ್ ಆನ್‌ಸೆಲ್ಮರ "ನೀನು ಏನಾಗಿರುವೆಯೋ ಅದಾಗು" ಎಂಬ ವಚನಕ್ಕೂ ಹೊಂದಿಕೊಳ್ಳುತ್ತದೆ (Become what thou art).

ವೈರಾಗ್ಯದಿಂದಲೂ ಮನೋನಿಯಂತ್ರಣದಿಂದಲೂ ಮನಃಶಕ್ತಿಯ ಏಕಾಗ್ರೀಕರಣವು ಸಾಧಕನಿಗೆ ಅವನ ಆತ್ಮದ, ಮತ್ತು ತನ್ಮೂಲಕ ಜಗದಾತ್ಮದ ಅನಾವರಣಕ್ರಿಯೆಯಲ್ಲಿ ಆಧ್ಯಾತ್ಮಿಕ ಮೌಲ್ಯವನ್ನು ಹೊಂದಿದೆ. ಅಭ್ಯಾಸ-ವೈರಾಗ್ಯಗಳಿಂದ ನಿಯಂತ್ರಣಕ್ಕೆ ಒಳಪಟ್ಟ ಮಾನವ ಮನಸ್ಸಿನ ವಿಸ್ಮಯಗಳಿಗೆ ಕೀಲಿಕೈಯನ್ನು ಅದನ್ನು ಪಾಲಿಸುವ, ಪೋಷಿಸುವ ಮತ್ತು ವ್ಯಾಪಿಸಿರುವ ದಿವ್ಯ ಮನಸ್ಸಿನಲ್ಲಿ ಹುಡುಕಬೇಕು. ಆದ್ದರಿಂದ ಆತ್ಮನಿಗೆ ಆಶ್ರಯವಾಗಿರುವ ಮಾನವ ಶರೀರವು ಭಗವಂತನು ವಾಸ ಮಾಡುವ ದೇವಾಲಯ ಅಥವಾ ಮಂಟಪ. "ಮಾನವ ಶರೀರಕ್ಕಿಂತ ಹೆಚ್ಚು ಪವಿತ್ರವಾದುದು ಬೇರೆ ಇಲ್ಲ. ಮಾನವನ ಮುಂದೆ ಬಗ್ಗಿ ಮಾಡುವ ನಮಸ್ಕಾರ ಎಂದರೆ ಮಾಂಸದಲ್ಲಿ ಇರುವ ದೈವತ್ವದ ಅನಾವರಣಕ್ಕೆ ತೋರಿಸುವ ಭಕ್ತಿ. ಮಾನವ ಶರೀರದ ಮೇಲೆ ಕೈಯನ್ನಿಟ್ಟಾಗ ನಾವು ಭಗವಂತನನ್ನೇ ಮುಟ್ಟುತ್ತಿದ್ದೇವೆ" ಎಂದು ನೊವಾಲಿಸ್ ಹೇಳುತ್ತಾನೆ.

ಬ್ರಹ್ಮಜ್ಞಾನಿಗಳು ಮಾನವ ಕುಲದ ಭರವಸೆಗಳು ವೈರಾಗ್ಯ ಅವರನ್ನು ಇತರರಿಂದ ಬೇರ್ಪಡಿಸಿ ಗುರುತಿಸುತ್ತದೆ. ಮನಸ್ಸು ಬಾಹ್ಯ ವಿಷಯಗಳ ಕಡೆಗೆ ಓಡುತ್ತದೆ. ಅಂತರ್ವೀಕ್ಷಣೆಗಾಗಿ ಅದನ್ನು ಹಿಂದಕ್ಕೆ ತರಬೇಕು. ಅದನ್ನು ಭಗವದ್ಗೀತೆ ಹೀಗೆ ಹೇಳಿದೆ[೪೮]; ಮನಸ್ಸು ಚಂಚಲವಾದುದರಿಂದ ಅದು ಎಲ್ಲೆಲ್ಲೋ ಓಡಿ ಹೋಗುತ್ತದೆ. ಆ ಸ್ಥಳಗಳಿಂದ ಅದನ್ನು ಎಳೆದು ತರಬೇಕು ಮತ್ತು ಆತ್ಮನಲ್ಲಿ ಸ್ಥಿರವಾಗಿ ನಿಲ್ಲಿಸಬೇಕು. ಮನಸ್ಸಿನ ಚಾಂಚಲ್ಯವನ್ನು ತಡೆಗಟ್ಟುವುದು, ಅದು ತನ್ನನ್ನು ಹಾಳು ಮಾಡಿಕೊಳ್ಳುವ ವಿಷಯವಸ್ತುಗಳಿಂದ ಅದನ್ನು ಹಿಂದೆ ಎಳೆದು ತರುವುದು, ಆತ್ಮಕ್ಕೆ ಅದನ್ನು ಭದ್ರವಾಗಿ ಕಟ್ಟಿಹಾಕುವುದು- ಇದೇ ಸಾಧಕನು ಮಾಡಬೇಕಾದ ಕಾರ್ಯ. ವೈರಾಗ್ಯವು ಕೇಳುವುದೇನೆಂದರೆ ಮನಸ್ಸು ಅನಾತ್ಮದಲ್ಲಿ ತೊಡಗುವುದನ್ನು ತಪ್ಪಿಸಿ ಅದನ್ನು ಹಿಂದಕ್ಕೆ ಎಳೆದು ಕೊಳ್ಳಬೇಕೆಂಬುದನ್ನು ಮನಸ್ಸು ಸ್ವಾಭಾವಿಕವಾಗಿ ಯಾವುದರ ಕಡೆಗೆ ಪ್ರವರ್ತಿಸುವುದೋ ಅದೇ ಅರ್ಥದ ಪ್ರಪಂಚ ಎಂದು ಯೋಚಿಸುವುದು ನಮಗೆ ಒಗ್ಗಿಹೋಗಿದೆ. ಆದರೆ ಗಂಭೀರ ತರವಾದ ಯೋಚಿಸುವುದು ನಮಗೆ ಒಗ್ಗಿಹೋಗಿದೆ. ಆದರೆ ಗಂಭೀರತರವಾದ ಚಿಂತನೆಯು ಅನಾತ್ಮನಲ್ಲಿ ಆತ್ಮವನ್ನು ಮನಸ್ಸು ಅನುಭವಿಸಬೇಕೆಂದು ಅಪೇಕ್ಷಿಸುತ್ತದೆ.

೪೮. ಯತೋ ಯತೋ ನಿಶ್ಚರತಿ ಮನಶ್ಚಂಚಲಮಸ್ಥಿರಮ್। ತತಸ್ತತೋ ನಿಯಮ್ಯೈತದಾತ್ಮನ್ಯೇವ ವಶಂ ನಯೇತ್॥ (*ಭಗವದ್ ಗೀತಾ* 6. 26)

ಪರಬ್ರಹ್ಮವು ಎದುರಿಗೆ ಕಾಣುವ ಬಾಹ್ಯ ಪ್ರಪಂಚವನ್ನು ಮಾತ್ರವಲ್ಲದೆ, ಮನುಷ್ಯನೂ ಅವನ ಆತ್ಮವೂ ಸೇರಿದಂತೆ ಚೇತನ ಪ್ರಪಂಚವನ್ನೂ ವ್ಯಾಪಿಸಿದೆ. ಈ ವಸ್ತುಸ್ಥಿತಿಯನ್ನು ಅರಿತುಕೊಳ್ಳಲು ವೈರಾಗ್ಯವು ಬೇಕು. ಸ್ಥೂಲವಾಗಿ ಹೇಳುವುದಾದರೆ, ಮನಸ್ಸು ಹೊರಗಿನ ಮತ್ತು ಒಳಗಿನ ವಸ್ತುಗಳನ್ನು ವಿಷಯವನ್ನಾಗಿ ಮಾಡಿಕೊಳ್ಳುತ್ತದೆ. ಹೊರಗಿನ ವಸ್ತುಗಳನ್ನು ತ್ಯಜಿಸಿ, ಆಂತರಿಕ ವಸ್ತುಗಳ ಮೇಲೆ ಅದು ಏಕಾಗ್ರವಾಗಲು ವೈರಾಗ್ಯವು ಮನಸ್ಸಿಗೆ ಶಕ್ತಿಯನ್ನು ನೀಡುತ್ತದೆ. ಇದರಿಂದ ಸಾಧಿಸಬೇಕಾಗಿರುವುದು 'ಸರ್ವಂ ಖಲ್ವಿದಂ ಬ್ರಹ್ಮ' (ಇದೆಲ್ಲವೂ ಬ್ರಹ್ಮವೇ), 'ವಾಸುದೇವಃ ಸರ್ವಂ' (ವಾಸುದೇವನೇ ಇದೆಲ್ಲ) ಎಂಬ ವಾಕ್ಯಗಳ ಅರ್ಥದ ಸಾಕ್ಷಾತ್ಕಾರ.' ಈ ದರ್ಶನವೂ ಸಿಗಬೇಕಾದರೆ ಕೇವಲ ಆಧ್ಯಾತ್ಮಿಕ ಅಭ್ಯಾಸವೇ ಸಾಲದು, ಮಾನಸಿಕ ಪರಿವರ್ತನೆಯೂ ಅದಕ್ಕೆ ಬೇಕು.

ಆಧ್ಯಾತ್ಮಿಕ ಅಭ್ಯಾಸದ ಅತ್ಯುನ್ನತ ಸ್ಥಿತಿಯು ನಮಗೆ ಎಲ್ಲೆಡೆಯೂ ಭಗವಂತನ ಅಸ್ತಿತ್ವವನ್ನು ಅನುಭವಿಸುವ ಶಕ್ತಿಯನ್ನು ನೀಡಿ ಅದರ ಹರ್ಷ ಹಾಗೂ ಆನಂದದ ಭಾವನೆಯನ್ನು ತರುತ್ತದೆ. ಪರಮಾತ್ಮವಿಷಯಕ ಮನನದಲ್ಲಿ ತೊಡಗುವುದೇ ಧ್ಯಾನ. ಧ್ಯಾನವು ಭಕ್ತಿಯಲ್ಲಿ ಪರಿಣಮಿಸಿದರೆ ಅದು ಪ್ರಾರ್ಥನೆ. ಈ ಎಲ್ಲ ಆಧ್ಯಾತ್ಮಿಕ ಪ್ರಯತ್ನಗಳೂ ಅಭ್ಯಾಸದಲ್ಲಿ ಸೇರಿಬಿಡುತ್ತವೆ. ಈ ಅಭ್ಯಾಸದಿಂದ ಆತ್ಮವು ಬ್ರಹ್ಮದೊಡನೆ ಒಂದಾಗುತ್ತದೆ. ಆತ್ಮವೇ ಬ್ರಹ್ಮ ಆಗುತ್ತದೆ. ಇಲ್ಲಿ ವೈರಾಗ್ಯ ಎಂಬ ಶಬ್ದ ಅದರ ಸರಿಯಾದ ಅರ್ಥದಲ್ಲಿರುತ್ತದೆ, ಎಂದರೆ ಆತ್ಮಸಾಕ್ಷಾತ್ಕಾರಕ್ಕಾಗಿ ಬೆಳೆಸಿಕೊಂಡ ರಾಗತ್ಯಾಗವಾಗುತ್ತದೆ. ನಿಜವಾಗಿ ವೈರಾಗ್ಯವೆಂದರೆ ಅಹಂಕಾರವನ್ನು ತ್ಯಜಿಸುವುದು. ಹಾಗೆ ಉಂಟಾದ ರಿಕ್ತಸ್ಥಳವನ್ನು (ಖಾಲಿ ಜಾಗವನ್ನು) ಬ್ರಹ್ಮವು ತುಂಬ ಬೇಕು. ವೈರಾಗ್ಯವು ಆಧ್ಯಾತ್ಮಿಕ ಸಾಧಕನನ್ನು ಎಲ್ಲಿಗೆ ಒಯ್ಯುವುದೋ ಆ ಭಗವದ್ ಭಾವೋನ್ಮತ್ತತೆ ಎಂದರೆ ಇದೇ. ವೈರಾಗ್ಯದ ಪರಮ ಧ್ಯೇಯ ಮತ್ತು ತಾದಾತ್ಮ್ಯವೇ ವೈರಾಗ್ಯದ ಗುರಿ. ಇಲ್ಲಿ ತ್ಯಾಗ ಮಾಡಲ್ಪಡುವುದು ಅಹಂಕಾರ, ಪಡೆದುಕೊಳ್ಳುವುದು ಬ್ರಹ್ಮ. ಜಾಗಕ್ಕೆ ಸಮಷ್ಟಿಯನ್ನು ತಂದು ತನ್ನ ನಡವಳಿಕೆಯನ್ನು ನಿರ್ಧರಿಸುವವನೆ ನಿಜವಾದ ವಿರಕ್ತ.[೪೯]

ಉಪನಿಷತ್ಕಾಲದ ಮಹರ್ಷಿ ಯಜ್ಞವಲ್ಕ್ಯನು ಬ್ರಹ್ಮವಿದ್ಯೆಯನ್ನು ಅಭ್ಯಸಿಸುವುದಕ್ಕಾಗಿ ತನ್ನ ಸರ್ವಸ್ವವನ್ನೂ ತ್ಯಜಿಸಿದನು. ಇನ್ನೂ ಅನೇಕರು, ವಿಶೇಷತಃ ಋಷಿಗಳು, ಸಂಸಾರದ ಎಲ್ಲ ಜಂಜಡಗಳನ್ನು ತ್ಯಜಿಸಿ ಕಾಡುಗಳಿಗೆ ತೆರಳಿದರು. ಸಂನ್ಯಾಸ ಆಶ್ರಮವು ಮನುಷ್ಯನ ಜೀವನದ ಕೊನೆಯ ಮೆಟ್ಟಿಲು. ಅದರಲ್ಲಿ

೪೯. ಆತ್ಮೌಪಮ್ಯೇನ ಸರ್ವತ್ರ ಸಮಂ ಪಶ್ಯತಿ ಯೋಽರ್ಜುನ। (*ಭಗವದ್ಗೀತಾ*, 6. 32)

ಮನುಷ್ಯನು ಸಾಂಸಾರಿಕ ಜೀವನದ ಸಂಪೂರ್ಣತ್ಯಾಗವನ್ನು ಅಭ್ಯಾಸ ಮಾಡುತ್ತಾನೆ. ಸಂನ್ಯಾಸ ಎಂಬ ಪದದ ಅರ್ಥದಲ್ಲಿ ತ್ಯಾಗವೆಂಬುದೂ ಸೇರಿಕೊಂಡಿದೆ. ಚಕ್ರವರ್ತಿ ಜನಕನು ತ್ಯಾಗವನ್ನು ಅಭ್ಯಾಸ ಮಾಡಿದವರ ಉತ್ತಮ ಉದಾಹರಣೆಯಾಗಿದ್ದಾನೆ. ಜಗತ್ತು ಅತ್ಯಂತ ಆಕರ್ಷಕ ಆಸಕ್ತಿಯ ವಸ್ತುಗಳೆಂದು ಯಾವುವನ್ನು ಚಿಂತಿಸುವುದೋ, ಅವೆಲ್ಲವುಗಳಿಂದ ದೂರ ಹೋಗುವ ವ್ಯಕ್ತಿಗಳ ಪ್ರಕಾರಕ್ಕೆ ಉಪನಿಷತ್ತುಗಳಲ್ಲಿ ಕಂಡು ಬರುವ ನಚಿಕೇತನು ಮಾದರಿಯಾಗಿದ್ದಾನೆ. ಯಮನು ಅವನಿಗೆ ಹಣ, ಐಶ್ವರ್ಯ ಮತ್ತು ಹೆಣ್ಣುಗಳ ಪ್ರಲೋಭನೆಯನ್ನೊಡ್ಡಿದನು. ಆದರೆ ನಚಿಕೇತನು ಅಂಥ ಅನಿತ್ಯ ಹಾಗೂ ಚಂಚಲ ಸುಖಗಳನ್ನು ಪಡೆಯುವುದರಲ್ಲಿರುವ ಅಪಾಯವನ್ನೂ, ಅವುಗಳ ಹಿಂದೆ ಹೋಗುವುದರಲ್ಲಿರುವ ನಿಷ್ಪ್ರಯೋಜನತೆಯನ್ನೂ ಅರಿತುಕೊಂಡಿದ್ದನು. ವೇದಾಂತ ವಿಜ್ಞಾನದ ಸತ್ಯವನ್ನು ಸುನಿಶ್ಚಿತವಾಗಿ ಗ್ರಹಿಸಿದ ಯತಿಗಳು ತಮ್ಮ ಸತ್ತ್ವವನ್ನು ಸಂನ್ಯಾಸಯೋಗದಿಂದ ಶುದ್ಧಪಡಿಸಿಕೊಳ್ಳುತ್ತಾರೆ- ಎಂದು ಮುಂಡಕೋಪನಿಷತ್ತು[೫೦] ಹೇಳುತ್ತದೆ. ಬ್ರಹ್ಮನೊಡನೆ ಐಕ್ಯವನ್ನು ಹೊಂದಿದ ಆ ಯತಿಗಳು ಮುಕ್ತರಾಗುತ್ತಾರೆ. ಈ ಮಂತ್ರದ ಮೇಲೆ ವ್ಯಾಖ್ಯಾನ ಮಾಡುತ್ತಾ ಶಂಕರಾಚಾರ್ಯರು ಹೀಗೆನ್ನುತ್ತಾರೆ[೫೧]- ಆಕಾಶದಲ್ಲಿ ಹಾರುವ ಪಕ್ಷಿಗಳೂ ನೀರಿನಲ್ಲಿ ಈಜುವ ಮೀನುಗಳೂ ಯಾವ ರೀತಿ ಗುರುತನ್ನು ಬಿಡದೆ ಸಂಚರಿಸುವುವೋ ಹಾಗೆ ಜ್ಞಾನಿಯು ನಡೆದ ದಾರಿಯಲ್ಲೂ ಯಾವ ಗುರುತೂ ಇರುವುದಿಲ್ಲ.

ಉಪನಿಷತ್ತುಗಳ ಉಪದೇಶದ ಸಾರವಾಗಿರುವ ಭಗವದ್ ಗೀತೆಯಲ್ಲಿ ಆರಂಭದಿಂದ ಅಂತದವರೆಗೆ ಸತತವಾಗಿ ಒತ್ತಿ ಹೇಳಿರುವ ಒಂದು ಪಾಠ ತ್ಯಾಗದ್ದೇ ಆಗಿದೆ. ಆದರೆ ಯಾರೂ ಜಗತ್ತಿನಿಂದ ಓಡಿಹೋಗಲಾಗುವುದಿಲ್ಲ. ಆದ್ದರಿಂದ ಗೀತೆ ಹೇಳುತ್ತದೆ.

ಎಲ್ಲ ದಿಕ್ಕುಗಳಿಂದಲೂ ನದಿಗಳು ಸಮುದ್ರದೊಳಕ್ಕೆ ಪ್ರವೇಶಿಸುತ್ತಿದ್ದರೂ ಸಮುದ್ರವು ಅಚಲವಾಗಿಯೇ ಇರುವಂತೆ ಅನೇಕ ಕಾಮಗಳು ಬರುತ್ತಿದ್ದರೂ ಜ್ಞಾನಿಯು ಅಚಲನಾಗಿರುತ್ತಾನೆ. ಅವನಿಗೇ ಶಾಂತಿ ಸಿಕ್ಕುವುದು, ಕಾಮಿಗಲ್ಲ.[೫೨]

ಆದ್ದರಿಂದ ವಿರಕ್ತನು, ಎಂದರೆ ತ್ಯಾಗಶೀಲನಾದ ಮನುಷ್ಯನು, ನೀರಿನೊಳಗಿನ ತಾವರೆ ಎಲೆಯಂತೆ ಪ್ರಪಂಚದೊಳಗಿದ್ದರೂ ಅದರಿಂದ ಲಿಪ್ತನಾಗದೆ ಇರುತ್ತಾನೆ

೫೦. ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ ಸಂನ್ಯಾಸಯೋಗಾದ್ ಯತಯಶ್ಶುದ್ಧಸತ್ತ್ವಾಃ । (*ಮುಂಡಕೋಪನಿಷತ್*, 3-2-6)

೫೧. ಶಕುನಾನಾಮಿವಾಕಾಶೇ ಜಲೇ ವಾರಿಚರಸ್ಯ ಚ।ಪದಂ ಯಥಾ ನ ದೃಶ್ಯೇತ ತಥಾ ಜ್ಞಾನವತಾಂ ಗತಿಃ॥ (*ಮುಂಡಕ* 3-2-6ರ ಮೇಲೆ ಶಂಕರರ ಭಾಷ್ಯ)

೫೨. ಆಪೂರ್ಯಮಾಣ ಮಚಲಪ್ರತಿಷ್ಠಂ ಸಮುದ್ರ ಮಾಪಃ ಪ್ರವಿಶಂತಿ ಯದ್ವತ್ । ಸತದ್ವತ್ ಕಾಮಾ ಯಂ ಪ್ರವಿಶಂತಿ ಸರ್ವೇ ಸ ಶಾಂತಿಮಾಪ್ನೋತಿ ನ ಕಾಮಕಾಮೀ॥

"ಪದ್ಮಪತ್ರಮಿವಾಂಭಸಾ" ಈ ಜಗತ್ತಿನಿಂದ, ಪ್ರಕೃತಿಯ ಸಮಸ್ತ ಪರಿಸರದಿಂದ, ನಮ್ಮ ಶರೀರಗಳಿಂದ, ನಮ್ಮಿಂದಲೇ ನಾವು ದೂರ ಓಡಿ ಹೋಗಲಾಗುವುದಿಲ್ಲ. ಹಾಗಿದ್ದರೆ ವೈರಾಗ್ಯದ ವಿಷಯದಲ್ಲಿ ಎಲ್ಲ ಪ್ರವಚನಗಳಿಂದ ನಾವು ಕಲಿತುಕೊಳ್ಳಬೇಕಾದ ಪಾಠ ಯಾವುದು? ಶ್ರೀಮದ್ ಭಾಗವತದಲ್ಲಿ ಬ್ರಹ್ಮನು ರಾಜ ಪ್ರಿಯ ವ್ರತನಿಗೆ ನೀಡಿದ ಪ್ರಾಯೋಗಿಕ ಉಪದೇಶದಲ್ಲಿ ಈ ಪಾಠವನ್ನು ಚೆನ್ನಾಗಿ ವರ್ಣಿಸಲಾಗಿದೆ. "ನೀನು ಕಾಡುಗಳಿಗೆ ಓಡಿ ಹೋದರೂ ಭಯವು ನಿನ್ನ ಜೊತೆಯಲ್ಲೇ ಅಲ್ಲಿಗೂ ಬರುತ್ತದೆ. ಏಕೆಂದರೆ ನೀನು ಅಲ್ಲಿಗೆ ನಿನ್ನ ಆರು ಶತ್ರುಗಳೊಡನೆ ಹೋಗುತ್ತೀಯೆ. ಅವೇ ಐದು ಹೊರಗಿನ ಜ್ಞಾನೇಂದ್ರಿಯಗಳು ಮತ್ತು ಮನಸ್ಸು. ಆದರೆ ನೀನು ಈ ಇಂದ್ರಿಯಗಳನ್ನು ಜಯಿಸಿರುವುದಾದರೆ, ಒಳ್ಳೆಯ ಗೃಹಸ್ಥನಾಗಿ ಮನೆಯಲ್ಲೇ ಇದ್ದರೂ ಯಾವ ಹಾನಿಯೂ ಇಲ್ಲ. ಇಂದ್ರಿಯಗಳು ನಿನ್ನ ಅಧೀನವಾಗಿರುವವರೆಗೆ ನೀನು ಎಲ್ಲಿದ್ದರೂ ಸ್ವತಂತ್ರ. ಇಂದ್ರಿಯಗಳನ್ನು ಅವುಗಳ ಅಡ್ಡಾದಿಡ್ಡಿ ಅಲೆದಾಟದಿಂದ ತಪ್ಪಿಸಿ ಭಗವಂತನಲ್ಲಿ ದೃಢವಾಗಿ ಕೇಂದ್ರೀಕರಿಸಿ ನಿಲ್ಲಿಸಿದರೆ ನೀನು ಎಲ್ಲ ಬಂಧನಗಳನ್ನೂ ಕಳಚಿ ಹಾಕಿದ್ದೀಯೆ ಮತ್ತು ಆತ್ಮನಲ್ಲಿ ಸ್ಥಿರವಾಗಿ ಪ್ರತಿಷ್ಠಾಪಿತನಾಗಿದ್ದೀಯೆ ಎಂದು ನಿಶ್ಚಿಂತನಾಗಿ ಇರಬಹುದು."[೫೩] ಸಂಸಾರ ಅಥವಾ ಸಂಸಾರಿಕತೆ ಎಂದರೆ ಅಶಾಶ್ವತ, ಬಹಿರ್ಮುಖಿ ಮತ್ತು ಅಸತ್ಯ. ಎಲ್ಲರನ್ನೂ ಪ್ರೀತಿಸುವುದೆಂದರೆ ಭಗವಂತನನ್ನು ಪ್ರೀತಿಸಿದಂತೆ. ದುರಾಸೆಪಡುವುದು ಭಗವಂತನ ವಿಸ್ಮರಣೆ. ವೈರಾಗ್ಯವು ಮನಸ್ಸನ್ನು ಪ್ರಾಪಂಚಿಕ ವಸ್ತುಗಳಿಂದ ಹೊರಗೆಳೆದು ಭಗವಂತನಲ್ಲಿ ಅದನ್ನು ಕೇಂದ್ರೀಕರಿಸಲು ನೆರವಾಗುತ್ತದೆ. ವೈರಾಗ್ಯದ ಗುಣಗಳನ್ನು ಹೊಗಳುವಾಗ ಭಗವದ್ಗೀತೆಯು ಹೇಳುವುದು ಇಂಥ ಮನಸ್ಸಿನ ಬಗೆಗೆ.[೫೪]

ಸ್ವಾರ್ಥದ ಎಲ್ಲ ವಿಚಾರಗಳನ್ನೂ ಬದಿಗೊತ್ತಿ ಭಗವಂತನ ಕೈಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವ ಜ್ಞಾನಿಯೇ ನಿಜವಾದ ವಿರಕ್ತ. ಅವನೇ ಅವಧೂತ ಎಂದರೆ ಪ್ರಾಪಂಚಿಕತೆ ಎಲ್ಲ ಕಳಂಕವನ್ನೂ ಕಳಚಿ ಒಗೆದಿರುವವನು. ಅವನು ಬ್ರಹ್ಮನನ್ನು ತಿಳಿದವನಾಗಿ ತಾನೇ ಬ್ರಹ್ಮನಾಗುವವನು.[೫೫] ಸತ್ಯವಾಗಿ ಅವನೇ ಚೆನ್ನಾಗಿ ತಿಳಿದಿರುವವರಲ್ಲಿ ಶ್ರೇಷ್ಠನು.[೫೬] ಬ್ರಹ್ಮವಿದ್ಯೆಯ ನಿಯಮಪಾಲನೆ ಈ ರೀತಿಯದು.

* * * *

೫೩. ಭಯಂ ಪ್ರಮತ್ತಸ್ಯ ವನೇಷ್ವಪಿ ಸ್ಯಾತ್ ಯತಃ ಸ ಆಸ್ತೇ ಸಹ ಷಟ್ ಸಪತ್ನಃ । ಸ್ವಾತ್ಮರತೇ ರ್ಬುಧಸ್ಯ ಗೃಹಾಶ್ರಮಃ ಕಿನ್ನು ಕರೋತ್ಯವದ್ಯಮ್॥ (*ಶ್ರೀಮದ್ ಭಾಗವತ*, 5-1-17)

೫೪. 'ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ' (*ಭಗವದ್ಗೀತಾ*, 6. 35)

೫೫. ಸಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈವ ಭವತಿ'(*ಮುಂಡಕೋಪನಿಷತ್*, 3-2-9)

೫೬. ಏಷ ಬ್ರಹ್ಮವಿದಾಂ ವರಿಷ್ಠಃ' (*ಮುಂಡಕೋಪನಿಷತ್*, 3-1-4)

೩. ಆತ್ಮ ಮತ್ತು ಬ್ರಹ್ಮ ಸಂಯೋಗ

ಬ್ರಹ್ಮ ಸಾಕ್ಷಾತ್ಕಾರಕ್ಕಾಗಿ ಯತ್ನಿಸುವ ಸಾಧಕನ ಜೀವನದಲ್ಲಿ ನಿಯಮಪಾಲನೆಯು ಮುಖ್ಯವೂ, ನಿಶ್ಚಿತವಾಗಿ ಪ್ರಾಣಪ್ರದವೂ ಆದ ಪಾತ್ರವನ್ನು ನಿರ್ವಹಿಸುತ್ತದೆ ಎಂಬುದನ್ನು ನೋಡಿದೆವು. ಆದರೆ ಬ್ರಹ್ಮಸಾಕ್ಷಾತ್ಕಾರಕ್ಕೆ ನಿಯಮಪಾಲನೆ ಏಕೆ ಆವಶ್ಯಕ ಎಂದು ಯಾರಾದರೂ ಕೇಳಬಹುದು. ಅದಕ್ಕೆ ಉತ್ತರ ಇದು. ಬ್ರಹ್ಮಸಾಕ್ಷಾತ್ಕಾರದ ಪ್ರಮುಖ ಅಂಶವು `ನಮ್ಮ ಆತ್ಮವೇ ಪರಮಾರ್ಥದಲ್ಲಿ 'ಬ್ರಹ್ಮ' ಎಂಬುದಾಗಿದೆ. ಈ ಸಾಕ್ಷಾತ್ಕಾರ ಉಂಟಾಗುವುದು ಸುಲಭವಲ್ಲ ಎಂಬ ವಸ್ತುಸ್ಥಿತಿಯಂತೂ ಇದ್ದೇ ಇದೆ. ಆ ಸಾಕ್ಷಾತ್ಕಾರಕ್ಕೆ ಹೆಚ್ಚು ಪ್ರಯತ್ನವೂ, ದೃಢಮನಸ್ಸೂ, ಶ್ರುತಿಗಳಲ್ಲಿ ಅಚಲವಾದ ನಂಬಿಕೆಯೂ, ಗುರುವಿನಲ್ಲಿ ಅಚಲವಾದ ಭಕ್ತಿಯೂ, ಗುರು ಕಲಿಸಿದ್ದನ್ನು ಅವಿಚ್ಛಿನ್ನವಾಗಿ ಅನುಸರಿಸುವ ನಿಷ್ಠೆಯೂ ಬೇಕು. ಇವು ಸುಲಭವಾಗಿ ಮಾಡಬಹುದಾದ ಅಥವಾ ಬೇಗನೆ ಸಾಧಿಸಬಹುದಾದ ವಿಷಯಗಳಲ್ಲ. ಅದು ಅನೇಕ ವರ್ಷಗಳ, ಅಥವಾ ಇಡೀ ಜೀವಮಾನದ ಅಥವಾ ಅದಕ್ಕೂ ಹೆಚ್ಚು ಕಾಲದ ಅವಿರತ ಪ್ರಯತ್ನ. ವಸ್ತುತಃ, ಸತ್ಯದ ಹುಡುಕಾಟಕ್ಕಾಗಿ ಮಾಡುವ ಸತತ ಹೋರಾಟ ಅದು. ಆದ್ದರಿಂದಲೇ ನಿಯಮಪಾಲನೆ ಇಲ್ಲಿ ಅತ್ಯಾವಶ್ಯಕವಾಗುತ್ತದೆ.

ಒಂದು ಪೂರ್ಣ ಜೀವನಾವಧಿಯ, ಅಥ್‌ವಾ ಅದಕ್ಕೂ ಹೆಚ್ಚು ದೀರ್ಘಕಾಲದವರೆಗೆ ನಡೆಯುವ, ನಿತ್ಯ ನೈಮಿತ್ತಿಕ ಕರ್ಮಗಳ ಅನುಷ್ಠಾನವನ್ನು ಮಾಡಿರುವ ಸಾಧಕನು ಬ್ರಹ್ಮಶಿಕ್ಷೆಯ ಶಿಕ್ಷಣವನ್ನು ಪಡೆಯುವ ಅರ್ಹತೆಯನ್ನು ಗಳಿಸಿಕೊಳ್ಳುತ್ತಾನೆ. ಈ ಅನುಷ್ಠಾನದ ಪ್ರಯೋಜನ ಸತ್ತ್ವಶುದ್ಧಿ, ಎಂದರೆ ಮನಸ್ಸಿನ ಸ್ವಚ್ಛೀಕರಣ. ಈ ರೀತಿಯ ನಿಯಮಪಾಲನೆಯಿಂದ, ಪರಮಸತ್ಯದ ಅನುಸರಣೆಗೆ ಸಾಧಕನು ಅಣಿಯಾಗುತ್ತಾನೆ.ಅಂಥ ಸಾಧಕ ಶಿಷ್ಯನು ಹೇಗೆ ನಡೆದುಕೊಳ್ಳುತ್ತಾನೆ? ಬ್ರಹ್ಮವಿದನಾದ ಮಹಾಗುರುವಿನ ಬಳಿಗೆ ಅವನು ಸಮಿತ್ಪಾಣಿಯಾಗಿ ಬಂದು ಅತ್ಯಂತ ವಿಧೇಯತೆಯಿಂದ ಜ್ಞಾನಪ್ರಕಾಶಕ್ಕಾಗಿ ಬೇಡುತ್ತಾನೆ. ಆ ಜ್ಞಾನಪ್ರಕಾಶದಿಂದ ಅಸ್ತಿತ್ವದ ರಹಸ್ಯವು ಅವನಿಗೆ ಸ್ಪಷ್ಟವಾಗುವುದೆಂದು ಆಶಿಸುತ್ತಾನೆ. ಆ ಗುರು ಬ್ರಹ್ಮನಿಷ್ಠನಾಗಿರಬೇಕು. ಅವನಿಗೆ ಪರಮಾರ್ಥ ಸತ್ಯ ತಿಳಿದಿರಬೇಕು, ಅವನು

ತತ್ತ್ವದರ್ಶಿಯಾಗಿದ್ದು ಬ್ರಹ್ಮಾನುಭವವನ್ನು ಸಾಕ್ಷಾತ್ತಾಗಿ ಪಡೆದುಕೊಂಡಿರಬೇಕು. ಆಧ್ಯಾತ್ಮಿಕ ಸಾಧಕನ ಅಜ್ಞಾನವನ್ನು ಅಂಥ ಗುರು ಮಾತ್ರ ತೊಲಗಿಸಬಲ್ಲನು. ಗುರು ಎಂಬ ಶಬ್ದದ ನಿರ್ವಚನಸಿದ್ಧವಾದ ಅರ್ಥ 'ಅಜ್ಞಾನದ ಅಂಧಕಾರವನ್ನು ಹೋಗಿಸಬಲ್ಲವನು' ಎಂಬುದಾಗಿದೆ.[೫೭] ಮುಂಡಕೋಪನಿಷತ್ತು[೫೮] ಹೀಗೆನ್ನುತ್ತದೆ: "ಬ್ರಹ್ಮಸಾಧಕನು ಕರ್ಮದ ಫಲವಾದ ಎಲ್ಲ ಲೋಕಗಳನ್ನೂ ಪರೀಕ್ಷೆಗೆ ಒಳಪಡಿಸಿ, ಅಂತಿಮವಾಗಿ ಅವುಗಳ ನಿಷ್ಪ್ರಯೋಜನತ್ವವನ್ನು ಅರಿತು ಅವುಗಳಲ್ಲಿ ಅನಾಸಕ್ತಿಯನ್ನು ಬೆಳೆಸಿಕೊಳ್ಳುತ್ತಾನೆ. ಶಾಶ್ವತವಾದುದನ್ನು ಅನಿತ್ಯ ಕರ್ಮಗಳಿಂದ ಪಡೆಯಲಾಗದು ಎಂದೂ ಅವನಿಗೆ ತಿಳಿಯುತ್ತದೆ. ಅನಂತರ ಬ್ರಹ್ಮಜ್ಞಾನಕ್ಕಾಗಿ ಅವನು ಆಧ್ಯಾತ್ಮದ ಗುರುವಿನ ಬಳಿಗೆ ಬರುತ್ತಾನೆ."

ಕಠೋಪನಿಷತ್ತಿನ ಒಂದು ಮಂತ್ರವೂ[೫೯] ಇದೇ ತಾತ್ಪರ್ಯವನ್ನು ಒಳಗೊಂಡು ಹೀಗೆ ಹೇಳುತ್ತದೆ "ಬ್ರಹ್ಮನ ವಿಷಯದಲ್ಲಿ ಜಿಜ್ಞಾಸೆಯಿಂದ ಅನ್ವೇಷಣೆಯನ್ನು ಮಾಡುವುದು ಕಷ್ಟ. ಏಕೆಂದರೆ ಸಮರ್ಥನಾದ ಗುರುವೇ ವಿರಳ. ಜ್ಞಾನವನ್ನು ಪಡೆಯುವುದೂ ಕಷ್ಟ, ಏಕೆಂದರೆ ಜ್ಞಾನವನ್ನು ಪಡೆಯಲು ಅರ್ಹನಾದ ಆಧ್ಯಾತ್ಮಸಾಧಕನು ವಿರಳತರ."

ಜ್ಞಾನವನ್ನು ಪಡೆಯಲು ಉತ್ಸುಕನಾದ ವಿದ್ಯಾರ್ಥಿಯು ರಕ್ಷಣೆಗಾಗಿ ಪ್ರಾರ್ಥಿಸುತ್ತಾನೆ, ಕೇವಲ ತನ್ನ ರಕ್ಷಣೆಗಾಗಿ ಅಲ್ಲ, ಗುರುವಿನ ರಕ್ಷಣೆಗಾಗಿ ಕೂಡ. ಇದರ ಅರ್ಥವೇನೆಂದರೆ ಸತ್ಯವನ್ನು ಪ್ರಕಟಪಡಿಸಲು ಗುರು ವಿದ್ಯಾರ್ಥಿಗೆ ಅತ್ಯಂತವಾಗಿ ಸಹಾಯಮಾಡಲು ಇಷ್ಟಪಡುತ್ತಾನೆ. ಅವನು ಕಲಿಸಿದ ವಿದ್ಯೆಯನ್ನು ಗ್ರಹಿಸಲು ಬೇಕಾದ ಶಕ್ತಿಯು ದೊರಕಲಿ ಎಂದು ಶಿಷ್ಯನೂ ಪ್ರಾರ್ಥಿಸುತ್ತಾನೆ. ಗ್ರಂಥಗಳ ಅರ್ಥವನ್ನು ತಿಳಿದುಕೊಳ್ಳಲು ಮತ್ತು ಪರಮಾರ್ಥವನ್ನು ಗ್ರಹಿಸಲು ವಿದ್ಯಾರ್ಥಿಗೆ ಪರಬ್ರಹ್ಮದ ಅನುಗ್ರಹವು ಇರಬೇಕು. ಏಕೆಂದರೆ ಶಿಷ್ಯನ ಅಜ್ಞಾನವು ತೊಲಗುವುದು ಭಗವಂತನ ಇಚ್ಛೆಯಿಂದ ಮಾತ್ರ. ಬ್ರಹ್ಮಕ್ಕೆ ಸಾಧಕನು ಮಾಡುವ ಪ್ರಾರ್ಥನೆಯ ಏಕೈಕ ಉದ್ದೇಶ-ತನ್ನಲ್ಲಿ ಅಂತಿಮ ಸತ್ಯವು ಉಕ್ಕಿಬರಲಿ ಎಂಬುದು. ಅದೆಂಥ ಆಶ್ಚರ್ಯಕರ ಆಲೋಚನೆ ಮತ್ತು ಪ್ರಾರ್ಥನೆ! ಗುರುವಿನಿಂದ ತಾನು ಕಲಿಯುವ

---

೫೭. ಗುಕಾರಸ್ತ್ವಂಧಕಾರಃ ಸ್ಯಾದ್ ರುಕಾರಸ್ತನ್ನಿರೋಧಕಃ। ಅಂಧಕಾರನಿರೋಧತ್ವಾತ್ ಗುರುರಿತ್ಯಭಿಧೀಯತೇ॥ *(ಗುರುಗೀತಾ)*

೫೮. 'ಪರೀಕ್ಷ್ಯ ಲೋಕಾನ್ ಕರ್ಮ ಚಿತಾನ್ ಬ್ರಾಹ್ಮಣೋ ನಿರ್ವೇದಮಾಯಾತ್।
ನಾಸ್ತ್ಯಕೃತಃ ಕೃತೇನ। ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್। ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್।
(*ಮುಂಡಕೋಪನಿಷತ್*, 1-2-12)

೫೯. ಶ್ರವಣಾಯಾಪಿ ಬಹುಭಿರ್ಯೋನ ಲಭ್ಯಃ ಶಣ್ವಂತೋಽಪಿ ಬಹವೋಯಂ ನ ವಿದ್ಯುಃ। ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾ ಆಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ॥ (*ಕಠೋಪನಿಷತ್*, 2-7)

ಎಲ್ಲ ಗ್ರಂಥಗಳೂ ತನಗೆ ತಿಳಿಯುವಂತಾಗಲಿ, ಗುರುವು ಬೋಧಿಸಿದ ಎಲ್ಲ ಜ್ಞಾನವೂ ಪ್ರಕಾಶಮಯವಾಗಲಿ ಎಂದು ಶಿಷ್ಯನು ಪ್ರಾರ್ಥಿಸುತ್ತಾನೆ.

ಆದರೆ ಬ್ರಹ್ಮಜ್ಞಾನ ಅಥವಾ ಬ್ರಹ್ಮವಿದ್ಯೆ ಎಂದರೇನು? ಅದನ್ನು ಕಲಿಯುವುದೇಕೆ? ನಮ್ಮಲ್ಲಿರುವ ಪದಗಳು ಎಷ್ಟು ಅಸಮರ್ಪಕವಾಗಿದ್ದರೂ ಸರಿ, ಅವುಗಳಿಂದ ಆ ಬ್ರಹ್ಮವಿದ್ಯೆಯನ್ನು ವರ್ಣಿಸಲು ಅಥವಾ ಅದರ ಲಕ್ಷಣವನ್ನು ಹೇಳಲು ಯತ್ನಿಸೋಣ. ಬ್ರಹ್ಮ ಎಂದರೆ ಶಾಶ್ವತವಾದ ವಿಶ್ವಚೈತನ್ಯ. ಅದು ಎಲ್ಲದರಲ್ಲೂ ಇದೆ, ಎಲ್ಲೆಲ್ಲೂ ಇದೆ, ಚಿಕ್ಕ, ದೊಡ್ಡ ಸಕಲ ಪದಾರ್ಥಗಳಲ್ಲೂ ಇದೆ. ದೇಶದ ಬಿಂದುಗಳಿಂದಾಗಲಿ ಕಾಲದ ಕ್ಷಣಗಳಿಂದಾಗಲಿ ಬ್ರಹ್ಮವು ಸೀಮಿತವಾಗಿಲ್ಲ. ಅದು ಅವಿನಾಶ, ಸರ್ವಕಾಲಗಳಲ್ಲೂ ಇರುವ ಸದ್‌ವಸ್ತು. ಅದು ಎಲ್ಲ ವಸ್ತುಗಳ ಅತ್ಯಂತ ಒಳಗಿನ ಸಾರ, ಎಲ್ಲ ಮಿತಿಗಳಿಗೂ ಮೀರಿದುದು. ಅದು ಎಲ್ಲೆಲ್ಲೂ ಯಾವಾಗಲೂ ಇರುವ ವಸ್ತು. ಈ ಮುಂಚೆ ಹೇಳಿದ ನಿಯಮಪಾಲನೆಯಲ್ಲಿ ಕರ್ಮಗಳು ಅಥವಾ ಯಾಜ್ಞಿಕ ಕ್ರಿಯೆಗಳು ಶುದ್ಧಿಗೋಸ್ಕರ ವಿಧಿಸಲ್ಪಟ್ಟಿದ್ದುವು. ವ್ಯಾಹೃತಿಗಳ ಮೇಲೆ ಅಥವಾ ಮಂತ್ರಗಳ ಬೀಜಾಕ್ಷರಗಳ ಮೇಲೆ ಧ್ಯಾನವು ಸಂಪೂರ್ಣ ಸ್ವತಂತ್ರತಾರೂಪದ ಸ್ವಾರಾಜ್ಯವನ್ನು ಪಡೆಯುವ ಸಾಧನವಾಗಿ ವಿಹಿತವಾಗಿತ್ತು. ಆದರೂ ಅಂಥ ಉಪಾಯಗಳು ಒಂದು ಶರೀರದಿಂದ ಮತ್ತೊಂದು ಶರೀರಕ್ಕೆ ಆತ್ಮನ ಪಯಣವನ್ನು ಕೊನೆಗಾಣಿಸಲಾರವು.[೬೦] ಅದು ಕೊನೆಗಾಣುವುದು ಬ್ರಹ್ಮಜ್ಞಾನದಿಂದ ಮಾತ್ರ. ಬ್ರಹ್ಮಜ್ಞಾನವು ಬರುವುದು ಸಂಸಾರದ ಬೇರಿನಲ್ಲಿರುವ ಅವಿದ್ಯೆಯು ನಾಶ ಹೊಂದಿದಾಗ ಮಾತ್ರ. "ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆದವನು ತನಗೆ ಬ್ರಹ್ಮವು ಸಿಕ್ಕಿಲ್ಲ ಎಂಬ ಭ್ರಾಂತಿಯಿಂದ ಬಿಡುಗಡೆ ಹೊಂದುತ್ತಾನೆ" ಎಂದು ಹೇಳುವ ತೈತ್ತಿರೀಯೋಪನಿಷತ್ತಿನಿಂದ ಈ ವಿಷಯ ಸ್ಪಷ್ಟವಾಗುತ್ತದೆ. ಮೇಲಿನ ಈ ವಾಕ್ಯವು "ಅವಿದ್ಯೆಯಿಂದ ಬಿಡುಗಡೆ ಹೊಂದಿದ ಮೇಲೆ, ತಾನು ಬ್ರಹ್ಮದಿಂದ ಬೇರೆ ಎಂಬ ಭ್ರಾಂತಿಯನ್ನು ಕಳಚಿಕೊಂಡ ಮೇಲೆ ಮಾತ್ರ ಸಾಧಕನು ಬ್ರಹ್ಮಸಾಕ್ಷಾತ್ಕಾರವನ್ನು ಪಡೆಯುತ್ತಾನೆ'' ಎಂದು ಸ್ಪಷ್ಟಪಡಿಸುತ್ತದೆ.[೬೧]

ಶರೀರದೊಳಗಿರುವ ಆತ್ಮ ವಾಸ್ತವದಲ್ಲಿ ಪರಮಾತ್ಮನಿಗಿಂತ ಬೇರೆಯಲ್ಲ. ಕೇವಲ ಅವಿದ್ಯೆಯ ಕಾರಣದಿಂದ ತಾನು ಬೇರೆ ಎಂದು ಜೀವಾತ್ಮನು ಭಾವಿಸುತ್ತಾನೆ. ಇದರ ಪರಿಣಾಮವಾಗಿ `ನಾನು ಬ್ರಹ್ಮ ಅಲ್ಲ' ಎಂಬ ಭ್ರಾಂತಿಗೆ ಅವನು ಪಕ್ಕಾಗುತ್ತಾನೆ. ಇದನ್ನು `ದಶಮಸ್ತ್ವಮಸಿ' (ನೀನೇ ಹತ್ತನೆಯವನು) ಎಂಬ ವಾಕ್ಯವು

೬೦. ಸಮ್ ಸರತಿ ಎಂಬುದರಿಂದ ಸಂಸಾರ.(*ತೈತ್ತಿರೀಯೋಪನಿಷತ್*, 2.1)

೬೧. ಬ್ರಹ್ಮವಿದಾಪ್ನೋತಿ ಪರಮ್(*ತೈತ್ತಿರೀಯೋಪನಿಷತ್*, 2.1)

ಚಿತ್ರಿಸುತ್ತದೆ.[೬೨] ನದಿಯನ್ನು ದಾಟಿದ ಹತ್ತು ಜನರ ಗುಂಪು ತಮ್ಮ ಸಂಖ್ಯೆಯನ್ನು ನಿಖರವಾಗಿ ಎಣಿಸಿ ನೋಡಲು ಅಪೇಕ್ಷಿಸಿತು. ಹಾಗೆ ಎಣಿಸಿದಾಗ, ಎಣಿಕೆ ಮಾಡಿದ ಪ್ರತಿಯೊಬ್ಬನೂ ತನ್ನನ್ನು ಎಣಿಕೆಯಲ್ಲಿ ಸೇರಿಸಿಕೊಳ್ಳಲು ಮರೆತನು. ಅದರಿಂದ ಹತ್ತರ ಗುಂಪಿನಲ್ಲಿ ಒಂಬತ್ತೇ ಜನರಿದ್ದಂತೆ ಕಂಡನು. ಕೊನೆಗೆ ಹೊರಗಿನವನೊಬ್ಬನು ಅಲ್ಲಿಗೆ ಬಂದು ಅವರ ತಪ್ಪನ್ನು ತೋರಿಸಿಕೊಟ್ಟನು. ಆಗ ಗುಂಪಿನ ಪ್ರತಿಯೊಬ್ಬನೂ ತನ್ನನ್ನು ಬಿಟ್ಟ ತಪ್ಪನ್ನು ಅರಿತುಕೊಂಡು

ಮತ್ತೆ, ಈಗಾಗಲೇ ಸೂಚಿಸಿರುವಂತೆ ನಿಯಮಪಾಲನೆಯ ಜೀವನವನ್ನು ನಡೆಸಿದ ಪರಿಣಾಮವಾಗಿ ಯಾರ ಮನಶ್ಶುದ್ಧಿಯು ಸ್ಥಿರವಾಗಿದೆಯೋ ಅವರಿಗಾಗಿ ಬ್ರಹ್ಮವಿದ್ಯೆಯನ್ನು ಬೋಧಿಸಲಾಗಿದೆ ಎಂದು ಶ್ರುತಿ ಹೇಳುತ್ತದೆ. ಆಧ್ಯಾತ್ಮಸಾಧಕನು ನಿರ್ಲಿಪ್ತವಾದ ಮನಸ್ಸನ್ನೂ ರೂಢಿಸಿಕೊಳ್ಳಬೇಕು. ಎಲ್ಲಿಯವರೆಗೆ ಅವನು ಅವಿದ್ಯೆಯ ಬಂಧನದಲ್ಲಿರುವನೋ, ಅಲ್ಲಿಯವರೆಗೆ ಅವನು ಕರ್ಮಕ್ಕೂ ಅದರ ಫಲಕ್ಕೂ ವಶನಾಗಿರುತ್ತಾನೆ. ಆ ಸ್ಥಿತಿಯಲ್ಲಿ ಅವನು ಪಾರಮಾರ್ಥಿಕ ಜ್ಞಾನಕ್ಕೆ ಪಾತ್ರನಾಗಿರುವುದಿಲ್ಲ. ವಿಷಯಾಸಕ್ತನಾಗಿದ್ದಾಗ ಅವನು ಅಂತರಾತ್ಮವನ್ನು, ಬ್ರಹ್ಮವನ್ನು ಕಾಣಲಾರನು. ಇದನ್ನು ಅವನು ಸಾಧಿಸಲಾಗುವುದು ಕರ್ಮ ಸಂನ್ಯಾಸದಿಂದ ಮಾತ್ರ. ಅಂಥ ಕರ್ಮತ್ಯಾಗವನ್ನು ಮಾಡಿದ ಸಾಧಕನು ಮಾತ್ರ ಬ್ರಹ್ಮವಿದ್ಯೆಗೆ ಯೋಗ್ಯಭಾಜನನಾಗುತ್ತಾನೆ. ಈ ವಿಚಾರವು 'ಸಂನ್ಯಾಸವು ಸಾಕ್ಷಾತ್ಕಾರವನ್ನು ತರುತ್ತದೆ' ಎಂಬ ಉಪನಿಷದ್ವಾಣಿಯಿಂದ[೬೩] ಸ್ಪಷ್ಟವಾಗುತ್ತದೆ.

ಇಲ್ಲಿ ಶ್ರುತಿಯ ಉದ್ದೇಶ ತಪಸ್ಸಿನ ಅಥವಾ ಧ್ಯಾನದ ಆಚರಣೆಯಿಂದ ಬ್ರಹ್ಮವನ್ನು ಪಡೆಯಬಹುದು ಎಂದು ನಮಗೆ ತೋರಿಸುವುದು. ವಸ್ತುತಃ ತೈತ್ತಿರೀಯೋಪನಿಷತ್ತು ವಿಶೇಷವಾಗಿ ಬ್ರಹ್ಮವನ್ನು ಅರಿತುಕೊಳ್ಳಲು ತಪಸ್ಸನ್ನು ಅಥವಾ ಮನನವನ್ನು ಆಶ್ರಯಿಸಬೇಕು ಎಂದು ಘೋಷಿಸುತ್ತದೆ.[೬೪] ಬ್ರಹ್ಮ ಜ್ಞಾನದ ಪ್ರಾಪ್ತಿಯ ಮೊದಲು ಎಲ್ಲ ಕೋಶಗಳನ್ನೂ ಕಳಚಿ ಹಾಕಬೇಕು. ಹಾಗೆ ಕೋಶಗಳನ್ನು ಕಳಚಿಹಾಕಲು ಮನಸ್ಸು ಪರಿಶುದ್ಧವಾಗಿರಬೇಕು ಎಂದು ಶ್ರುತಿಯು ವಿಧಿಸುತ್ತದೆ. ಅಲ್ಲದೆ ಬೃಹದಾರಣ್ಯಕೋಪನಿಷತ್ತು ಆತ್ಮವನ್ನು ಶ್ರವಣ, ಮನನ, ನಿದಿಧ್ಯಾಸನಗಳಿಂದ ತಿಳಿದುಕೊಳ್ಳಬೇಕು ಎಂದು ಉಪದೇಶಿಸುತ್ತದೆ.[೬೫] ಅಂಥ

೬೨. ಆನಂದವಲ್ಲಿಯ ಮೇಲೆ ಶಂಕರರ ಭಾಷ್ಯವನ್ನೂ, ಆನಂದಗಿರಿಗಳ ವ್ಯಾಖ್ಯಾನವನ್ನೂ ನೋಡಿರಿ. ಹಾಗೇ ವಿದ್ಯಾರಣ್ಯರ *ಪಂಚದಶಿ*ಯನ್ನೂ ಕೂಡ.

೬೩. 'ನ್ಯಾಸ ಇತಿ ಬ್ರಹ್ಮ'(*ಮಹಾನಾರಾಯಣೋಪನಿಷತ್*ಆನಂದಾಶ್ರಮ ಆವೃತ್ತಿ ಪು. 893)

೬೪. ತಪಸಾ ಬ್ರಹ್ಮ ವಿಜಿಜ್ಞಾಸಸ್ವ ತಪೋ ಬ್ರಹ್ಮೇತಿ। (*ತೈತ್ತಿರೀಯೋಪನಿಷತ್*, 3.2)

೬೫. ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತ ವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ (*ಬೃಹದಾರಣ್ಯಕೋಪನಿಷತ್* 2-4-5)

ಜ್ಞಾನವನ್ನು ಪಡೆದ ಸಾಧಕನಿಗೆ ಸಿಗುವ ಬಹುಮಾನವೇ ನಿರ್ಭಯತ್ವ[೬೬] ಎಲ್ಲಿಯವರೆಗೆ ವ್ಯಕ್ತಿಯು ಸಂಸಾರದಲ್ಲಿ, ಎಂದರೆ ಜನನ ಮರಣಚಕ್ರದಲ್ಲಿ ಸುತ್ತುತ್ತಿರುವನೋ ಅಲ್ಲಿಯವರೆಗೆ ಅವನು ಭಯದಲ್ಲಿರುತ್ತಾನೆ ಮತ್ತು ಪಾಪಾಚರಣೆಗೆ ಈಡಾಗಿರುತ್ತಾನೆ. ಬ್ರಹ್ಮಜ್ಞಾನದಿಂದ ಮಾತ್ರ ವ್ಯಕ್ತಿ ನಿರ್ಭಯನಾಗುವುದು.[೬೭]

ಬ್ರಹ್ಮಜ್ಞಾನದ ಪ್ರಾಪ್ತಿಯಲ್ಲಿ ಮನಸ್ಸು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ ಎಂದು ಈ ಮೊದಲೇ ಸಾಮಾನ್ಯ ರೀತಿಯಲ್ಲಿ ಸೂಚಿಸಲಾಗಿದೆ. ಅದನ್ನು ಸವಿಸ್ತರವಾಗಿ ಪರಿಶೀಲಿಸುವುದು ಇಲ್ಲಿ ಸೂಕ್ತ.

ಬ್ರಹ್ಮಸಾಕ್ಷಾತ್ಕಾರಕ್ಕೆ ಮನಸ್ಸೇ ಕಾರಣ, ಪವಿತ್ರ ಗ್ರಂಥಗಳ ಜ್ಞಾನವಲ್ಲ ಎಂದು ಅನೇಕ ಬಾರಿ ಹೇಳಲಾಗಿದೆ. ಈ ವಿಷಯದಲ್ಲಿ ನಾವು ಪರಿಗಣಿಸಬೇಕಾದ ಎರಡು ಅಭಿಪ್ರಾಯಗಳಿವೆ. ವಿವರಣದ ಅಭಿಪ್ರಾಯ ಮತ್ತು ಭಾಮತಿಯ ಅಭಿಪ್ರಾಯ ಎಂಬುವೇ ಆ ಎರಡು. ಮೊದಲನೆಯ ಅಭಿಪ್ರಾಯಕ್ಕೆ ಅನುಸಾರವಾಗಿ ಬ್ರಹ್ಮಸಾಕ್ಷಾತ್ಕಾರವು ಉಂಟಾಗುವುದು ಮುಖ್ಯವಾಗಿ ಉಪನಿಷತ್ತುಗಳಲ್ಲಿರುವ ಮಹಾ ವಾಕ್ಯಗಳಿಂದ. ಅದರಲ್ಲಿ ಪರಿಶುದ್ಧ ಮನಸ್ಸು ಒಂದು ಸಾಧನ ಮಾತ್ರ. ಉಪನಿಷತ್ತಿನಲ್ಲಿರುವ ಮನಸೈವ[೬೮] (ಮನಸ್ಸಿನಿಂದಲೇ) ಎಂಬ ನುಡಿಯೂ ಈ ಅಭಿಪ್ರಾಯವನ್ನು ಸಮರ್ಥಿಸುತ್ತದೆ ಎಂದು ಸೂಚಿಸಲಾಗಿದೆ.

ಎರಡನೆಯ ಅಭಿಪ್ರಾಯವನ್ನು ವಾಚಸ್ಪತಿಮಿಶ್ರರ ಭಾಮತಿಯಲ್ಲಿ ವಿಶದಗೊಳಿಸಲಾಗಿದೆ. ಈ ಅಭಿಪ್ರಾಯಕ್ಕೆ ಅನುಸಾರವಾಗಿ ಬ್ರಹ್ಮಸಾಕ್ಷಾತ್ಕಾರಕ್ಕೆ ಪರಿಶುದ್ಧ ಮನಸ್ಸೇ ಮುಖ್ಯವಾದ ಹಾಗೂ ನೇರವಾದ ಕಾರಣ. ಎರಡು ಅಭಿಪ್ರಾಯಗಳೂ ಒಪ್ಪುವ ಮಾತು ಎಂದರೆ ಉಪನಿಷತ್ತುಗಳು, ಮಹಾಕಾವ್ಯಗಳು ಮನಸ್ಸಿನ ಪರಿಶುದ್ಧಿಯನ್ನು ಉಂಟುಮಾಡುತ್ತವೆ ಎಂದರ್ಥ. ಎರಡು ಅಭಿಪ್ರಾಯಗಳೂ ಪ್ರಶಂಸಾರ್ಹವೇ ಆದರೂ ವಿವರಣ ಶಾಲೆಯ ಅಭಿಪ್ರಾಯವು ಹೆಚ್ಚು ಅನುಭವಾರೂಢ ಎಂದು ಅನಿಸುತ್ತದೆ. ಏಕೆಂದರೆ ಬ್ರಹ್ಮವನ್ನು 'ಔಪನಿಷದ' = ಉಪನಿಷತ್ತುಗಳಿಂದಲೇ ಗ್ರಹಿಸಲ್ಪಡುವುದು ಎಂದಿದ್ದಾರೆ. ಅದನ್ನು ಯಾರೂ 'ಮಾನಸ' ಅಂದರೆ ಮನಸ್ಸಿಗೆ ಗೋಚರ ಎಂದು ಹೇಳಿಲ್ಲ.

ಈಗ ನಾವು ಚರ್ಚಿಸಬೇಕಾದ ಪ್ರಶ್ನೆ ಯಾವುದೆಂದರೆ ಬ್ರಹ್ಮಸಾಕ್ಷಾತ್ಕಾರದಲ್ಲಿ ಮನಸ್ಸಿನ ಪಾತ್ರವೇನು? ಎಂಬುದು. ಬ್ರಹ್ಮಸಾಕ್ಷಾತ್ಕಾರದ ಪ್ರಕ್ರಿಯೆಯಲ್ಲಿ ಮೂರು

೬೬. ಆನಂದಂ ಬ್ರಹ್ಮಣೋ ವಿದ್ವಾನ್ ನ ಭಿಬೇಟಿತಿ ಕುತಶ್ಚನ । (*ತೈತ್ತಿರೀಯೋಪನಿಷತ್*, 2. 9. 1)

೬೭. ಅಥ ಸೋಽಭಯಂ ಗತೋ ಭವತಿ (*ತೈತ್ತಿರೀಯೋಪನಿಷತ್*, 2. 7. 1)

೬೮. (1) ಮನಸೈವಾನುದ್ರಷ್ಟವ್ಯಂ ನೇಹ ನಾನಾಸ್ತಿ ಕಿಂಚನ (*ಬೃಹದಾರಣ್ಯಕೋಪನಿಷತ್*, IV. 4. 10)
(2) ಮನಸೈವೇದಮಾಪ್ತವ್ಯಂ ನೇಹ ನಾನಾಸ್ತಿ ಕಿಂಚನ (*ಕಠೋಪನಿಷತ್*, II. 1. 11)

ಬೇರೆ ಬೇರೆ ಹಂತಗಳನ್ನು ಉಪನಿಷತ್ತುಗಳು ಎತ್ತಿ ತೋರಿಸುತ್ತವೆ. ಮೊದಲನೆಯದು 'ಶ್ರವಣ'. ಬ್ರಹ್ಮವನ್ನು ಅರಿತುಕೊಳ್ಳುವುದಕ್ಕಾಗಿ ಅದನ್ನು ಜಿಜ್ಞಾಸೆಗೆ ಒಳಪಡಿಸಬೇಕು ಎಂದು ಇದರಲ್ಲಿ ಆಕ್ಷಿಪ್ತವಾದ ಅರ್ಥವಿದೆ. ಅಂಥ ಶ್ರದ್ಧಾಯುತವಾದ ವಿಚಾರಣೆಯು 'ಬ್ರಹ್ಮನನ್ನು ತಿಳಿದುಕೊಳ್ಳುವುದಕ್ಕೆ ಉಪನಿಷತ್ತುಗಳು ಪ್ರಾಮಾಣಿಕವಾದ ಸಾಧನಗಳಲ್ಲ' ಎಂಬ ತಪ್ಪುತಿಳಿವಳಿಕೆಯನ್ನು ಕಿತ್ತುಹಾಕಲು ಸಾಧಕನಿಗೆ ಉಪಯುಕ್ತವಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಎಲ್ಲ ತಪ್ಪು ತಿಳಿವಳಿಕೆಗಳೂ ಅದೃಶ್ಯವಾಗುವುವು. ಮುಂದೆ ಬ್ರಹ್ಮವನ್ನು ತಪ್ಪಾಗಿ ತಿಳಿಯುವುದಕ್ಕೂ ಯಾವ ಕಾರಣ ಅಥವಾ ಸಂದರ್ಭ ಇರುವುದಿಲ್ಲ. ಮುಂದಿನ ಹಂತ ಮನನದ್ದು. ಮನನ ಎಂದರೆ ತರ್ಕದಿಂದ ಬ್ರಹ್ಮ ಜ್ಞಾನವನ್ನು ಪಡೆಯುವುದು. ಈ ಜ್ಞಾನದಿಂದ ಬ್ರಹ್ಮದ ಅಸ್ತಿತ್ವದ ಅಸಂಭಾವ್ಯತೆಯನ್ನು ತೊಡೆದುಹಾಕಬಹುದು. ಮುಂದೆ ನಿಧಿಧ್ಯಾಸನದ ಹಂತವನ್ನು ತಲುಪುತ್ತೇವೆ. ನಿಧಿಧ್ಯಾಸನವೆಂದರೆ ಮತ್ತೆ ಮತ್ತೆ ಬ್ರಹ್ಮವನ್ನು ಏಕಾಗ್ರತೆಯಿಂದ ಧ್ಯಾನಿಸುವುದು. ಈ ಸ್ಥಿತಿಯಲ್ಲಿ ಮನಸ್ಸು ಶುದ್ಧವೂ ವಿಸ್ತರಣ ಶೀಲವೂ ಆಗುತ್ತದೆ. ಆಧ್ಯಾತ್ಮಿಕ ಸಾಧಕನು ದ್ವೈತದ ಎಲ್ಲ ಭಾವನೆಯನ್ನು ಕಳೆದುಕೊಳ್ಳಲು ಇದು ನೆರವನ್ನು ನೀಡುತ್ತದೆ. ಈ ಕ್ಷಣದಲ್ಲಿ ಆಧ್ಯಾತ್ಮ ಗುರು ಗೋಚರನಾಗಿ ಮಹಾವಾಕ್ಯಗಳ ತಾತ್ಪರ್ಯವನ್ನು ವಿವರಿಸುತ್ತಾನೆ. ಸಾಧಕನ ಮನಸ್ಸು ಎಂತಹ ಪರಿವರ್ತನೆಯನ್ನು ಹೊಂದುತ್ತದೆಯೆಂದರೆ ಅವನ ಎಲ್ಲ ಅಜ್ಞಾನವನ್ನೂ ದೂರ ತೊಲಗಿಸಿ ಆನಂದವು ಚಿಮ್ಮುತ್ತದೆ. ಆಗ ಸಾಧಕ ಮೋಕ್ಷ ಅಥವಾ ಮುಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಆನಂದಮಯವಾದ ಈ ಸ್ಥಿತಿಯಲ್ಲಿ ಬ್ರಹ್ಮೈಕ್ಯವು ದೃಢವಾಗಿ ಅನುಭವಿಸಲ್ಪಟ್ಟು ಪ್ರತಿಷ್ಠಾಪಿತವಾಗುತ್ತದೆ.

ಸಂಸಾರಸ್ಥಿತಿಯಲ್ಲಿ ನಾವೇಕೆ ಬ್ರಹ್ಮದ ಸಾಕ್ಷಾತ್ ಪ್ರತ್ಯಕ್ಷವನ್ನು ಪಡೆಯಲಾರೆವು? ಏಕೆಂದರೆ ನಮ್ಮ ಇಂದ್ರಿಯಗಳೂ ಮನಸ್ಸೂ ಬಹಿರ್ಮುಖವಾಗಿ ಹೊರಗೆ ಓಡುತ್ತಿರುತ್ತವೆ. ಆದರೆ ಅವನ್ನು ಒಳಕ್ಕೆ, ಅಂತರ್ಮುಖವಾಗಿ ತಿರುಗಿಸಿದಾಗ ವ್ಯಕ್ತಿಯು ಕೂಡಲೇ ಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವಿದೆ. ಹೀಗೆ ಇಂದ್ರಿಯಗಳ ಮತ್ತು ಮನಸ್ಸಿನ ದಿಕ್ಪರಿವರ್ತನೆಯು ನಿಧಿಧ್ಯಾಸನದ ಅಭ್ಯಾಸದಿಂದ ಬ್ರಹ್ಮಾನುಭವವನ್ನು ದ್ವೈತಭಾವನೆಯು ಎಲ್ಲ ಪರಿಕಲ್ಪನೆಗಳ ವಿನಾಶನದ ಮೂಲಕ ತಂದುಕೊಡುತ್ತದೆ. ಎಲ್ಲ ದ್ವೈತಗಳು ಅದೃಶ್ಯವಾದ ಮೇಲೆ ಮಹಾ ವಾಕ್ಯಗಳು ಬ್ರಹ್ಮ ಸಾಕ್ಷಾತ್ಕಾರವನ್ನು ಸುಲಭವಾಗಿ ಉಂಟುಮಾಡುತ್ತವೆ. ಇದರ ಪರಿಣಾಮವಾಗಿ, ಅವಿದ್ಯೆಯೂ ಭ್ರಾಂತಿಗಳೂ ಅದೃಶ್ಯವಾಗುತ್ತವೆ. ಆಗ ಆತ್ಮವು ಪರಿಪೂರ್ಣಾನಂದದಲ್ಲಿ ದೃಢವಾಗಿ ನೆಲೆಗೊಳ್ಳುತ್ತದೆ. ಇದು ಶಂಕರಾಚಾರ್ಯರ ವಾಕ್ಯವೃತ್ತಿಯಲ್ಲಿ[೬೯] ತುಂಬ ಚೆನ್ನಾಗಿ ವಿಶದೀಕೃತವಾಗಿದೆ. ಇಲ್ಲಿ ನಾವು ಸ್ಪಷ್ಟವಾಗಿ

೬೯. ವಾಕ್ಯವೃತ್ತಿಃ 39-41ಪ್ರತ್ಯಗ್ ಬೋಧೋ ಯ ಆಭಾತಿ ಸೋಽದ್ವಯಾನಂದ ಲಕ್ಷಣ। ಅದ್ವಯಾನಂದರೂಪಶ್ಚ

ಆತ್ಮನೇ ಪರಮಾತ್ಮ, ಪರಮಾತ್ಮನೇ ಆತ್ಮ ಎಂಬುದನ್ನರಿತುಕೊಳ್ಳುತ್ತೇವೆ. ಹೀಗೆ ಪರಸ್ಪರ ಅಭೇದವು ಗೋಚರವಾದಾಗ 'ಆತ್ಮವು ಬ್ರಹ್ಮನಿಗಿಂತ ಭಿನ್ನ' ಎಂಬ ಭ್ರಾಂತಿಯು ದೃಶ್ಯವಾಗುತ್ತದೆ. ಆತ್ಮ ಮತ್ತು ಬ್ರಹ್ಮರ ಮಧ್ಯೆ ಇದ್ದ ದೂರವು ಇಲ್ಲವಾಗುತ್ತದೆ. ಈ ಸ್ಥಿತಿಯಲ್ಲೇ ಆತ್ಮವು ಪರಮಾನಂದದಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಆಚಾರ್ಯ ಶಂಕರರ ಬೃಹದಾರಣ್ಯಕ ಭಾಷ್ಯದ ಮೇಲೆ ಸುರೇಶ್ವರರು ರಚಿಸಿರುವ ಸಂಬಂಧವಾರ್ತ್ತಿಕದಲ್ಲಿ ಈ ವಿಷಯವು ಹೆಚ್ಚು ಸ್ಪಷ್ಟೀಕರಿಸಲ್ಪಟ್ಟಿದೆ.[೨೦] ಬ್ರಹ್ಮಕ್ಕಿಂತ ಭಿನ್ನವಾದುದು ಆತ್ಮವಲ್ಲ, ಆತ್ಮಕ್ಕಿಂತ ಭಿನ್ನವಾದುದು ಬ್ರಹ್ಮವಲ್ಲ ಎಂದು ಇಲ್ಲಿ ಒತ್ತಿ ಹೇಳಿದ್ದಾರೆ. ನೀಲಿಬಣ್ಣ ಮತ್ತು ನೈದಿಲೆಗಳ ಅಭೇದಕ್ಕಿಂತ ಈ ಅಭೇದವು ಬೇರೆ, ಏಕೆಂದರೆ ನೀಲಿಬಣ್ಣವು ನೈದಿಲೆಯಲ್ಲಿದೆ. ಅಲ್ಲದೆ, ಪರಮಾತ್ಮನೇ ಆತ್ಮವಾದರೂ ಅವನು ಅವಿದ್ಯೆಯ ಕಾರಣದಿಂದ ಅತಿ ದೂರದಲ್ಲಿದ್ದಂತೆ ಕಾಣಿಸುತ್ತಾನೆ. ಅದೇ ರೀತಿ ಆತ್ಮವು ಬ್ರಹ್ಮಕ್ಕಿಂತ ಅಭಿನ್ನವಾದರೂ, ಅವಿದ್ಯೆಯ ಕಾರಣದಿಂದ ಅದು ದ್ವೈತದ ಭಾವನೆಗೆ ಒಳಗಾಗುತ್ತದೆ.

ಹಾಗಾದರೆ ಈ ಬ್ರಹ್ಮ ಎಂದರೆ ಏನು? ಶ್ರುತಿಗಳು ಹೇಳುವಂತೆ ಸತ್ಯ, ಚೈತನ್ಯ ಮತ್ತು ಅನಂತತೆಗಳು ಬ್ರಹ್ಮನ ಲಕ್ಷಣದ ಅವಯವಗಳು. 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಉಪನಿಷದ್ವಾಕ್ಯದಲ್ಲಿ ಇದು ಅಡಕಗೊಂಡಿದೆ. ಈ ಲಕ್ಷಣವು ಪರಬ್ರಹ್ಮವನ್ನು ಇತರ ಎಲ್ಲ ವಸ್ತುಗಳಿಗಿಂತ ಬೇರೆಯಾಗಿ ತೋರಿಸುತ್ತದೆ. ಇಲ್ಲಿ ಸತ್ಯ, ಜ್ಞಾನ, ಅನಂತತ್ವಗಳು, 'ನೈದಿಲೆ ನೀಲಿಬಣ್ಣದ್ದು, ದೊಡ್ಡದು, ಪರಿಮಳವನ್ನುಳ್ಳದ್ದು' ಎಂಬ ವಾಕ್ಯದಲ್ಲಿ ನೀಲ, ದೊಡ್ಡ, ಪರಿಮಳವುಳ್ಳ ಎಂಬುವುಗಳಂತೆ ವಿಶೇಷಣಗಳಲ್ಲ. ಸತ್ಯಂ, ಜ್ಞಾನಂ, ಅನಂತಂ ಎಂಬ ಪದಗಳು ಬ್ರಹ್ಮನೊಡನೆ ಸಾಕ್ಷಾತ್ ಸಂಬಂಧವನ್ನು ಹೊಂದಿವೆ. ಅವುಗಳನ್ನು ವಿಶೇಷಣಗಳೆಂದು ತಿಳಿಯಬಾರದು. ಅವು ಬ್ರಹ್ಮನ ಲಕ್ಷಣಘಟಕಗಳೆಂದು ತಿಳಿದುಕೊಳ್ಳಬೇಕು. ವಿಶೇಷಣವು ಲಕ್ಷಣಕ್ಕಿಂತ ಭಿನ್ನ ಇವೆರಡನ್ನು ಸ್ಪಷ್ಟವಾಗಿ ಪೃಥಕ್ಕರಿಸಬಹುದು (ಬೇರೆ ಬೇರೆ ಎಂದು ಗುರುತಿಸಬಹುದು) ವಿಶೇಷಣವು ವಿಶೇಷದ ಜಾತಿಯ ಅಥವಾ ವರ್ಗದ ಇತರರನ್ನು ಬೇರೆಯೆಂದು ಸೂಚಿಸುತ್ತದೆ. ಉದಾಹರಣೆಗೆ, ವಿಶೇಷಣದ ನಿದರ್ಶನಕ್ಕೆಂದು ಮೇಲೆ ಕೊಟ್ಟಿದ್ದ ವಾಕ್ಯದಲ್ಲಿ ನೀಲಿ ಎಂಬ ಪದವು ನೀಲಿ ನೈದಿಲೆಯನ್ನು ಇತರ ನೈದಿಲೆಗಳಿಂದ ಬೇರ್ಪಡಿಸಿ ತೋರಿಸುತ್ತದೆ. ಆದರೆ ಲಕ್ಷಣದ

ಪ್ರತ್ಯಗ್ ಭೋಧೈಕಲಕ್ಷಣಃ। ಇತ್ಥಮ ಸ್ಯೋನ್ಯತಾದಾತ್ಮ ಪ್ರತಿ ಪತ್ತಿ ರ್ಯದಾ ಭವೇತ್।ಅಬ್ರಹ್ಮತ್ವಂ ತ್ವಮರ್ಥಸ್ಯ ವ್ಯಾವರ್ತೇತ ತದೈವ ಹಿ।। ತದರ್ಥ ಸ್ಯ ಚ ಪಾರೋಕ್ಷ್ಯಂ ಯದ್ಯೇವಂ ಕಿಂ ತತಃ ಶೃಣು।, ಪೂರ್ಣಾನಂದೈಕರೋಪೇಣ ಪ್ರತ್ಯಗ್ ಬೋದೋಽವತಿಷ್ಠತೇ

೨೦. ಸುರೇಶ್ವರ *ಬೃಹದಾರಣ್ಯಕ ಸಂಬಂಧವಾರ್ತಿಕ*, 909.

ವಿಷಯವು ಹಾಗಲ್ಲ. ಲಕ್ಷಣವು ಲಕ್ಷ್ಯವನ್ನು ಅದರ ಜಾತಿಯ ಅಥವಾ ವರ್ಗದ ಪದಾರ್ಥಗಳಿಂದಲೂ, ಬೇರೆ ಜಾತಿಯ ಅಥವಾ ವರ್ಗದ ಪದಾರ್ಥಗಳಿಂದಲೂ ಭಿನ್ನವಾಗಿ ತೋರಿಸುತ್ತದೆ. ಹೇಗೆಂದರೆ 'ಅವಕಾಶದಾತೃ ಆಕಾಶಮ್' (ಎಲ್ಲ ಪದಾರ್ಥಗಳಿಗೂ ಅವಕಾಶವನ್ನು ನೀಡುವುದು ಆಕಾಶ) ಎಂದು ಲಕ್ಷಣವನ್ನು ಹೇಳಿದಾಗ ಆಕಾಶವು ಸಜಾತೀಯ ವಿಜಾತೀಯ ಎಲ್ಲ ಇತರ ವಸ್ತುಗಳಿಂದ ಭಿನ್ನವಾದುದೆಂಬುದನ್ನು ಅದು ತೋರಿಸುತ್ತದೆ. ಅದೇ ರೀತಿಯಾಗಿ ಸತ್ಯಂ ಜ್ಞಾನಮನಂತಂ ಬ್ರಹ್ಮ ಎಂಬ ಲಕ್ಷಣವನ್ನು ಹೇಳಿದಾಗ ಅದು ಬ್ರಹ್ಮವನ್ನು ಇತರ ಸಕಲ ವಸ್ತುಗಳಿಂದ, ಎಂದರೆ ಸಗುಣಬ್ರಹ್ಮ, ಸಂಸಾರಿ ಆತ್ಮ ಮತ್ತು ಎಲ್ಲ ಜಡವಸ್ತುಗಳಿಂದ, ಬೇರೆ ಮಾಡಿ ತೋರಿಸುತ್ತದೆ. ಮೊದಲನೆಯದಾದ ಸತ್ಯಂ ಎಂಬ ಪದವು ಬ್ರಹ್ಮವು (ಪಾರಮಾರ್ಥಿಕ)ಸತ್ಯ ಎಂದು ಸೂಚಿಸುತ್ತದೆ. ಛಾಂದೋಗ್ಯೋಪನಿಷತ್ತು[೨೧] ಬ್ರಹ್ಮವೊಂದೇ ಸತ್ಯ, ಉಳಿದೆಲ್ಲ ಅದರ ವಿಕಾರಗಳು(ಅಭಿವ್ಯಕ್ತಿಗಳು) ಎಂದು ಅಭಿಪ್ರಾಯಪಡುತ್ತದೆ. ಉಪನಿಷತ್ತಿನಲ್ಲಿ ಕೊಟ್ಟಿರುವ ಒಂದು ದೃಷ್ಟಾಂತದಲ್ಲಿ, ಮಣ್ಣು ಮಾತ್ರ ಸತ್ಯ. ಅದರಿಂದ ಮಾಡಿದ ವಿಕಾರಗಳು ಅಥವಾ ಅಭಿವ್ಯಕ್ತ ವಸ್ತುಗಳು- ಕೊಡ ಮುಂತಾದವು- ಅಸತ್ಯ. ಹಾಗೆಯೇ ಬ್ರಹ್ಮವು ಸತ್ಯ, ಅದರ ಅಭಿವ್ಯಕ್ತಿಗಳು ಅಸತ್ಯ. ಬ್ರಹ್ಮವನ್ನು 'ಸತ್ಯ' ಎಂದು ಲಕ್ಷಿಸಿರುವುದರಿಂದ ಶ್ರುತಿಯು ಪರಬ್ರಹ್ಮದ ಒಂದು ವಿಶೇಷವನ್ನು ತಿಳಿಸುತ್ತಿದೆ, ಅಸತ್ಯವಾದ ಇತರ ಎಲ್ಲವುಗಳಿಂದ ಅದು ಬ್ರಹ್ಮವನ್ನು ಪೃಥಕ್ಕರಿಸುತ್ತದೆ.

ಈಗ ಎರಡನೆಯದಾದ ಜ್ಞಾನಂ(ಚೈತನ್ಯ) ಎಂಬ ವಿಶೇಷಣವನ್ನು ನೋಡೋಣ. ಬ್ರಹ್ಮನಿಗೆ ಕೊಟ್ಟಿರುವ ಈ ವಿಶೇಷಣವನ್ನು ಶ್ರುತಿಗಳಲ್ಲಿ ಹಲವು ಬಾರಿ ಉಪಪಾದಿಸಲಾಗಿದೆ.[೨೨] ಇದು ಬ್ರಹ್ಮದ ವಿಶಿಷ್ಟ ರೂಪವನ್ನು ತೋರಿಸಿ ಇತರ ಎಲ್ಲ ಜಡಪದಾರ್ಥಗಳಿಂದ ಅದನ್ನು ಬೇರೆಯಾಗಿ ತೋರಿಸುತ್ತದೆ.

ಮೂರನೆಯ ವಿಶೇಷಣವು ಬ್ರಹ್ಮವು ಅನಂತವೆಂದು ಹೇಳುತ್ತದೆ. ಮುಂಡಕೋಪನಿಷತ್ತಿನಲ್ಲಿ ಬ್ರಹ್ಮದ ಅನಂತತೆಯೂ ಸುಂದರವಾಗಿ ಹಾಗೂ ಕಾವ್ಯಮಯವಾಗಿ ಬಣ್ಣಿಸಲ್ಪಟ್ಟಿದೆ. "ಅದು ಹಿಂದೆ ಮತ್ತು ಮುಂದೆ ಇದೆ; ಅದು ಬಲಗಡೆಯೂ ಎಡಗಡೆಯೂ ಇದೆ; ಅದು ಮೇಲೂ ಕೆಳಗೂ ವ್ಯಾಪಿಸಿದೆ" ಎಂದು

೨೧. ಯಥಾ ಸೌಮ್ಯೈಕೇನ ಮೃತ್ಪಿಂಡೇನ ಸರ್ವಂ ಮೃಣ್ಮಯಂ ವಿಜ್ಞಾತಂ ಸ್ಯಾತ್, ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ಯೇವ ಸತ್ಯಮ್(ಛಾಂದೋಗ್ಯೋಪನಿಷತ್ 6. 1. 4)

೨೨. (೧) ವಿಜ್ಞಾನಮಾನಂದಂ ಬ್ರಹ್ಮ (ಬೃಹದಾರಣ್ಯಕೋಪನಿಷತ್III. 9. 27)
(೨) ಚೇತನ ಶ್ಚೇತನಾನಾಮ್ (ಕಠೋಪನಿಷತ್5. 13)
(೩) ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ (ಶ್ವೇತಾಶ್ವತರ VI.11)

ಅಲ್ಲಿ ಹೇಳಲಾಗಿದೆ. ಬೇರೆ ಶ್ರುತಿಗಳೂ[೭೩] ಈ ವಿಚಾರವನ್ನು ಹೇಳುತ್ತವೆ. ಬ್ರಹ್ಮ ಲಕ್ಷಣದಲ್ಲಿ ಕೊಟ್ಟಿರುವ 'ಅನಂತ' ಎಂಬ ಅಂಶವು ಬ್ರಹ್ಮವನ್ನು ಎಲ್ಲ ಪರಿಮಿತ ಪದಾರ್ಥಗಳಿಂದ ಬೇರೆ ಮಾಡಿ ತೋರಿಸುತ್ತದೆ. ಹೀಗೆ ಮೇಲೆ ಹೇಳಿದ ಲಕ್ಷಣವು ಬ್ರಹ್ಮವನ್ನು ಎಲ್ಲ ಅಸತ್ಯತೆ, ಜಡತ್ವ ಮತ್ತು ಪರಿಮಿತ ತತ್ವಗಳಿಂದ ಪೃಥಕ್ಕರಿಸುತ್ತದೆ.

ಶಂಕರರು ತಮ್ಮ ಸೂತ್ರಭಾಷ್ಯದಲ್ಲಿ[೭೪] ಬ್ರಹ್ಮವನ್ನು ವಿವರಿಸುತ್ತಾರೆ. ಮೊದಲನೆಯದಾಗಿ ಆತ್ಮದ ಅಸ್ತಿತ್ವ ಎಲ್ಲರಿಗೂ ಗೊತ್ತಿದೆ ಎಂದು ಅವರು ಪ್ರತಿಪಾದಿಸುತ್ತಾರೆ- ಈ ವಿಷಯದಲ್ಲಿ ಯಾರಿಗೂ ಸಂದೇಹವಿಲ್ಲ. ಆತ್ಮದ ಅಸ್ತಿತ್ವ ಗೊತ್ತಿಲ್ಲದಿದ್ದರೆ, ಯಾರಿಗೂ 'ಅವನು ಇದ್ದಾನೆ' ಎಂಬುದು ತಿಳಿಯುತ್ತಿರಲಿಲ್ಲ. ಅಥವಾ ಎಲ್ಲರೂ 'ಅವನು ಇಲ್ಲ' ಎಂದು ಜ್ಞಾನವನ್ನು ಪಡೆದಿರುತ್ತಿದ್ದರು. ಇದರಿಂದ ನಿಷ್ಪನ್ನವಾಗುವುದೇನೆಂದರೆ-ಬ್ರಹ್ಮ ಎಲ್ಲರಿಗೂ ಗೊತ್ತು ಎಂಬುದು. ಏಕೆಂದರೆ ಮಾಂಡೂಕ್ಯೋಪನಿಷತ್ತು ತಿಳಿಸುವಂತೆ ಆತ್ಮವೇ ಬ್ರಹ್ಮ.[೭೫] ಮತ್ತೆ ತನ್ನ ಬುದ್ಧಿಯಲ್ಲಿ ಬ್ರಹ್ಮನು ಇರುವನೆಂದು, ಅಥವಾ ಹೃದಯದಲ್ಲಿ ನೆಲೆಗೊಂಡಿರುವನೆಂದು ಯಾವ ವ್ಯಕ್ತಿಯು ಸಾಕ್ಷಾತ್ಕಾರಿಸಿಕೊಳ್ಳುವನೋ, ಅವನ ಎಲ್ಲ ಆಶೆಗಳೂ ಈಡೇರುವುವು ಮತ್ತು ಅವನೇ ಬ್ರಹ್ಮವಾಗುವನು. ಛಾಂದೋಗ್ಯೋಪನಿಷತ್ತೂ ಈ ವಿಚಾರವನ್ನು ಸಮರ್ಥಿಸುತ್ತದೆ ಮತ್ತು ಬ್ರಹ್ಮವು ಪೂರ್ಣ ಮತ್ತು ಪ್ರವೃತ್ತಿ ರಹಿತ (ನಿಷ್ಕ್ರಿಯ) ಎಂದು ಘೋಷಿಸುತ್ತದೆ.[೭೬] ಶಂಕರಾಚಾರ್ಯರಿಂದ ನಾವು ತಿಳಿಯುವ ಇನ್ನೊಂದು ವಿಷಯವೇನೆಂದರೆ ಹೃದಯದ ಗುಹೆಯಲ್ಲಿ ಬುದ್ಧಿ ನೆಲೆಸಿದೆ, ಅದು ನಮ್ಮ ಅರಿವಿಗೆ ನೆರವನ್ನು ನೀಡುತ್ತದೆ ಎಂಬುದು. ಆದ್ದರಿಂದ ನಮ್ಮ ಒಳಗಿರುವ ಬ್ರಹ್ಮವು ಬುದ್ಧಿಯ ಸಾಹಾಯಕದಿಂದ ಸಾಕ್ಷಾತ್ ಕೃತವಾಗುತ್ತದೆ. ಯಾವಾಗಲೂ ಇರುವ ನಿರ್ಗುಣಬ್ರಹ್ಮವನ್ನು ಅರಿಯಲು ಇದೊಂದೇ ದಾರಿ.

ಹೇಗೆ ಬ್ರಹ್ಮವನ್ನು ವರ್ಣಿಸಿದ್ದಾರೆ. ಮತ್ತು ಲಕ್ಷಿಸಿದ್ದಾರೆ, ಸಾಧಕನ ನಿಯಮಪಾಲಕವಾದ ಮನಸ್ಸು ಬ್ರಹ್ಮವನ್ನು ಹೇಗೆ ಪೂರ್ಣವಾಗಿ ಅರಿತುಕೊಳ್ಳುತ್ತದೆ ಎಂಬುದನ್ನು ನಾವು ನೋಡಿದೆವು. ಒಟ್ಟಿನಲ್ಲಿ ಹೇಳಬೇಕೆಂದರೆ, ವೇದದ ಮಹಾವಾಕ್ಯಗಳು ಆತ್ಮ-ಬ್ರಹ್ಮರ ಐಕ್ಯವನ್ನು ಘೋಷಿಸುತ್ತವೆ, 'ತತ್' 'ತ್ವಮ್' ಎಂಬವುಗಳ ಏಕತೆಯನ್ನು ಅವು ಹೇಳುತ್ತವೆ. ಬ್ರಹ್ಮವನ್ನು ಧ್ಯಾನಿಸಬೇಕು, ಮನನ

೭೩. ಅನಂತ ಇತ್ಯೇನದುಪಾಸೀತ। (*ಬೃಹದಾರಣ್ಯಕೋಪನಿಷತ್* IV. 1. 5)

೭೪. *ವೇದಾಂತ ಸೂತ್ರ ಭಾಷ್ಯ.* ಪು.8

೭೫. ಅಯಮಾತ್ಮಾ ಬ್ರಹ್ಮ (*ಮಾಂಡೋಕ್ಯ*:2)

೭೬. ಯೋ ವೈ ಸೋಽ ಆಕಾಶಃ ತಃ ಪುರುಷ ತದೇತತ್ ಪೂರ್ಣಮಪ್ರವರ್ತಿ ಆಕಾಶಃ ಅಯಂ ವಾವಸ ಯೋಽಯಮಂತ ಹೃದಯ (*ಛಾಂದೋಗ್ಯ ಉಪನಿಷತ್*,3-12, 7 ಮತ್ತು9)

ಮಾಡಬೇಕು ಮತ್ತು ಸಾಕ್ಷಾತ್ಕಾರಿಸಿಕೊಳ್ಳಬೇಕು. ಇದನ್ನು ಸಾಧಿಸಲು ನಿಯಮಪಾಲನಾ ಪೂರ್ವಕವಾದ ಅಧ್ಯಯನವನ್ನು ವಿಧಿಸಲಾಗಿದೆ. ಈ ಅಧ್ಯಯನವು ಸಾಧಕನನ್ನು ಜ್ಞಾತದಿಂದ ಅಜ್ಞಾತದ ಕಡೆಗೆ ಒಯ್ಯುತ್ತದೆ. ಈ ಪಾರಮಾರ್ಥಿಕ ಜ್ಞಾನವನ್ನು ಬ್ರಹ್ಮವಿದ್ಯಾ ಎನ್ನುತ್ತಾರೆ. ಆತ್ಮ ಮತ್ತು ಬ್ರಹ್ಮರ ಮಧ್ಯೆ ಇರುವ ಅದ್ವೈತವನ್ನು ವೇದಾಂತವು ಬೋಧಿಸುತ್ತದೆ. ಇತರ ಎಲ್ಲ ವಸ್ತುಗಳಿಂದ ಬ್ರಹ್ಮವನ್ನು ಪೃಥಕ್ಕರಿಸಿ ತಿಳಿಸಲು ಬ್ರಹ್ಮದ ಲಕ್ಷಣವನ್ನು ಹೇಳಿದ್ದಾರೆ. ಅದರ ಏಕಮಾತ್ರತ್ವವನ್ನು 'ಸತ್ಯಂ ಜ್ಞಾನಮನಂತಂ ಬ್ರಹ್ಮ' ಎಂಬ ಲಕ್ಷಣದಲ್ಲಿ ಪ್ರತಿಪಾದಿಸಲಾಗಿದೆ. ಬ್ರಹ್ಮ ಸಾಕ್ಷಾತ್ಕಾರವಾದ ಕೂಡಲೇ ಬ್ರಹ್ಮಾನ್ವೇಷಣೆ (ಬ್ರಹ್ಮವೇನೆಂಬ ಹುಡುಕಾಟ) ಮುಗಿಯುತ್ತದೆ; ಸಾಧಕನು ಬ್ರಹ್ಮವೇ ಆಗಿಬಿಡುತ್ತಾನೆ. ಸುರೇಶ್ವರಾಚಾರ್ಯರು ತೈತ್ತಿರೀಯೋಪನಿಷದ್ ಭಾಷ್ಯದ ಮೇಲೆ ಬರೆದಿರುವ ವಾರ್ತಿಕದಲ್ಲಿ ಬ್ರಹ್ಮದ ಸ್ವಭಾವವನ್ನು ವಿವರಿಸುತ್ತಾ ಹೀಗೆ ಬರೆದಿದ್ದಾರೆ. "ಆಕಾಶ- ಕಾಲಗಳನ್ನು ಬ್ರಹ್ಮವೇ ಸೃಷ್ಟಿಸಿತು. ಬ್ರಹ್ಮವೇ ಎಲ್ಲರ ಆತ್ಮ. ಬ್ರಹ್ಮೇತರವಾದ ಸಕಲವೂ ಮಿಥ್ಯೆ. ಆದ್ದರಿಂದ ಬ್ರಹ್ಮವು ಕಾಲ, ಆಕಾಶ ಮತ್ತು ಪದಾರ್ಥಗಳಿಂದ ಪರಿಮಿತವಲ್ಲ."[೭೭]

ಆದ್ದರಿಂದ ನಾವು ಈಗ ಸರ್ವೇಕ್ಷಣದ ಕೊನೆಗೆ ಬಂದಿದ್ದೇವೆ. ಜೀವನು ಬ್ರಹ್ಮಕ್ಕಿಂತ ಬೇರೆಯಲ್ಲ ಎಂದು ಶ್ರುತಿಗಳು ಘೋಷಿಸುತ್ತವೆ. ಆ ಐಕ್ಯವನ್ನು ಪ್ರತಿಷ್ಠಾಪಿಸಲು ಅವು ಹೆಜ್ಜೆಹೆಜ್ಜೆಯಾಗಿ ಮುಂದುವರಿಯುತ್ತವೆ. ಜೀವ ಬ್ರಹ್ಮೈಕ್ಯವೇ ಈ ಜಗತ್ತಿನಲ್ಲಿ ಎಲ್ಲರಿಗೆ ಅಂತಿಮಾಶ್ರಯ. ಬ್ರಹ್ಮ ಸಾಕ್ಷಾತ್ಕಾರಕ್ಕಾಗಿ ಮಾಡುವ ಸರ್ವ ಪ್ರಯತ್ನ 'ಇದೆಲ್ಲ ಸತ್ಯವಾದ ಜ್ಞಾನ, ಇದು ಉಪನಿಷತ್ತು' ಎಂಬ ದೃಢಪ್ರತಿಪಾದನೆಯೊಂದಿಗೆ ಮುಕ್ತಾಯವನ್ನು ಹೊಂದುತ್ತದೆ.

ಆತ್ಮ-ಬ್ರಹ್ಮರ ಯೋಗವು (ಅಥವಾ ಐಕ್ಯವು) ಒಂದು ಮಾತುಗಳಿಂದ ಹೇಳಲಾಗದ ಅನಿರ್ವಾಚನೀಯ ಅನುಭವ. ಅದನ್ನು ಶಬ್ದಗಳು ವಿವರಿಸಲಾರವು. ಅದನ್ನು ವರ್ಣಿಸಲು ಪ್ರಯತ್ನವನ್ನು ಮಾಡಿದರೆ ಆಗ ಕಾವ್ಯದ ಭಾಷೆಯನ್ನು(ರೂಪಕ ಪರಿಭಾಷೆಯನ್ನು) ಬಳಸಲೇಬೇಕಾಗುತ್ತದೆ. ಋಷಿಗಳೂ ಹಾಗೇ ಮಾಡಬೇಕಾಯಿತು. ಅವರ ಪಾಡಿಗೆ ಅವರನ್ನು ಬಿಟ್ಟಿದ್ದರೆ ಅವರು ಮೌನವನ್ನೇ ಆಶ್ರಯಿಸುತ್ತಿದ್ದರು, ಎಂದರೆ ನಿಯತವಾಗಿ ಹೇಳಬೇಕೆಂದರೆ ಮುನಿಗಳೇ ಆಗಿರುತ್ತಿದ್ದರು. ಆದರೆ ಬೆಳಕನ್ನು ಅರಸಿ ಮಾರ್ಗದರ್ಶನವನ್ನು ಅಪೇಕ್ಷಿಸಿ ಅವರ ಬಳಿಗೆ ಬಂದವರಿಗೆ ಶಿಕ್ಷಣವನ್ನು ನೀಡುವಾಗ ಅವರು ಶಬ್ದಗಳನ್ನು ಬಳಸಲೇಬೇಕಾಯಿತು. ಅದಿಲ್ಲದಿದ್ದರೆ ಅವರು ಮೌನವ್ರತವನ್ನೇ ಆಶ್ರಯಿಸುತ್ತಿದ್ದರು.

೭೭. ತೈತ್ತಿರೀಯೋಪನಿಷದ್ ಭಾಷ್ಯದ ಮೇಲೆ ಸುರೇಶ್ವರಾಚಾರ್ಯರ ವಾರ್ತಿಕ, ಬ್ರಹ್ಮವಲ್ಲಿ, 134, 135.

ಮೋಕ್ಷವು ಜೀವಾತ್ಮನಲ್ಲಿ ಸ್ವತಃ ಸಹಜವಾಗಿ ಇದೆ. ಒಳಗಿನ ಆತ್ಮ ಮತ್ತು ಬ್ರಹ್ಮ- ಇವರ ತಾದಾತ್ಮ್ಯದ ಸತ್ಯವು ಮನಸ್ಸಿಗೆ ಗೋಚರವಾದರೆ ಮೋಕ್ಷವು ಸಿದ್ಧಿಸುತ್ತದೆ. ಮನುಷ್ಯನು (ಜೀವಾತ್ಮನು) ಸದಾ ಮುಕ್ತನೇ ಆದರೂ ಅವಿದ್ಯೆಯಿಂದ ತಾನು ಬದ್ಧನೆಂದು ಅವನು ಭಾವಿಸುತ್ತಾನೆ. ಅವನು ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಂಡಾಗ ಮೋಕ್ಷಸಿದ್ಧಿಯಾಗುವುದೆಂದು ಶ್ರುತಿಗಳು ಪಾಠವನ್ನು ಕಲಿಸುತ್ತವೆ. ಆತ್ಮನು ಬ್ರಹ್ಮನಲ್ಲಿ ವಿಲೀನಗೊಳ್ಳುವುದು ಬ್ರಹ್ಮಸಾಕ್ಷಾತ್ಕರದ ವಿಶಿಷ್ಟ ಲಕ್ಷಣ ಎಂದು ಹೇಳಿ ಆಚಾರ್ಯ ಶಂಕರರು ಅದನ್ನು ಅವಿಶೇಷಾತ್ಮಭಾವ ಎಂದು ಕರೆದಿದ್ದಾರೆ. ಪರಮಾನಂದದ ಮೋಕ್ಷಸ್ಥಿತಿಯನ್ನು ಮುಂಡಕೋಪನಿಷತ್ತು[೭೮] ಸುಂದರವಾಗಿ ವರ್ಣಿಸಿ ಸಮುದ್ರವನ್ನು ನದಿಗಳು ಸೇರಿದಾಗ ತಮ್ಮ ಹೆಸರುಗಳನ್ನೂ ರೂಪಗಳನ್ನೂ ಬಿಟ್ಟು ಒಂದಾಗುವಂತೆ ಬ್ರಹ್ಮಜ್ಞಾನಿಯು ನಾಮರೂಪಗಳನ್ನು ತ್ಯಜಿಸಿ ಪರಬ್ರಹ್ಮದಲ್ಲಿ ಒಂದಾಗುತ್ತಾನೆ ಎಂದು ಹೇಳುತ್ತದೆ.

ಈ ದಿವ್ಯದರ್ಶನವನ್ನು ಅನಾವರಣಗೊಳಿಸಿದ ಮಹರ್ಷಿಗಳಿಗೆ ಪ್ರಣಾಮಗಳನ್ನರ್ಪಿಸಿ ಈ ಉಪನ್ಯಾಸವನ್ನು ಮುಗಿಸುತ್ತೇನೆ.

ನಮಃ ಪರಮ ಋಷಿಭ್ಯೋ ನಮಃ ಪರಮಋಷಿಭ್ಯಃ ।

* * * *

೭೮. ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇ ಅಸ್ತಂ ಗಚ್ಛಂತಿ ನಾಮರೂಪೇ ವಿಹಾಯ। ತಥಾ ವಿದ್ವಾನ್ ನಾಮ ರೂಪಾದ್ ವಿಮುಕ್ತಃ ಪರಾತ್ಪರಂ ಪುರುಷ ಮುಪೈತಿ ದಿವ್ಯಮ್॥ (ಮುಂಡಕೋಪನಿಷತ್ 3.2. 8.)